
ಸೆಪ್ಟೆಂಬರ್ 1999



ನಮ್ಮ ಪ್ರೀತಿಯ ಮ್ಯಾಸ್ಟ್ರು

ಕಾಮ್ರೇಡ್
ಸಾಗರಕ್ಕಿದ್ದ ಅರ್ಥವನ್ನು
ನೀವು ಬದಲಿಸಿದಿರಿ
ಬಂದವರನ್ನು ಕರೆದೊಯ್ದಿರಿ
ಒಲ್ಲೆಯೆಂದವರಿಗೂ ಕಾದು
ಹೆಗಲ ಮೇಲೆ ಕೈ ಹಾಕಿ
ಜೊತೆ ಜೊತೆಗೆ ನಡೆಯುದ್ದಕ್ಕೂ ಕರೆದೊಯ್ದಿರಿ
ಲಾಲ್ ಸಲಾಂ ಕಾಮ್ರೇಡ್

ಬೆಲೆ
ರೂ. 3.00

ಮಾತಾಡುವುದು ಮುಗಿದಿತ್ತು ಎಂದು ಹೇಳಿದವರು ಯಾರು?

ಎಲ್ಲರೂ ಹೇಳಿದರು
ಸಮುದ್ರ ಯಾರಿಗೂ ಕಾಯುವುದಿಲ್ಲ
ಬರುವವರನ್ನು ಒಟ್ಟಿಗೇ ಕರೆದೊಯ್ಯುತ್ತದೆ
ಒಲ್ಲೆ ಎಂದವರನ್ನು ದಡಕ್ಕೆ ಎಸೆಯುತ್ತದೆ
ಆದರೆ ನೀವು ಕಾಮ್ರೇಡ್,
ಸಾಗರಕ್ಕಿದ್ದ ಅರ್ಥವನ್ನು ಬದಲಿಸಿದಿರಿ
ಬಂದವರನ್ನೂ ಕರೆದೊಯ್ದಿರಿ
ಒಲ್ಲೆ ಎಂದವರಿಗೂ ಕಾದು
ಜೊತೆ ಜೊತೆಗೇ
ಸಮುದ್ರ ನಡೆದ ಉದ್ದಕ್ಕೂ ಕರೆದೊಯ್ದಿರಿ

ಎಷ್ಟು ಜನ ಕಣ್ಣೀರು ಒರೆಸಿಕೊಂಡರು
ಕಾಮ್ರೇಡ್ ನೀವು ಹೆಗಲ ಕೈಹಾಕಿದಾಗ
ಎಷ್ಟು ಜನ ಬಿಕ್ಕಿದರು
ಇಷ್ಟು ದಿನ ಯಾರಿಗೂ ಹೇಳಲಾಗದೆ
ಉಳಿಸಿಕೊಂಡ ಮಾತುಗಳನ್ನು
ನಿಮ್ಮ ಮುಂದೆ ಸುರಿದು

ಪ್ರತಿಯೊಬ್ಬರ ಎದೆಗೂ ಒಂದು
ಕದವಿರುತ್ತದೆ ಎಂದು ಹೇಗೆ ಕಂಡುಕೊಂಡಿರಿ
ನೀವು
ಯಾರಿಗೂ ಹೇಳದೆ ಬಂದುಬಿಟ್ಟಿರಿ
ಬಾಗಿಲಿಗೆ
ಒಮ್ಮೆ ಬಂದ ನಿಮಗೆ ಮತ್ತೆ
ಯಾರಾದರೂ ಬಾಗಿಲು ಮುಚ್ಚಿದರೇ ಹೇಳಿ?

ಎಲ್ಲರೊಳಗೂ ಒಂದು ಹಾರುವ ರೆಕ್ಕೆಯಿದೆ
ಎಂದು ನಿಮಗೆ ತಿಳಿಸಿದವರು ಯಾರು?
ನಿಮ್ಮ ಒಂದು ನಗೆ
ಆ ರೆಕ್ಕೆಗಳಿಗೆ ಹಾರುವ ತಾಕತ್ತು ಕೊಡುತ್ತದೆ
ಎಂದು ಹೇಳಿದ್ದು ಯಾರು ?
ಎಷ್ಟೊಂದು ಹಕ್ಕಿಗಳು ಹಾರುತ್ತಿವೆ
ನೋಡಿ ಮುಗಿಲಿನಲ್ಲಿ

ಯಾರು ಹೇಳಿದರು ಕಾಮ್ರೇಡ್
ನಿಮ್ಮೊಡನೆ ಮಾತನಾಡುವುದು
ಮುಗಿದಿತ್ತು ಎಂದು?
ಯಾಕಿಷ್ಟು ಅವಸರ ಮಾಡಿದಿರಿ
ಎದೆಯ ಬಾಗಿಲು ಕಂಡವರು ನೀವು
ಕಾದು ಕುಳಿತಿದ್ದವರನ್ನು ಮರೆತಿರೇಕೆ?

ಹೌದು ಕಾಮ್ರೇಡ್,
ಇಗೋ ಇಲ್ಲಿ ನೋಡಿ
ಕುಡುಗೋಲು ಸುತ್ತಿಗೆಯ ಕೆಳಗೆ
ಎಷ್ಟೊಂದು ಜೀವಗಳು
ನಿಮಗಾಗಿ ಕಾದಿದ್ದಾವೆ
ಕಣ್ಣಲ್ಲಿ ಬೆಳಕು ಹೊತ್ತು

ಪ್ರತೀ ದಿನವೂ ಕಣ್ಣೀರು ತೊಡೆದವರು ನೀವು
ಯಾಕೆ ಹೊರಟು ಬಿಟ್ಟಿರಿ ಹೀಗೆ
ಎಲ್ಲರ ಕಣ್ಣೊಳಗೆ ನೀರು ತುಂಬಿ

- ಜಿ.ಎನ್.ಮೋಹನ್

ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ


ಸಂಪುಟ 20 ಸಂಚಿಕೆ 39-40
ಸೆಪ್ಟೆಂಬರ್ 26, 1999



ಕಾಮ್ರೇಡ್ ಪಿ.ರಾಮಚಂದ್ರ ರಾವ್ ನೆನಪಿನ ವಿಶೇಷಾಂಕ

ಸಂಪಾದಕೀಯ

‘ಮಾಸ್ಟ್ರು’ ಜೊತೆಯ ನಲ್ಮೆಯ ಒಡನಾಟ




‘ಐಕ್ಯರಂಗ’ ದ ಸಂಪಾದಕರ ಬಗ್ಗೆ ಸಂಪಾದಕೀಯ ಬರೆಯಬೇಕಾದ ದುಃಖದ ಕೆಲಸ ನನ್ನ ಪಾಲಿಗೆ ಬಂದಿದೆ. ಸುಮಾರು ೧೬ ವರ್ಷಗಳ ಕಾಲ ನಮ್ಮ ಪತ್ರಿಕೆಯ ಸಂಪಾದಕರಾಗಿದ್ದ ಕಾಂ. ರಾಮಚಂದ್ರರಾವ್‌ರವರು ಪತ್ರಿಕೆಯನ್ನು ಬೆಳೆಸಲು ಹಲವು ರೀತಿಯಲ್ಲಿ ಕಾರಣರಾಗಿದ್ದಾರೆ. ಒಂದು ಕಡೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿ ರಾಜ್ಯದಲ್ಲಿ ಕಮ್ಯುನಿಸ್ಟ್ ಚಳುವಳಿಯ ಹೊಣೆ ಹೊತ್ತು ಮತ್ತೊಂದು ಕಡೆ ಪ್ರಾಂತ ರೈತ ಸಂಘದ ಅಧ್ಯಕ್ಷರಾಗಿ ರೈತ ಚಳುವಳಿಯ ಪ್ರಧಾನ ಹೊಣೆಯನ್ನು ಹೊತ್ತ ಸಂದರ್ಭದಲ್ಲಿಯೇ ಅವರು ‘ಐಕ್ಯರಂಗ’ ದ ಸಂಪಾದಕರಾಗಿ ಪತ್ರಿಕೆಯನ್ನು ನಿರಂತರವಾಗಿ ಹೊರ ತರಲು ಶ್ರಮಿಸಿದ್ದಾರೆ. ಐಕ್ಯರಂಗದ ಬೆಳವಣಿಗೆಯ ಬಗ್ಗೆ ಎಲ್ಲ ಹೊಸ ವಿಚಾರಗಳನ್ನು ತೆರೆದ ಮನಸ್ಸಿನಿಂದ ಸ್ವಾಗತಿಸಿದ್ದಾರೆ. ಪತ್ರಿಕೆಯನ್ನು ಉತ್ತಮಗೊಳಿಸುವ - ಮಾರ್ಪಾಟುಗಳನ್ನು ಮಾಡಲು ಹುಮ್ಮಸ್ಸು ನೀಡಿ ಬೆನ್ನು ತಟ್ಟಿದ್ದಾರೆ. ಜಾಹೀರಾತು ಸಂಗ್ರಹ, ಬರವಣಿಗೆಗಳ ಮೂಲಕ ಐಕ್ಯರಂಗಕ್ಕೆ ಒಂದು ಆಧಾರವಾಗಿದ್ದ, ನಮ್ಮೊಡನೆ ಒಬ್ಬರಾಗಿ ಜೊತೆಗೂಡಿ ಕೆಲಸ ಮಾಡುತ್ತಿದ್ದ ಅವರನ್ನು ಕಳೆದುಕೊಂಡ ‘ಐಕ್ಯರಂಗ’ ತಂಡಕ್ಕೆ ಅವರ ಆತ್ಮೀಯ ಒಡನಾಟ ಚಿರವಾಗಿ ನೆನಪಿನಲ್ಲಿ ಉಳಿಯುತ್ತದೆ. ‘ಐಕ್ಯರಂಗ’ ಮತ್ತಷ್ಟು ಉತ್ತಮಗೊಳಿಸುವಲ್ಲಿ ಮತ್ತೊಂದು ಹೆಜ್ಜೆ ಹಾಕುವ ಮೂಲಕ ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಈ ಸಂಚಿಕೆ

ನಮ್ಮ ಆತ್ಮೀಯ ಒಡನಾಡಿ (ಒಡನೋದಿ ಎಂಬುದೇ ಸರಿಯಾದದ್ದು) 'ಮಾಸ್ತರ' ಬದುಕನ್ನು,ಅವರ ಆದರ್ಶಗಳನ್ನು ಎಡಪಂಥೀಯ ಹಾಗೂ ಕಮ್ಯುನಿಸ್ಟ್ ಚಳುವಳಿಯ ಚಿರಂತನ ಭಾಗವಾಗಿಸಲು 'ಐಕ್ಯರಂಗ' ಒಂದು ವಿಶೇಷಾಂಕವನ್ನು ಕಾದಿಡಬಹುದಾದ ಪುಸ್ತಕದ ರೂಪದಲ್ಲಿ ಹೊರತರಲು ತೀರ್ಮಾನಿಸಿದೆ. ದಶಕಗಟ್ಟಲೆ ಅವರೊಡನೆ ತಮ್ಮ ಬದುಕನ್ನು ಮೇಳವಿಸಿಕೊಂಡ ದ.ಕನ್ನಡ ಜಿಲ್ಲೆಯ ಸಂಗಾತಿಗಳು, ಪಕ್ಷದ ನಾಯಕರು ಇವರ ಆತ್ಮೀಯ ನೆನಪುಗಳನ್ನು, ಬಾಳಸಂಗಾತಿಯ ಅವರ ಮಕ್ಕಳ ಭಾವನೆಗಳನ್ನು, ಬದುಕಿನ ಪ್ರಧಾನ ಧಾರೆಗಳನ್ನು ಒಟ್ಟುಗೂಡಿಸಲು 'ಐಕ್ಯರಂಗ' ಶ್ರಮಿಸಿದೆ .(ಈ ಸಂಚಿಕೆಗಾಗಿ ಕಾ. ಶರತ್‌ಚಂದ್ರ ವಿಶೇಷವಾಗಿ ದುಡಿದಿದ್ದಾರೆ). ಸೀಮಿತ ಸಂಪನ್ಮೂಲ, ಮಹಾಚುನಾವಣೆಗಳ ಸಂದರ್ಭದಲ್ಲಿನ ಕಾಲಾವಕಾಶದ ಕೊರತೆ ನಡುವೆ ಬರುತ್ತಿರುವ ಈ ಸಂಚಿಕೆಯನ್ನು ತಾವು ಸ್ವಾಗತಿಸುತ್ತೀರಿ, ಅಧ್ಯಯನ ಮಾಡುತ್ತೀರಿ ಎಂದು 'ಐಕ್ಯರಂಗ' ಆಶಿಸುತ್ತದೆ.

ಮಾಸ್ತರರ ಅಗಲಿಕೆ ನನಗೆ, ನಮ್ಮ ಐಕ್ಯರಂಗ ತಂಡಕ್ಕೆ ರಾಜ್ಯದ ಸಾವಿರಾರು ಸಂಗಾತಿಗಳಿಗೆ ವೈಯಕ್ತಿಕ ನಷ್ಟವೂ ಹೌದು. ನಾನು ಪಕ್ಷದಲ್ಲಿ 'ಪೂರ್ಣಾವಧಿ ಕ್ರಾಂತಿಕಾರಿ'ಯಾಗಿ ಕಳೆದ 16 ವರ್ಷಗಳಲ್ಲಿ ಸರಿಸುಮಾರು ಪ್ರತಿದಿನವೂ ಅವರೊಡನೆ ಕಳೆದಿದ್ದೇನೆ. ನಾವು ಮಾಡಿದ ಚರ್ಚೆಗಳೆಷ್ಟು, ಆಡಿದ ಜಗಳಗಳೆಷ್ಟು, ಪಕ್ಷದ ಇತರ ಚಳುವಳಿಯ ಬೆಳವಣಿಗೆಗಾಗಿ ಹೂಡಿದ ಷಡ್ಯಂತ್ರಗಳೆಷ್ಟು ಲೆಕ್ಕವಿಲ್ಲ. ಪಕ್ಷದ ರಾಜ್ಯಘಟಕದಲ್ಲಿ ನನಗೆ ಅತ್ಯಂತ ಆತ್ಮೀಯರಾಗಿದ್ದವರು. ಮತ್ತು ಅದೇ ರೀತಿ ಈ ಅವಧಿಯಲ್ಲಿ ಅತ್ಯಂತ ಆತ್ಮೀಯನಾಗಿದ್ದವನು. ಅವರ ಪ್ರತಿಯೊಂದು ಯೋಚನೆಯ ಮಿಡಿತವನ್ನು, ದಿಕ್ಕನ್ನೂ ತಿಳಿದಿದ್ದವನು. ಕಮ್ಯುನಿಸ್ಟ್ ಚಳುವಳಿಗೆ ಆಗತಾನೆ ಅಳುಕುತ್ತಾ ಹೆಜ್ಜೆಯಿಡುತ್ತಿದ್ದ ಹಲವು ಸಂಗಾತಿಗಳಿಗೆ ಅವರು ತಮ್ಮ ಆತ್ಮೀಯತೆಯಿಂದ ಆತ್ಮವಿಶ್ವಾಸವನ್ನು ತುಂಬುತ್ತಿದ್ದ ರೀತಿಯನ್ನು ಹತ್ತಿರದಿಂದ ಕಂಡವನು. ಅವರ ಹಲವು ಗುಣಗಳ, ಸಾಮರ್ಥ್ಯಗಳ ಜೊತೆಗೇ ಅವರ ವ್ಯಕ್ತಿತ್ವದ ಹಲವು ಅರೆಕೊರೆಗಳನ್ನು ಟೀಕಿಸುತ್ತಾ ಅವರು ಇನ್ನಷ್ಟು ಉತ್ತಮ ನಾಯಕರಾಗಬೇಕೆಂದು ಬಯಸಿದ್ದವನು. ಇಂಥ ಹಿನ್ನೆಲೆಯಲ್ಲಿ ನನಗೆ ಅವರ ಹಠಾತ್ ಅಗಲಿಕೆ ಉಂಟು ಮಾಡಿದ ನೋವು, ಆಘಾತ ಮಾತುಗಳಲ್ಲಿ ಬಣ್ಣಿಸಲಾಗದ್ದು

— **ನಾಗರಾಜ್ ಜಿ.ಎನ್** —



'ಸಂದಿಗ್ಧ ಸಮಯದಲ್ಲಿ ಪಕ್ಷದ ಹೊಣೆ ಹೊತ್ತ ರಾಮಚಂದ್ರರಾವ್'

ಕಾಂ. ಎಸ್.ಸೂರ್ಯನಾರಾಯಣ ರಾವ್

ಪ್ರೀತಿಯ ಸಂಗಾತಿ 'ಪಿ.ಆರ್' ಅಗಲಿ ಒಂದು ವರ್ಷ ಆಗುತ್ತಿದೆ. ಈ ನೆನಪೇ ದುಃಖದಾಯಕ.

ಕರ್ನಾಟಕ ಏಕೀಕರಣವಾದಂದಿನಿಂದ (1956) ಅವರ ನನ್ನ ಸಂಪರ್ಕ ನಿಕಟವಾಯಿತು. ಈ ಹಿಂದೆ ಅವರಿದ್ದ ಮಂಗಳೂರು ಮದ್ರಾಸ್ ಪ್ರಾಂತ್ಯಕ್ಕೆ ಒಳಪಟ್ಟಿತ್ತು. ಪಕ್ಷದ ಸಂಘಟನೆಯೂ ಸಹ ಅದನ್ನೇ ಹೊಂದಿಕೊಂಡಿತ್ತು.

ದ.ಕನ್ನಡ, ಮತ್ತಿತರ ಕಡೆ 'ಮಾಸ್ಟ್ರು' ಎಂದೇ ಕರೆಯಲ್ಪಡಲು ರಾಮಚಂದ್ರ ರಾಯರು ಮೊದಲು ಶಿಕ್ಷಕರಾಗಿದ್ದುದೇ ಕಾರಣ.

ಶಿಕ್ಷಕ ವೃತ್ತಿ ಮಾಡುತ್ತಲೇ ಸಮಾಜದ ಬದಲಾವಣೆ, ಶೋಷಣೆ ನಿರ್ಮೂಲನೆ ಅಸಾಧ್ಯವೆಂದು ಮನಗಂಡು, ಹುದ್ದೆಗೆ ರಾಜೀನಾಮೆ ನೀಡಿದರು. ಈ ಶೋಷಣೆ ವಿರುದ್ಧ, ಶ್ರಮ ಜೀವಿಗಳ ರಕ್ಷಣೆಗೆ ಹೋರಾಡಲು ಪಣ ತೊಟ್ಟು ದುಡಿಯಲು ಪೂರ್ಣಕಾಲದ ಕ್ರಾಂತಿಕಾರಿಯಾದರು. ಕಮ್ಯೂನಿಸ್ಟ್ ಪಕ್ಷದಲ್ಲಿ ಶ್ರಮಿಸುತ್ತಾ, ಮಾರ್ಕ್ಸ್‌ವಾದ- ಲೆನಿನ್ ವಾದವನ್ನು ಭಾರತದ ಸ್ಥಿತಿಗೆ ಅಳವಡಿಸಲು ಮುಂದಾದರು. ಅವರು ಶಿಕ್ಷಕರಾಗಿರುವಾಗಲೇ ಪಕ್ಷದ ಸದಸ್ಯರಾಗಿದ್ದರು. ಪಕ್ಷದ ಕಾರ್ಯಕರ್ತರಿಗೆ, ಸಾಮಾನ್ಯ ಕೆಲಸಗಾರರಿಗೆ ಮಾರ್ಕ್ಸ್‌ವಾದದ ಶಿಕ್ಷಣ, ತರಬೇತಿ ನೀಡಲು ಅನೇಕ ಶಿಬಿರಗಳನ್ನು ನಡೆಸಿದ್ದಾರೆ.

ಜಿಲ್ಲೆಯಲ್ಲಿ ಹಂಚು, ಬೀಡಿ,ಗೋಡಂಬಿ ಮುಂತಾದ ಕಾರ್ಮಿಕರ ನಡುವೆ ಚಳುವಳಿ ಬೆಳೆಸಲು ಹಗಲು ರಾತ್ರಿಯೆನ್ನದೆ ಪಿ.ಆರ್ ದುಡಿದಿದ್ದಾರೆ. ಹಲವಾರು ಮಹತ್ವದ ಹೋರಾಟಗಳನ್ನು ನಡೆಸಿದ್ದಾರೆ. ಎಲ್ಲಾ ಹೋರಾಟಗಳಲ್ಲಿಯೂ ಪಿ.ಆರ್. ಸದಾ ಮುಂಚೂಣಿ. ಅದೇ ವೇಳೆ ಅವರು ಪಕ್ಷದ

ದ.ಕ. ಜಿಲ್ಲಾ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಜೈಲುವಾಸ ಅನುಭವಿಸಿದ್ದಾರೆ. 1964 ರಲ್ಲಿ ಪಕ್ಷ ವಿಭಜನೆ ಆದಾಗ ಪರಿಷ್ಕರಣವಾದದ ವಿರುದ್ಧ ಸಿಡಿದೆದ್ದು, ಸಿಪಿಐ(ಎಂ) ನಲ್ಲಿ ಉಳಿದರು.

ಅಂದಿನ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿದ್ದ ಕೃಷ್ಣಪ್ಪನವರನ್ನು ಸೈದ್ಧಾಂತಿಕ, ಸಂಘಟನಾತ್ಮಕ ಕಾರಣಗಳಿಂದ ಪಕ್ಷದಿಂದ ಉಚ್ಚಾಟಿಸಿದಾಗ ದ.ಕನ್ನಡ ಜಿಲ್ಲೆಯ ಸುಮಾರು ಶೇ. 95 ರಷ್ಟು ಸದಸ್ಯರು ಪಕ್ಷದಲ್ಲೇ ಉಳಿಯುವಂತಾಗಲು ಪಿ.ಆರ್. ರವರ ಶ್ರಮ ಶ್ಲಾಘನೀಯ, ಮುಂದೆ ಸಹ 1980 ರ ದಶಕದಲ್ಲಿ ಅನಿವಾರ್ಯ ಬೆಳವಣಿಗೆ ಹಿನ್ನೆಲೆಯಲ್ಲಿ ರಾಜ್ಯ ಸಮಿತಿಯ ಕಾರ್ಯದರ್ಶಿಯ ಹೊಣೆ ವಹಿಸಿಕೊಂಡರು. ಆಗ ಮಂಗಳೂರಿನಿಂದ ಬೆಂಗಳೂರಿಗೆ ಬರಬೇಕೆಂದು ಪಕ್ಷ ಆದೇಶಿಸಿತು. ಅವರ ಪತ್ನಿಯವರ ಅನಾರೋಗ್ಯ ಇದ್ದಾಗಲೂ ಪಕ್ಷದ ಹಿತವೇ ಮುಖ್ಯವೆಂದು ಬೆಂಗಳೂರಿನಲ್ಲಿ ನೆಲೆಸಿದರು.

ರೈತ ಸಂಘದ ಕೃಷ್ಣಪ್ಪ, ರಾಮರಾವ್ ರವರು ಉಚ್ಚಾಟನೆಗೊಂಡ ನಂತರ ಪಿ.ಆರ್ ರೈತ ಸಂಘದ ಹೊಣೆ ಹೊತ್ತರು. ಸಿಐಟಿಯು ವಿನ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಅವರು ರೈತ ಸಂಘದಲ್ಲಿ ಕೆಲಸ ಆರಂಭಿಸಿ, ರಾಜ್ಯದ ಹಲವು ಜಿಲ್ಲೆಗಳಲ್ಲಿ ಸಂಘಟನೆ ವಿಸ್ತರಿಸಲು ಶ್ರಮಿಸಿದರು. ಸಂಘಟನೆ ಬೆಳೆಯಿತು. ನಂತರ CKC ಸದಸ್ಯರಾದರು. ಪಕ್ಷದ ಬೆಳವಣಿಗೆಗೆ ಅವರ ಕೊಡುಗೆ ಆಧರಿಸಿ ಕೇಂದ್ರ ಸಮಿತಿಯ ಸದಸ್ಯರಾದರು.

ಸಾಮಾನ್ಯವಾಗಿ ಕಮ್ಯೂನಿಸ್ಟ್ ನಾಯಕರಿಗಿರುವ ಉತ್ತಮ ಗುಣಗಳು ಪಿ.ಆರ್ ರಲ್ಲಿದ್ದವು. ಸರಳ ಜೀವನ, ಪಕ್ಷದ ಕಾರ್ಯಕರ್ತರೊಡನೆ ಅನ್ಯೋನ್ಯ ಸಂಬಂಧ, ಅವರ ದುಃಖ-ದುಮ್ಮಾನ, ಸಂತೋಷಗಳತ್ತ ಗಮನ ಹರಿಸುವುದು, ಅಧಿಕಾರದ ಲಾಲಸೆ, ಪ್ರಚಾರ ಪ್ರಿಯತೆ ಇಲ್ಲದಿರುವುದು ಅವರ ಗುಣ. ಇದರಿಂದಾಗಿ ಅವರನ್ನು ಹೆಸರಿನಿಂದ ಕರೆಯದೇ ಪ್ರೀತಿಯಿಂದ 'ಮಾಸ್ಟ್ರು' ಎನ್ನುತ್ತಾರೆ.

ಪಿ.ಆರ್. ರವರಿಗೆ ಅಧ್ಯಯನ ಬಹಳ ಇಷ್ಟವಾದ ಕೆಲಸ. ಕೇವಲ ಮಾರ್ಕ್ಸ್ ವಾದ-ಲೆನಿನ್ ವಾದ ಮಾತ್ರವಲ್ಲ, ಬೇರೆ ಸಾಹಿತ್ಯ ಅಧ್ಯಯನವನ್ನೂ ಆಳವಾಗಿ ಮಾಡಿದ್ದರು. ಪಕ್ಷದ ಶಿಬಿರ, ಸಾಂಸತಿಕ ರಂಗದಲ್ಲಿ ಉಪನ್ಯಾಸ, ಮಾರ್ಗದರ್ಶನ ನೀಡುತ್ತಿದ್ದರು. ಈ ವೈವಿಧ್ಯಮಯ ವ್ಯಕ್ತಿತ್ವವುಳ್ಳ ಅವರು ಕೊನೆಯವರೆಗೂ ಐಕ್ಯರಂಗದ ಸಂಪಾದಕರಾಗಿದ್ದರು.

ಪಕ್ಷದ ಕೇಂದ್ರ ಸಮಿತಿಯ ಸಭೆಗೆಂದೇ ರೈಲಿನಲ್ಲಿ ಪ್ರಯಾಣಿಸುವಾಗ ಎದೆ ನೋವು ಬಂದು ವೈದ್ಯಕೀಯ ಚಿಕಿತ್ಸೆ ಬಳಿಕ, ಪ್ರಯಾಣ ಬೇಡ ಬೇಡವೆಂದು ವೈದ್ಯರು ತಿಳಿಸಿದರೂ, ಪಕ್ಷದ ಸಭೆಯ ಮಹತ್ವವನ್ನು ತಿಳಿಸಿ, ದೆಹಲಿಗೆ ಪ್ರಯಾಣಿಸಿದರು. ಕಾಯಿಲೆ ತೀವ್ರಗೊಂಡು ಹೃದಯಾಘಾತದಿಂದ ಕೊನೆ ಉಸಿರೆಳೆದರು. ತನ್ನ ದೇಹ ಸ್ಥಿತಿಗಿಂತಲೂ ಪಕ್ಷದ ಕರ್ತವ್ಯ ಮುಖ್ಯವೆಂದು ಬಗೆದ ಪಿ.ಆರ್. ಬಗ್ಗೆ ಮನಸ್ಸು ತುಂಬಿ ಬರುತ್ತದೆ. ಅವರ ನಿಧನದಿಂದ ಪಕ್ಷ, ದುಡಿಯುವ ಜನ, ಪ್ರಗತಿಪರರಿಗೆ ಅಪಾರ ನಷ್ಟವಾಗಿದೆ. ಅವರು ಬಿಟ್ಟು ಹೋದ ಕೆಲಸವನ್ನು, ಎಲ್ಲಾ ಸಂಗಾತಿಗಳೂ, ಮುಖಂಡರೂ ಪೂರ್ಣಗೊಳಿಸಬೇಕಿದೆ. ಇದು ಎಲ್ಲರ ಸಹಕಾರದಿಂದ ಸಾಧ್ಯ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಕ್ಷದಲ್ಲಿ ದುಡಿಯಲು ಆರಂಭಿಸಿ ರಾಜ್ಯ ಮುಖಂಡರಾಗಿ ಬೆಳೆದ ಕಾಂ. ಪಿ.ರಾಮಚಂದ್ರರಾಯರು ಪಕ್ಷದ ಜೀವನದಲ್ಲಿ ಯೋಗ್ಯ ಸ್ಥಾನವನ್ನೇ ಪಡೆದಿದ್ದಾರೆ. ಅದು ಅವರ ಅವಿಶ್ರಾಂತ ದುಡಿಮೆಯ ಫಲ. ಅವರೊಬ್ಬ ಸರಳ ಆದರ್ಶ ಜೀವಿ. ಅದೇ ವೇಳೆ ಗುರಿಸಾಧಿಸುವುದರಲ್ಲಿ ಛಲವಾದಿ. ಹಿಂದೆ ನೋಡದೇ ಮುನ್ನಡೆದ ವ್ಯಕ್ತಿತ್ವ. ನಿಜವಾಗಿಯೂ ಅವರೊಬ್ಬ ಕ್ರಾಂತಿಕಾರಿ ಎಂದು ಹೇಳುವ ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಕೆ.ಆರ್.ಶ್ರೀಯಾನ್ ಅವರ ಬಗ್ಗೆ ತನ್ನ ಅಚ್ಚಳಿಯದ ನೆನಪುಗಳನ್ನು ಇಲ್ಲಿ ಸ್ಮರಿಸಿಕೊಂಡಿದ್ದಾರೆ.





ನಿಜವಾಗಿಯೂ ಅವರೊಬ್ಬ ಕ್ರಾಂತಿಕಾರಿ

ಒಂದು ವರ್ಷದ ಹಿಂದೆ ನಿಧನರಾದ ಕಾ.ಮಾಸ್ಟ ನೆನಪು ನನಗೆ ಬೇರೆ ಬೇರೆ ಸಂದರ್ಭಗಳಲ್ಲಿ ಬರುತ್ತದೆ. 1953 ನೇ ಇಸವಿ ಸೆಪ್ಟೆಂಬರ್ ತಿಂಗಳು ಮಳೆಗಾಲ ಕೊನೆಯಾಗುತ್ತಿತ್ತು. ನಾನು ಪ್ರಥಮವಾಗಿ ಮಾಸ್ಟರನ್ನು ಭೇಟಿಯಾದದ್ದು ಮಂಗಳೂರಿನ ಪದಂಗಡಿಯಲ್ಲಿರುವ ಗೇರು ಬೀಜ ಕಾರ್ಮಿಕರ ಸಂಘದ ಕಚೇರಿಯಲ್ಲಿ. ಅಂದು ಮಂಗಳೂರಿನ ಪಾರ್ಟಿ ಕಾರ್ಯಕರ್ತರ ಸಭೆ ಅಲ್ಲಿ ಜರುಗಿತ್ತು. ವಿದ್ಯಾರ್ಥಿಯಾಗಿದ್ದಾಗಲೇ ಕಮ್ಯುನಿಸ್ಟ್ ಪಕ್ಷದತ್ತ ಆಕರ್ಷಿತನಾಗಿದ್ದ ನಾನು ಕೊಂಚಾಡಿ, ಪದಂಗಡಿ ಪ್ರದೇಶಗಳಲ್ಲಿ ಕಮ್ಯುನಿಸ್ಟ್ ಕಾರ್ಯಕರ್ತರ ಸಂಪರ್ಕದಲ್ಲಿದ್ದುದರಿಂದ ನನಗೂ ಆ ಸಭೆಗೆ ಬರಲು ಆಮಂತ್ರಣ ಸಿಕ್ಕಿತ್ತು. ಹಾಗೆ ನಾನೂ ಅಲ್ಲಿಗೆ ಹೋಗಿದ್ದೆ.

ಆ ಸಭೆಯಲ್ಲಿ ಬಹಳ ಚುರುಕಾಗಿ ಚರ್ಚೆಯಲ್ಲಿ ಭಾಗವಹಿಸುತ್ತಿದ್ದ ವ್ಯಕ್ತಿಯನ್ನು ನಾನು ಗುರುತಿಸಿದೆ. ಅವರ ಬಗ್ಗೆ ಬೇರೆಯವರೊಡನೆ ವಿಚಾರಿಸಿದಾಗ ಅವರು ಮಾಸ್ಟು ರಾಮಚಂದ್ರರಾಯರು ಎಂದು ಗೊತ್ತಾಯಿತು. ಆ ಸಭೆ ಮುಕ್ತಾಯವಾದ ಮೇಲೆ ಸ್ಥಳೀಯ ಸಂಗಾತಿಯೊಬ್ಬರು ನನ್ನನ್ನು ಕಾ. ರಾಮಚಂದ್ರರಾಯರಿಗೆ ಪರಿಚಯಿಸಿದರು. ಅವರಿಗೆ ನಾನು ವಿದ್ಯಾರ್ಥಿಯಾಗಿದ್ದರಿಂದ ತುಂಬಾ ಖುಷಿಯಾಯಿತು. ನನ್ನ ಹೆಗಲಿಗೆ ಕೈಹಾಕಿ ಹೇಳಿದರು 'ನೀವು ಪಕ್ಷದಲ್ಲಿ ಕೆಲಸ ಮಾಡಬೇಕು' ಎಂದು.

ನಾನು ಆಗಬಹುದೆಂದು ತಲೆಯಾಡಿಸಿದೆ. ಅಂದಿನಿಂದ ನಾನು ಪಕ್ಷದ ಸ್ಥಳೀಯ ಕಾರ್ಯಕರ್ತ ರೊಂದಿಗೆ ಸೇರಿ ಪಕ್ಷದ ಪ್ರಚಾರ ಕಾರ್ಯಕ್ರಮಗಳಲ್ಲಿ ಭಾಗವಹಿಸತೊಡಗಿದೆ. ಅಂದಿನಿಂದ ಮಾಸ್ಟರೊಡನೆ ನನ್ನ ಸಂಪರ್ಕ ಮುಂದುವರಿಯಿತು. ಪೂರ್ಣಕಾಲ ಕಾರ್ಯಕರ್ತನಾಗಿ ದುಡಿಯಲು ನನಗೆ ಅವರು ಪ್ರೇರೇಪಿಸಿದರು. ನಾನು ರೈತ ಸಂಘದ ಕಚೇರಿಯಲ್ಲಿದ್ದು ಕೆಲಸ ಮಾಡಲು ಒಪ್ಪಿಕೊಂಡೆ. ಆಗ ಕಾ. ರಾಮಚಂದ್ರ ರಾವ್ ಇನ್ನೂ ಅಧ್ಯಾಪಕ ವೃತ್ತಿಯಲ್ಲಿದ್ದರು. ಮಂಗಳೂರಿನಲ್ಲಿ ಪಕ್ಷದ ಚಟುವಟಿಕೆ ನಡೆಸುತ್ತಿದ್ದರು. ಪಕ್ಷದ ಕಾರ್ಯಕರ್ತರಿಗೆ ಮಾರ್ಕ್ಸ್‌ವಾದಿ ಸಿದ್ಧಾಂತದ ಕ್ಲಾಸುಗಳನ್ನು ನಡೆಸುತ್ತಿದ್ದರು. ಸಂಜೆ ಶಾಲೆ ಬಿಟ್ಟು ಬಂದರೆ ರಾತ್ರಿ ಗಂಟೆ 10-11 ರ ತನಕವೂ ಮಂಗಳೂರಿನ ವಿವಿಧ ಪ್ರದೇಶಗಳಲ್ಲಿ ಪಕ್ಷದ ಕಚೇರಿಗಳಲ್ಲಿ ಅಥವಾ ಪ್ರದೇಶಗಳಲ್ಲಿರುವ ನಮ್ಮವರ ಮನೆಗಳಲ್ಲಿ ಕ್ಲಾಸ್ ನಡೆಸುತ್ತಿದ್ದರು. ಮಾರ್ಕ್ಸ್‌ವಾದಿ ಸೈದ್ಧಾಂತಿಕ ಪುಸ್ತಕಗಳನ್ನು ಅವರು ಓದಿ ಅಗಾಧ ಜ್ಞಾನ ಹೊಂದಿದ್ದರು. ನನಗೆ ಪುಸ್ತಕಗಳನ್ನು ಕೊಟ್ಟು ಓದಲು ಪ್ರೇರೇಪಿಸುತ್ತಿದ್ದರು. ಅಧ್ಯಾಪಕ ವೃತ್ತಿಯಲ್ಲಿ ಸಂಪಾದಿಸುತ್ತಿದ್ದ ಹಣದಲ್ಲಿ ಸ್ವಲ್ಪ ಭಾಗವನ್ನು ಅವರು ಪಕ್ಷದ ಚಳುವಳಿ ಕಟ್ಟಲು ಕಾರ್ಯಕರ್ತರಿಗೆ ಸಹಾಯ ಮಾಡುತ್ತಿದ್ದರು.

ರೈತರ ಸಂಘಟನೆಯಲ್ಲಿ

1952 ರಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಸದಸ್ಯನಾದ ಅವರು ಅಧ್ಯಾಪಕ ವೃತಿಯಲ್ಲಿ ಮುಂದುವರಿಯುವಾಗಲೇ ಪಕ್ಷದ ಹಾಗೂ ಸಾಮೂಹಿಕ ಸಂಘಟನೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಶಾಲೆ ಬಿಟ್ಟರೆ ಉಳಿದ ಕಾಲವನ್ನು ಹೆಚ್ಚೆಚ್ಚು ಈ ಕಾರ್ಯಕ್ರಮಗಳಲ್ಲೇ ಕಳೆಯುತ್ತಿದ್ದರು. ಅಂದಿನ ಕಾಲಾವಧಿಯಲ್ಲಿ ಮಂಗಳೂರಿನಲ್ಲಿ ಭಾರಿ ಕಾರ್ಮಿಕ ಸಂಘಟನೆಗಳು ಎದ್ದು ಬರುತ್ತಿದ್ದು ಹೋರಾಟಗಳ ಅಲೆಗಳೇ ಏಳುತ್ತಿದ್ದವು. ಹಂಚು, ಗೋಡಂಬಿ, ಬೀಡಿ, ಸಾರಿಗೆ, ಪ್ರೆಸ್ ಇತ್ಯಾದಿ ಸಂಘಟನೆಗಳಲ್ಲಿ ಸಾವಿರಗಟ್ಟಲೆ ಕಾರ್ಮಿಕರು ಎಐಟಿಯುಸಿ ನೇತೃತ್ವದಲ್ಲಿ ಸಂಘಟಿತರಾಗಿದ್ದರು. ಭಾರೀ ಹೋರಾಟಗಳನ್ನು ನಡೆಸುತ್ತಿದ್ದರು. ಅವುಗಳಲ್ಲಿ ಕಾ. ರಾಮಚಂದ್ರ ರಾವ್ ಮುತುವರ್ಜಿ ವಹಿಸಿ ಭಾಗವಹಿಸುತ್ತಿದ್ದರು. ಇತ್ತ ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಸಂಘದ ಚಟುವಟಿಕೆಗಳೂ ನಡೆಯುತ್ತಿದ್ದು, ಭೂಸುಧಾರಣೆಗಾಗಿ ರೈತರು ಸರಕಾರವನ್ನು ಒತ್ತಾಯಿಸುತ್ತಿರುವಾಗಲೇ ಭೂಮಾಲಕರ ದಬ್ಬಾಳಿಕೆಗಳಿದಿರಾಗಿ ಹೋರಾಡಲು ಎಐಕೆಎಸ್ ಜಿಲ್ಲಾ ಘಟಕ ದ.ಕ. ಜಿಲ್ಲಾರೈತ ಸಂಘದಡಿಯಲ್ಲಿ ರೈತರು ಸಂಘಟಿತರಾಗುತ್ತಿದ್ದರು. ಕಾಂ.ರಾಮಚಂದ್ರ ರಾವ್ ಗ್ರಾಮಾಂತರ ಪ್ರದೇಶಗಳ ರೈತ ಚಳುವಳಿಯತ್ತ ಗಮನ ಕೊಡುತ್ತಿದ್ದರು. ತಾನು ಸ್ವತಃ ರೈತ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸು ತ್ತಿದ್ದರು. ಗ್ರಾಮಗಳಿಗೆ ಕಾರ್ಯಕರ್ತರೊಂದಿಗೆ ಭೇಟಿ ನೀಡಿ ರೈತರನ್ನು ಕಂಡು ಮಾತನಾಡುತ್ತಿದ್ದರು.

ಹೀಗೆ ದಿನೇ ದಿನೇ ತನ್ನನ್ನು ಹೆಚ್ಚೆಚ್ಚು ಕಮ್ಯುನಿಸ್ಟ್ ಪಕ್ಷದ ಹಾಗೂ ಕಾರ್ಮಿಕ, ರೈತ ಚಳುವಳಿಯಲ್ಲಿ ತೊಡಗಿಸಿಕೊಂಡ ಕಾರಣ ಜಿಲ್ಲೆಯ ಚಳುವಳಿಯ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರಾದರು. ಅವರ ಅವಶ್ಯಕತೆ ಬೆಳೆಯುತ್ತಿರುವ ಈ

ಸಂಘಟನೆಗೆ

ಬೇಕಾಯಿತು. ಅವರ ಹೆಚ್ಚಿನ ಸಮಯವನ್ನು ಈ ಚಳುವಳಿಗಳಲ್ಲಿ ವಿನಿಯೋಗಿಸಬೇಕಾದ ಅನಿವಾರ್ಯತೆ ಉಂಟಾಯಿತು.


ಯುವಜನ ಸಂಘಟನೆಯಲ್ಲಿ

ಮಂಗಳೂರಿನಲ್ಲಿ ಹಾಗೂ ಜಿಲ್ಲೆಯಲ್ಲಿ ರೈತ, ಚಳುವಳಿ ವಿಶಾಲವಾಗಿ ಬೆಳೆದು ಪಸರಿಸುತ್ತಿದ್ದ ಈ ಕಾಲಾವಧಿಯಲ್ಲಿ, 1953 ರಲ್ಲಿ ರೈತ ಸಂಘದ ಕಚೇರಿಯ ಜವಾಬ್ದಾರಿ ನೋಡಲು ಪೂರ್ಣಕಾಲ ಕಾರ್ಯಕರ್ತನಾಗಿ ನಾನು ಸೇರಿಕೊಂಡೆ. ಆಗ ಕಾ. ರಾಮಚಂದ್ರರಾಯರಿಗೆ ತುಂಬಾ ಸಂತೋಷವಾಗಿತ್ತು. ನನಗೂ ಅವರಿಗೂ ಆತ್ಮೀಯ ಸಂಪರ್ಕ ಬೆಳೆಯಿತು. ದಿನಾ ನಾವು ಸೇರಿ ತುಂಬಾ ವಿಷಯಗಳನ್ನು ಚರ್ಚಿಸುತ್ತಿದ್ದೆವು. ನಾನು ವಿದ್ಯಾರ್ಥಿಯಾಗಿದ್ದಾಗಲೇ ಕಲೆಯಲ್ಲಿ ನನಗೆ ಅಭಿರುಚಿ ಇತ್ತು. ನಾಟಕಗಳಲ್ಲಿ ಭಾಗವಹಿಸುತ್ತಿದ್ದೆ. ಹಾಗೂ ನಾಟಕ ರಚಿಸುತ್ತಿದ್ದೆ. ಹಾಡುಗಳನ್ನು ರಚಿಸಿ ಹಾಡುತ್ತಿದ್ದೆ. ಪಕ್ಷದ ಸಾರ್ವಜನಿಕ ಸಭೆಗಳಲ್ಲಿ ಕ್ರಾಂತಿಗೀತೆಗಳನ್ನು ಹಾಡತೊಡಗಿದೆ. ಕಾ. ರಾಮಚಂದ್ರ ರಾವ್ ನನ್ನ ಹಾಡುಗಳನ್ನು ಕೇಳಿ ಮೆಚ್ಚುಗೆ ವ್ಯಕ್ತಪಡಿಸಿ ಪ್ರೋತ್ಸಾಹಿಸುತ್ತಿದ್ದರು. ಮಂಗಳೂರಿನಲ್ಲಿ ಯುವಜನ ಸಂಘಟನೆ ಕಟ್ಟಿ ಆ ಮೂಲಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವ ಬಗ್ಗೆ ನಾವು ಹಲವು ಬಾರಿ ಚರ್ಚಿಸಿ ಒಂದು ತೀರ್ಮಾನಕ್ಕೆ ಬಂದೆವು. ಇದರ ಫಲವಾಗಿ ಮಂಗಳೂರಿನ ಅನೇಕ ಪ್ರದೇಶಗಳಲ್ಲಿ ಯುವಕ ಸಂಘಟನೆಗಳನ್ನು ಕಟ್ಟಿದೆವು. ಅದಕ್ಕೆ ನಾನು ಮುತುವರ್ಜಿ ವಹಿಸಿದೆ. ಆ ಸಂಘಟನೆಗಳ ಮೂಲಕ ನಾಟಕ ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಆರಂಭಿಸಿದೆವು. ಆ ಮೂಲಕ ಯುವಕರ ಮಧ್ಯೆ ನಾಟಕ, ಆಟೋಟ ಕಾರ್ಯಕ್ರಮಗಳು ಆರಂಭವಾದವು. ಈ ಕಾರ್ಯಕ್ರಮಗಳನ್ನು ನಡೆಸಲು ಕಾಂ. ರಾಮಚಂದ್ರ ರಾವ್ ತುಂಬಾ ಪ್ರೋತ್ಸಾಹ ನೀಡುತ್ತಿದ್ದರು. ಅದಕ್ಕೆ ಬೇಕಾದ ಅಭ್ಯಾಸ ನಡೆಸಲು ಪುಸ್ತಕಗಳನ್ನು ಕೊಡುತ್ತಿದ್ದರು. ಈ ರೀತಿ ಯುವಜನರ ಮಧ್ಯೆ ಅಲ್ಲಲ್ಲಿ ನಮ್ಮ ಸಂಘಟನೆಗಳು ಬೆಳೆದು ಬಂದವು. ಈ ಸಂಘಟನೆಗಳನ್ನು ಒಂದುಗೂಡಿಸಿ ಯುವಜನರ ಸಮಸ್ಯೆಗಳಿಗಾಗಿ ನೇತೃತ್ವ ನೀಡುವ ಒಂದು ಪುರೋಗಾಮಿ ಸಂಘಟನೆಯನ್ನು ಯಾಕೆ ಕಟ್ಟಬಾರದೆಂಬ ಅಲೋಚನೆ ನಮ್ಮಲ್ಲಿ ಬಂತು. ಅದಕ್ಕೂ ಒಂದು ಕಾರ್ಯಕ್ರಮ ಸಿದ್ಧವಾಯಿತು. ಮಂಗಳೂರಿನಲ್ಲಿ 'ಡೆಮಾಕ್ರೆಟಿಕ್ ಯೂತ್ ಲೀಗ್' ಎಂಬ ಸಂಘಟನೆ ಸ್ಥಾಪನೆ ಮಾಡಿದೆವು. ಅದರ ಸಂವಿಧಾನ, ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ನನಗೆ ಕಾ. ರಾಮಚಂದ್ರ ರಾವ್ ನೀಡಿದ ಸಹಕಾರ ಹಾಗೂ ನಿರ್ದೇಶನ ಮುಖ್ಯವಾಗಿತ್ತು. 1957 ರಲ್ಲಿ ಸಂಘಟನೆಯ ಉದ್ಘಾಟನೆಯಾಯಿತು. ಇದರ ಚಟುವಟಿಕೆ ವಿಸ್ತರಿಸಿ 7 ಕಡೆಗಳಲ್ಲಿ ಅದರ ಘಟಕಗಳನ್ನು ನಾವು ಸ್ಥಾಪಿಸಿದೆವು. ದೊಡ್ಡ ಸಂಖ್ಯೆಯಲ್ಲಿ ಯುವಕರು ಈ ಸಂಘಟನೆಗಳಿಗೆ ಸೇರಿದರು. ಹೀಗೆ ಎಲ್ಲಾ ವಿಭಾಗದ ಜನಸಮುದಾಯದ ಮಧ್ಯೆ ನಮ್ಮ ಚಟುವಟಿಕೆ ವಿಸ್ತರಿಸಿ ಜನಾಕರ್ಷಣೆ ಪಡೆಯುವಂತಾಗಬೇಕೆಂದು ಅದರ ಗುರಿಯಾಗಿತ್ತು. ಬರೇ ಕಾರ್ಮಿಕರ ಮಧ್ಯೆ ಮಾತ್ರವಲ್ಲ ಎಲ್ಲಾ ವಿಭಾಗದ ಜನ

ವಿಭಾಗದ ಮಧ್ಯೆಯೂ ನಾವು ಬೆಳೆಯಬೇಕೆಂದು ಅವರ ಕನಸಾಗಿತ್ತು. ಅದಕ್ಕಾಗಿ ಅವಿಶ್ರಾಂತವಾಗಿ ಅವರು ಶ್ರಮವಹಿಸುತ್ತಿದ್ದರು. ಹೀಗೆ ಪೂರ್ಣಕಾಲ ಸದಸ್ಯರಾಗಿರದೇ ಪೂರ್ಣಕಾಲ ಕಾರ್ಯಕರ್ತನಷ್ಟೇ ಜವಾಬ್ದಾರಿ ಅವರು ನಿರ್ವಹಿಸುತ್ತಿದ್ದರು.

ಪೂರ್ಣಕಾಲದ ಕಾರ್ಯಕರ್ತ

ಈ ಪರಿಸ್ಥಿತಿಯಲ್ಲಿ ಈ ಚಟುವಟಿಕೆಗಳ ಒತ್ತಡದಿಂದಾಗಿ ಅವರು ಅಧ್ಯಾಪಕ ವೃತ್ತಿಯನ್ನೇ ಬಿಡಬೇಕಾಯಿತು. ಪಕ್ಷದಿಂದ ಅವರು ಪೂರ್ಣಕಾಲದ ಕಾರ್ಯಕರ್ತರಾಗಿ ಕೆಲಸ ಮಾಡಬೇಕೆಂಬ ಒತ್ತಾಯ ಬಂತು. ಕೊನೆಗೂ 1961 ರಲ್ಲಿ ಅಧ್ಯಾಪಕ ವೃತ್ತಿಯನ್ನೇ ತೊರೆದು ಪೂರ್ಣಕಾಲದ ಕಾರ್ಯಕರ್ತನಾಗಿ ಕೆಲಸ ಆರಂಭಿಸಿದರು. ಪಕ್ಷದ ಮಂಗಳೂರು ನಗರ ಸಮಿತಿ ಕಾರ್ಯದರ್ಶಿಯಾಗಿ ಜವಾಬ್ದಾರಿ ಹೊತ್ತು ಅನೇಕ ವಾರ್ಡ್‌ಗಳಲ್ಲಿ ಪಕ್ಷದ ಶಾಖೆಗಳನ್ನು ಕಟ್ಟಿದರು. ಇದೇ ಅವಧಿಯಲ್ಲಿ ಪಕ್ಷದ ರಾಜ್ಯ ಸಮಿತಿ ಸದಸ್ಯರಾಗಿ, ಜಿಲ್ಲಾ ಮುಖಂಡರಾಗಿ ಇಡೀ ಜಿಲ್ಲೆಯಲ್ಲಿ ಪಕ್ಷದ ಸಂಘಟನೆಗೆ ಗಮನ ಹರಿಸಿದರು. ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳಲ್ಲಿ ಪ್ರಮುಖ ಪಾತ್ರವಹಿಸುತ್ತಾ, ಅವರ ಹೋರಾಟಗಳಲ್ಲಿ ಭಾಗವಹಿಸುತ್ತಾ ಬಂದ ರಾಮಚಂದ್ರರಾಯರನ್ನು ಜಿಲ್ಲೆಯ ರೈತರೂ, ಕಾರ್ಮಿಕರು, ಜನಸಾಮಾನ್ಯರೂ, 'ಮಾಸ್ಟ್ರು' ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ರೈತ ಕಾರ್ಮಿಕರ ಪ್ರೀತಿಯ ಮುಂದಾಳುವಾದರು. ಜಿಲ್ಲೆಯ ಒಬ್ಬ ಉತ್ತಮ ಮುಖಂಡರಾಗಿ ಮುಂದೆ ಬಂದರು. ಜನರು ಅವರನ್ನು ಸ್ವೀಕರಿಸಿದರು. ಅವರೊಬ್ಬ ಉತ್ತಮ ಹೋರಾಟಗಾರ, ಸಂಘಟಕ.



ಪರಿಷ್ಕರಣವಾದಕ್ಕಿದಿರಾಗಿ

1962 ರ ಬಳಿಕ ಕಮ್ಯುನಿಸ್ಟ್ ಚಳುವಳಿಯಲ್ಲಿ ಭಿನ್ನಮತ ಆರಂಭವಾಗ ತೊಡಗಿತು. ಪರಿಷ್ಕರಣವಾದಕ್ಕಿದಿರಾಗಿ ಪಕ್ಷದೊಳಗೆ ಬಿರುಸಿನ ಚರ್ಚೆಗಳು ಆರಂಭವಾದವು. ಈ ಸಂದರ್ಭದಲ್ಲಿ ಪಕ್ಷದ ಸದಸ್ಯರ ಮಧ್ಯೆ ಬೆಂಬಲಿಗರ ಮಧ್ಯೆ ಸರಿಯಾದ ರಾಜಕೀಯ ಕಣ್ಣೋಟವನ್ನು ಕೊಟ್ಟು ಅವರು ವಿವರಿಸುತ್ತಿದ್ದರು. ಕೊನೆಗೂ 1964 ರಲ್ಲಿ ಪಕ್ಷ ಇಬ್ಭಾಗವಾಯಿತು. ದ.ಕ ಜಿಲ್ಲೆಯ ಪಕ್ಷದ ಮುಖಂಡತ್ವದಲ್ಲಿದ್ದ ಪ್ರಮುಖ ಮುಂದಾಳುಗಳು ಹೆಚ್ಚಿನವರು ಪರಿಷ್ಕರಣವಾದಿ ಧೋರಣೆ ವಹಿಸಿ ಡಾಂಗೆಯ ದಾರಿ ತುಳಿದರು. ಈ ಸಂದರ್ಭದಲ್ಲಿ ಕಮ್ಯುನಿಸ್ಟ್ ಆಂದೋಲನದಲ್ಲಿ ಕ್ರಾಂತಿಕಾರಿ ದಾರಿಯನ್ನೇ ಅಪ್ಪಿ ಹಿಡಿದ ಜಿಲ್ಲೆಯ ಮುಖ್ಯ

ಮುಖಂಡರುಗಳ ಪೈಕಿ ಕಾಂ. ರಾಮಚಂದ್ರರಾವ್ ಒಬ್ಬರು. ಇಂತಹ ಒಬ್ಬರನ್ನು ಬಿಟ್ಟರೆ (ಕಾಂ. ಎಂ.ಎಚ್.ಕೃಷ್ಣಪ್ಪ ಅಂದು ಮುಖ್ಯ ಪಾತ್ರವಹಿಸಿದ್ದರು. ಆದರೆ ಈಗ ಅವರು ನಮ್ಮ ಪಕ್ಷದಲ್ಲಿಲ್ಲ) ಹೆಚ್ಚಿನ ಮುಖಂಡರು ಆ ಕಡೆ ಸೇರಿದರು. ಜಿಲ್ಲೆಯಲ್ಲಿ ಪಕ್ಷ ಹಾಗೂ ಕಾರ್ಮಿಕ ಸಂಘಟನೆಗಳನ್ನು ಉಳಿಸಿ ಮುಂದುವರಿಸುವ ದೊಡ್ಡ ಜವಾಬ್ದಾರಿಯನ್ನು ಕಾ. ರಾಮಚಂದ್ರರಾವ್ ವಹಿಸಬೇಕಾಗಿತ್ತು. ಅವರಿಗೆ ಜಿಲ್ಲೆಯ ಪಕ್ಷದ ಕಾರ್ಯಕರ್ತರ ಹೆಚ್ಚಿನ ಬೆಂಬಲ ಸಿಕ್ಕಿತು. ಕೆಳಮಟ್ಟದ ಹೆಚ್ಚಿನ ಕಾರ್ಯಕರ್ತರು ಹಾಗೂ ಪಕ್ಷದ ಬಹುಮತ ಸದಸ್ಯರು ಸಿಪಿಐ(ಎಂ) ಪಕ್ಷಕ್ಕೆ ಬೆಂಗಾವಲಾಗಿ ನಿಂತರು. ಪಕ್ಷದ ಸದಸ್ಯರನ್ನು ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರನ್ನು ಪಕ್ಷದ ಹಿಂದೆ ದೃಢವಾಗಿ ನಿಲ್ಲುವಂತೆ ಮಾಡುವ ಶ್ರಮದಲ್ಲಿ ಕಾಂ. ರಾಮಚಂದ್ರರಾವ್‌ರವರ ಪಾತ್ರ ಹಿರಿದಾದುದು. ಪರಿಷ್ಕರಣವಾದಕ್ಕಿದಿರಾಗಿ ಪಕ್ಷದ ಸದಸ್ಯರನ್ನು ಜಿಲ್ಲೆಯ ಕಾರ್ಮಿಕರನ್ನು ದೃಢವಾಗಿ ನಿಲ್ಲುವಂತೆ ಭಾರೀ ಸೈದ್ಧಾಂತಿಕ ಸಮರವನ್ನೇ ಹೂಡಬೇಕಾಯಿತು. ಅವರ ಫಲವಾಗಿ ಜಿಲ್ಲೆಯ ಬೆನ್ನೆಲುಬಾದ ಹಂಚಿನ ಕಾರ್ಮಿಕರು ಪಕ್ಷದ ಹಿಂದೆ ದೃಢವಾಗಿ ನಿಂತರು. ಎಲ್ಲಾ ತಾಲೂಕುಗಳಿಗೂ ನಾವು ಭೇಟಿ ನೀಡಿದೆವು. ಎಲ್ಲಾ ಕಡೆಗೂ ಅವರು ಹೋಗುವಾಗ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ನನ್ನ ಹತ್ತಿರ ಗಂಟೆಗಟ್ಟಲೆ ಪಕ್ಷದ ಒಡಕಿನ ಬಗ್ಗೆ ಸಿಪಿಐ(ಎಂ) ಸ್ಥಾಪಿಸಬೇಕಾಗಿ ಬಂದ ಅವಶ್ಯಕತೆ ಮತ್ತು ನಿಜವಾದ ಕ್ರಾಂತಿಯ ದಾರಿಯ ಬಗ್ಗೆ ಚರ್ಚಿಸುತ್ತಿದ್ದರು. ಒಟ್ಟಿನಲ್ಲಿ ಪರಿಷ್ಕರಣವಾದದ ವಿರುದ್ಧವಾಗಿ ಪಕ್ಷದ ಬಹುಮತ ಸದಸ್ಯರನ್ನೂ, ಮುಖ್ಯ ಸಾಮೂಹಿಕ ಸಂಘಟನೆಗಳನ್ನೂ ಉಳಿಸಿ ಮುನ್ನಡೆಸುವುದರಲ್ಲಿ ಜಿಲ್ಲೆಯಲ್ಲಿ ನಾವು ಸಫಲರಾದೆವು. ಅದರಲ್ಲೂ ಕಾಂ.ರಾಮಚಂದ್ರ ರಾವ್‌ರ ಪಾತ್ರ ಪ್ರಮುಖವಾದುದು ಎಂಬುದನ್ನು ಇಲ್ಲಿ ನೆನಪಿಸಬೇಕಾಗಿದೆ. ಈ ಸಂದರ್ಭದಲ್ಲೇ ಕಾಂ. ಎ.ಕೆ.ಜಿ. ಮಂಗಳೂರಿಗೆ ಬಂದರು. ಒಂದು ಗುಪ್ತಸಭೆಯನ್ನು ನಾವು ನಡೆಸಿ ಅವರೊಂದಿಗೆ ಚರ್ಚಿಸಿದೆವು. ನಮ್ಮನ್ನು ಎ.ಕೆ.ಜಿ. ಹುರಿದುಂಬಿಸಿ ಮುನ್ನಡೆಸಿದರು.

ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿ ಎರಡು ದಶಕಗಳ ಕಾಲ ಅವರು ಸೇವೆ ಸಲ್ಲಿಸಿದ್ದಾರೆ. ಕಾರ್ಮಿಕ ವರ್ಗದ ಆಂದೋಲನವನ್ನು ಕ್ರಾಂತಿಕಾರಿ ದಾರಿಯಲ್ಲಿ ಮುಂದೊಯ್ಯುವ ನಿಟ್ಟಿನಲ್ಲಿ ದೇಶದ ಪ್ರಮುಖ ಕಾರ್ಮಿಕ ಸಂಘಟನೆಯಾದ ಎಐಟಿಯುಸಿ ಇಬ್ಭಾಗವಾಗಿ ಸಿಐಟಿಯು ಸ್ಥಾಪನೆಯಾದ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಸಿಐಟಿಯು ಜಿಲ್ಲಾ ಘಟಕ ಸ್ಥಾಪನೆಯಾದಾಗ ಅದರ ಕಾರ್ಯದರ್ಶಿ ಯಾಗಿಯೂ ಕೆಲಸ ಮಾಡಿದ್ದಾರೆ. ಜಿಲ್ಲೆಯಲ್ಲಿ ಬೀಡಿ ಮತ್ತಿತರ ಕಾರ್ಮಿಕ ಸಂಘಟನೆ ಬಲಗೊಳಿಸಿ ಸಮರಧೀರ ಹೋರಾಟಗಳನ್ನು ನಡೆಸಿದ ಕೀರ್ತಿ ಕಾ. ರಾಮಚಂದ್ರರಾಯರಿಗಿದೆ.

ಹೆಚ್ಚಿನ ಜವಾಬ್ದಾರಿ

1970 ರ ಕಾಲಾವಧಿಯಲ್ಲಿ ಕಮ್ಯುನಿಸ್ಟ್ ಆಂದೋಲನದಲ್ಲಿ ಉದ್ಭವಿಸಿದ ಸಂಕುಚಿತ ಪಂಥವಾದ ಮತ್ತು ವಿಚ್ಛಿದ್ರಕಾರಿ ಪ್ರಯತ್ನಗಳ ವಿರುದ್ಧ ಪಕ್ಷದೊಳಗೆ ನಡೆಸಿದ ಹೋರಾಟದಲ್ಲಿ ಅವರು ಪ್ರಮುಖ

ಪಾತ್ರವಹಿಸಿದ್ದರು. 1970-80 ರ ಕಾಲಾವಧಿಯಲ್ಲಿ ಜಿಲ್ಲೆಯಲ್ಲಿ ಪಕ್ಷದ ಕೆಲಸ ಮುನ್ನಡೆಸುತ್ತಿದ್ದಾಗಲೇ ರಾಜ್ಯ ಸಮಿತಿ ಸದಸ್ಯರಾಗಿ ರಾಜ್ಯದ ಕೆಲಸಗಳಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. 1978 ರಲ್ಲಿ ಪಕ್ಷದ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ರಾಜ್ಯದ ಜವಾಬ್ದಾರಿ ಹೆಚ್ಚು ಹೊರುವ ಉದ್ದೇಶದಿಂದ ಹೆಚ್ಚೆಚ್ಚು ರಾಜ್ಯದ ಕೆಲಸಗಳಿಗೆ ಗಮನ ಹರಿಸತೊಡಗಿದರು. ರಾಜ್ಯದ ಕಾರ್ಮಿಕ ಸಂಘಟನೆ, ರೈತ ಸಂಘಟನೆಗಳಲ್ಲಿ ಅವರ ಪಾತ್ರ ಪ್ರಮುಖವಾದುದು.

1982 ರಲ್ಲಿ ರಾಜ್ಯ ಸಮಿತಿಯ ಅಂದಿನ ಕಾರ್ಯದರ್ಶಿಯನ್ನು ಆ ಸ್ಥಾನದಿಂದ ತೆಗೆದು ಹಾಕಬೇಕಾಗಿ ಬಂದ ಸಂದರ್ಭದಲ್ಲಿ ಆ ಜವಾಬ್ದಾರಿಯನ್ನು ಕಾ. ರಾಮಚಂದ್ರರಾವ್ ಹೊರಬೇಕಾಯಿತು. ಕಳೆದ 16 ವರುಷಗಳಲ್ಲಿ ಅವರು ರಾಜ್ಯ ಸಮಿತಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ.

ಕಿಸಾನ್ ಸಭಾದ ರಾಜ್ಯ ಸಮಿತಿ ಕಾರ್ಯದರ್ಶಿಯಾಗಿಯೂ ಇದೇ ಸಂದರ್ಭದಲ್ಲಿ ಕೆಲಸ ಮಾಡಿ ಪಕ್ಷ ಹಾಗೂ ಕಿಸಾನ್ ಸಭಾವನ್ನು ರಾಜ್ಯದ ಹೆಚ್ಚಿನ ಜಿಲ್ಲೆಗಳಲ್ಲಿ ವಿಸ್ತರಿಸಲು ಅವರು ಪಟ್ಟ ಶ್ರಮ ಮಹತ್ವಪೂರ್ಣವಾದುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಕ್ಷದಲ್ಲಿ ದುಡಿಯಲು ಆರಂಭ ಮಾಡಿ ಅವರು ರಾಜ್ಯ ಮುಖಂಡರಾಗಿ ಬೆಳೆದುದು ಮಾತ್ರವಲ್ಲ ತನ್ನ ಅಂತ್ಯ ಕಾಲದಲ್ಲಿ ಕೇಂದ್ರ ಸಮಿತಿ ಸದಸ್ಯರಾಗಿ ಇದ್ದರು. ಅವರು ಪಕ್ಷದ ಜೀವನದಲ್ಲಿ ಯೋಗ್ಯ ಸ್ಥಾನವನ್ನೇ ಪಡೆದಿದ್ದಾರೆ. ಅದು ಅವರ ಅವಿಶ್ರಾಂತ ದುಡಿಮೆಯ ಫಲ. ಅವರೊಬ್ಬ ಸರಳ ಆದರ್ಶ ಜೀವಿ. ಅದೇ ವೇಳೆ ಗುರಿ ಸಾಧಿಸುವುದರಲ್ಲಿ ಛಲವಾದಿ, ಎಂತಹ ಕಷ್ಟ ಬಂದರೂ ಆರೋಗ್ಯ ಕೆಟ್ಟು ಹೋದರೂ, ಕುಟುಂಬದ ಸಮಸ್ಯೆಗಳಿದ್ದರೂ ತಾನು ನಡೆದುಹೋದ ದಾರಿಯಿಂದ ವಿಚಲಿತ ರಾಗಲಿಲ್ಲ. ಹಿಂದೆ ನೋಡದೇ ಮುನ್ನಡೆದ ವ್ಯಕ್ತಿತ್ವ. ನಿಜವಾಗಿಯೂ ಅವರೊಬ್ಬ ಕ್ರಾಂತಿಕಾರಿ. ಅವರ ಸ್ಫೂರ್ತಿ ಆರಂಭದ ದಿನಗಳಲ್ಲಿ ನಾನು ಅವರೊಂದಿಗೆ ಹೊಂದಿದ್ದ ಸಂಪರ್ಕ, ಆತ್ಮೀಯತೆ, ಸರಳತೆ, ಅನೇಕ ಸಂದರ್ಭಗಳಲ್ಲಿ ನಾವು ಒಟ್ಟಾಗಿ ಸೇರಿದಾಗ ಚರ್ಚಿಸಿದ ಅನೇಕ ವಿಷಯಗಳು ಇವೆಲ್ಲಾ ಅದರ ಬಗ್ಗೆ ನನ್ನ ನೆನಪುಗಳು ಅಚ್ಚಳಿಯದೇ ಉಳಿಯುವಂತೆ ಮಾಡಿವೆ.



ಉತ್ತರ ಕೋರಿಯಾದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿಯ ನಿಯೋಗವೊಂದರಲ್ಲಿ ಮಾಸ್ಟ್ರು

ಜನಸಮೂಹಗಳ ಸಂಘಟನೆಯಲ್ಲಿ



ತೊದಲು ನುಡಿಗಳಲ್ಲೇ ಹೊಸ ನಡಿಗೆ ಕಲಿಸಿದ ಸಂಗಾತಿ

ಎಸ್.ವೈ.ಗುರುಶಾಂತ್

'ಮಾಸ್ತ್ರ' ಎಂದೇ ಮೊದಲು ಅವರು ಪರಿಚಯವಾದದ್ದು. ಕರ್ನಾಟಕದಲ್ಲಿ ಯುವಜನ ಚಳುವಳಿ ಹಾಗೂ ಸಂಘಟನೆ ರೂಪಿಸಲು ಸಿದ್ಧತೆಯಾಗಿ 1980 ರಲ್ಲಿ ರಾಯಚೂರಿನೊಳಗೆ ಒಂದು ಅಧ್ಯಯನ ಶಿಬಿರ ವ್ಯವಸ್ಥೆಯಾಗಿತ್ತು. ಅಲ್ಲಿಗೆ ಹಾಜರಾಗಿ ಬಂದ ಹೊಸಪೇಟೆಯ ಸಂಗಾತಿಗಳು ಪಿ.ಆರ್.ರವರು ದ್ವಂದಮಾನ ಚಾರಿತ್ರಿಕ ಭೌತಿಕವಾದ ಕುರಿತು ವಿವರಿಸುವಾಗ

ನೀಡುತ್ತಿದ್ದ ಉದಾಹರಣೆಗಳು, ಶೈಲಿ ಮುಂತಾದವುಗಳನ್ನು ಹಾಗೇ ವರ್ಣಿಸಿದರು.

ಚಳುವಳಿಯೊಳಗೆ ಅಂಬೆಗಾಲಿಡುತ್ತಿದ್ದ ನಮಗೆಲ್ಲರಿಗೂ ಅದೊಂದು ವಿಶೇಷ ಅನುಭವ. ಹೊಸದಾಗಿ ರಾಜ್ಯ ಕಾರ್ಯದರ್ಶಿಯ ಜವಾಬ್ದಾರಿಯನ್ನು ವಹಿಸಿಕೊಂಡ ನಂತರವೇ ಅವರನ್ನು ನಾನು ಭೇಟಿಯಾದದ್ದು. ಬಳ್ಳಾರಿ ಪ್ರಾದೇಶಿಕ ಸಮಿತಿಗಳ ಸಭೆಗೆ ಕಾಂ. ಎನ್.ಕೆ.ಯವರೊಂದಿಗೆ ಅವರು ಆಗಾಗ ಹಾಜರಾಗುತ್ತಿದ್ದರು.

ಸಂಗಾತಿ ಪಿ.ಆರ್.ರವರಿಗೆ ತಾವು 'ಮಾಸ್ತ್ರ' ಎಂದೇ ಹೇಳಿಕೊಳ್ಳಲು ಬಹು ಸಂತೋಷ. ...... ನಾನು ಮಾಸ್ತ್ರ ಅಲ್ಲವೇ .... ಎಂದು ಹೇಳಿದ್ದು ಲೆಕ್ಕ ಇಡಲು ಸಾಧ್ಯವೇ? ಪಾಠ ಮಾಡುವುದು ಅವರಿಗೆ ಎಲ್ಲಿಲ್ಲದ ಖುಷಿ. ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐ. ಕಾರ್ಯಕರ್ತರಿಗೆ ಶಿಬಿರವನ್ನು ಚಿಂತಾಮಣಿಯ ಕೋನುಕುಂಟ್ಲುವಿನಲ್ಲಿ 80 ರ ದಶಕದಲ್ಲಿ ಸಂಘಟಿಸಿದ್ದೆವು. ಮಾಸ್ತ್ರ ಒಂದು ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಪ್ರಶ್ನೋತ್ತರವೂ ಮುಗಿಯಿತು. ಟೀ ವಿರಾಮದಲ್ಲಿ ಹಾಗೆ ಮಾತನಾಡುತ್ತಾ ನನ್ನ ಹೆಗಲ ಮೇಲೆ ಕೈ ಹಾಕಿ ಸ್ವಲ್ಪದೂರ ಕರೆದುಕೊಂಡು ಹೋದರು.

ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಾತು ಗಳಂಚಿನಲ್ಲಿ ಅವರು ಭಾವೋದ್ವಿಕ್ತರಾದರು. ನೋಡಿದರೆ ಅವರ ಕಣ್ಣಲ್ಲಿ ನೀರಾಡುತ್ತಿತ್ತು. ಸಾವರಿಸಿಕೊಂಡು ನಂತರ ಹೇಳಿದರು "ಮಕ್ಕಳಿಗೆ ಕಲಿಯುವ ಆಸಕ್ತಿ ಎಷ್ಟಿದೆ ನೋಡು.... ಇಷ್ಟು ದಿನಗಳು ಅವರಿಗೆ ವಿಷಯ ತಿಳಿಸದೇ ಬಿಟ್ಟೆವಲ್ಲಾ...."

1991 ರ ಸಂಸತ್ ಚುನಾವಣೆಗಳಲ್ಲಿ ಮಂಗಳೂರಿನ ಅಭ್ಯರ್ಥಿ ಅವರು. ಪ್ರಚಾರ ಕಾರ್ಯದಲ್ಲಿ ಅವರೊಂದಿಗೆ ನಾನಿದ್ದೆ. ಬಹಿರಂಗ ಸಭೆಗಳಲ್ಲಿ ಬಹಳ ದೀರ್ಘವಾಗಿ ಅವರು ಮಾತನಾಡುತ್ತಿದ್ದರು. ಅಭ್ಯರ್ಥಿಯಾಗಿ ಮುಂದಿನ ಸಭೆಗಳಿಗೆ ಹೋಗಬೇಕಾಗಿರುವಾಗ ಅಷ್ಟೊಂದು ದೀರ್ಘವಾಗಿ ಮಾತನಾಡುವುದು ಅನಗತ್ಯವೆಂದು ನಾನು ಅಭಿಪ್ರಾಯ ತಿಳಿಸಿದೆ. ಅವರೆಂದರು".... ಈ ಜನತೆಗೆ ರಾಜಕೀಯವನ್ನು ಯಾರೂ ವಿವರಿಸಿ ಹೇಳೋದೇ ಇಲ್ಲ. ಇದು ಒಂದು ಒಳ್ಳೇ ಸಂದರ್ಭ" ಅವರೊಂದಿಗೆ ನಡೆದಾಡು ವಾಗಲೆಲ್ಲಾ ದ.ಕನ್ನಡದ ಧೀರೋದ್ಧಾತ್ತ ಚಳುವಳಿಯನ್ನು ವಿವರಿಸುತ್ತಿದ್ದರು. ಹಲವಾರು ಸಂಗಾತಿಗಳನ್ನು ಪರಿಚಯಿಸಿ ದರು. ಪಕ್ಷದ ಬಗೆಗಿನ ತಿಳುವಳಿಕೆ, ಹೆಮ್ಮೆ ನನ್ನಲ್ಲಿ ಬಲಿಯಿತು.

ಮಾಸ್ತ್ರಗೆ ಕೇವಲ ಎಸ್.ಎಫ್.ಐ. ಮಾತ್ರವಲ್ಲ, ಡಿವೈಎಫ್ಐ, ಮಹಿಳಾ ಸಂಘಟನೆ, ರೈತ-ಕೂಲಿಕಾರರ ಸಂಘಗಳು, ಸಾಹಿತ್ಯ-ವಿಜ್ಞಾನ ಎಲ್ಲಾ ಸಂಘಟನೆಗಳೂ ಬೆಳೆಯಬೇಕು, ವಿಶಾಲ ವಾಗಿ ಹರಡಬೇಕು ಎಂಬ ಬಗ್ಗೆ ಎಲ್ಲಿಲ್ಲದ ಕಾಳಜಿ. ಅದಕ್ಕೆ ಇತರೆ ಸಂಗಾತಿ ಗಳೊಂದಿಗೆ ನೆರವು. ಸಂಗಾತಿಗಳು ಬೆಳೆಯಲು, ಉಳಿಸಿಕೊಳ್ಳಲು ಯತ್ನ.

ಅವರ ಅಭ್ಯಾಸ ಎಲ್ಲಾ ವಿಷಯಗಳ ಬಗ್ಗೆಯೂ ಇತ್ತು ಮತ್ತು ಆಳವಾಗಿತ್ತು. ಅವರ ಉಪನ್ಯಾಸಗಳಲ್ಲಿ ಇದು ಗೋಚರವಾಗುತ್ತಿತ್ತು. ಕೆಲವೊಮ್ಮೆ "......... ನೀವು ನೀಡಿದ ಉಪನ್ಯಾಸದ ವಿಷಯ ಏನು?" ಎಂದು ತಮಾಷೆಯಾಗಿ ಕೇಳಿದ ನೆನಪು ಹಲವು.

ಕರ್ನಾಟಕದ ಮಹಿಳಾ ಚಳುವಳಿಯ ಸಂಗಾತಿ

ವಿಮಲಾ ಕೆ.ಎಸ್.

ಒಂದು ವರ್ಷದ ಹಿಂದೆ. ಬೆಳಗಿನ ಜಾವ 3.50 ಗಾಢ ನಿದ್ದೆಯಿಂದ ಬಡಿದೆಬ್ಬಿಸುವಂತೆ ಟೆಲಿಫೋನ್ ಗಂಟೆ ಬಾರಿಸಿದಾಗ ಗಡಬಡಿಸಿ ಎದ್ದೆ. ಯಾವಾಗಲೂ ನಿದ್ದೆ ಬಾರದ ಬುದ್ಧಿಗೇಡಿಗಳು ಮಾಡುವ ಕಿಡಿಗೇಡಿ ಕರೆಯೇ ಇರಬೇಕೆಂದುಕೊಂಡರೂ ಯಾಂತ್ರಿಕವಾಗಿ ಕೈ ರಿಸೀವರ್ ಎತ್ತಿಕೊಂಡಿತ್ತು. ಅತ್ತ ಕಡೆಯಿಂದ ಕೇಳಿದ ಭಾರವಾದ ಸ್ವರವೇ ಮುಂದೆ ಕೇಳಬಹುದಾದ ವಿಷಯ ಅತ್ಯಂತ ಗಂಭೀರವಾದ ವಿಷಯ ಎಂಬ ಸೂಚನೆ ಕೊಟ್ಟಿತಾದರೂ ಅದು ಕರ್ಣಕಠೋರವಾದದ್ದಾಗಬಹುದೆಂದು ಕಲ್ಪಿಸಿರಲಿಲ್ಲ. ಕಿವಿಗಳನ್ನು ನಂಬಲು ಮನಸ್ಸು ಸಿದ್ಧವೇ ಇರಲಿಲ್ಲ. ಮನಸ್ಸು ಸಿದ್ಧವಿರಲಿ ಇಲ್ಲದಿರಲಿ ಇಂದು ಅದೊಂದು ಕಟುಸತ್ಯ, ಕಹಿ ವಾಸ್ತವ. ನಮ್ಮೆಲರ ಪ್ರೀತಿಯ ಮಾಸ್ತು, ಮಾರ್ಗದರ್ಶಕ, ಹಿತಚಿಂತಕ, ಪಕ್ಷದ ನೇತಾರ ಈಗ ಇತಿಹಾಸದ ಪುಟಗಳಲ್ಲಿ.

ಕೆಲವು ವರ್ಷಗಳ ಹಿಂದೆ ಕಛೇರಿಯಲ್ಲಿ ಕೆಲಸ ಮಾಡುತ್ತಿರುವಾಗ ಬಂದ 'ಬಿ.ಟಿ.ಆರ್' ಇನ್ನಿಲ್ಲ ಎಂಬ ಸುದ್ದಿ ಕೇಳಿ ಮನಸ್ಸು ಒದ್ದಾಡಿತ್ತು. 'ನಮ್ಮವರ' ಒಳಗೇ ಇರುವ ಪುರುಷ ಪ್ರಧಾನ ಮೌಲ್ಯಗಳ ಬಗ್ಗೆ ನಿರ್ದಾಕ್ಷಿಣ್ಯವಾಗಿ ನೇರವಾಗಿಯೇ ಹೇಳಿ ಬಿಡುತ್ತಿದ್ದ ಬಿ.ಟಿ.ಆರ್.ರಂತಹ ಒಬ್ಬ ಇಡೀ ಮಹಿಳಾ ಚಳುವಳಿಗೇ ಸಂಗಾತಿಯಾಗಿದ್ದ ಕಾಮ್ರೇಡ್ ಇನ್ನಿಲ್ಲವಾದಾಗ ಮನಸ್ಸು ಮೂಕವಾಗಿ ರೋಧಿಸಿತ್ತು. ಅಂತಹುದೇ ಒಬ್ಬ ಸಂಗಾತಿ, ಕರ್ನಾಟಕದ ಮಹಿಳಾ ಚಳುವಳಿಯ ಸಂಗಾತಿ ಮಾಸ್ತು ಇನ್ನಿಲ್ಲ. ಪ್ರತಿ ದಿನ ಪ್ರತಿಕ್ಷಣ ಸಣ್ಣ ವಿಷಯಕ್ಕೂ ಗೊಂದಲ ಎನಿಸಿದಾಗ ಅವರನ್ನೇ ಆಶ್ರಯಿಸುತ್ತಿದ್ದ ನಮಗೆ ಅವರಿನ್ನಿಲ್ಲ ಎಂಬ ಅನಿಸಿಕೆಯೇ ಈ ಕ್ಷಣದಲ್ಲಿಯೂ ಕಣ್ಣಾಲಿಗಳನ್ನು ತುಂಬಿಸುತ್ತದೆ. ಮನಸ್ಸು ಭಾವೋದ್ವೇಗಕ್ಕೆ ಒಳಗಾಗುತ್ತದೆ. ಶೂನ್ಯ ಆವರಿಸುತ್ತದೆ. ಮನಸ್ಸು ಖಿನ್ನವಾಗುತ್ತದೆ.

ಜ್ಞಾನ ಭಂಡಾರವನ್ನೇ ಹೊತ್ತಿದ್ದರೂ ಒಂದಿನಿತೂ ಅಹಂಕಾರವಿರಲಿಲ್ಲ. ಒಂದಿಷ್ಟು ತಿಳಿದುಕೊಂಡಿದ್ದರೂ ತಾನೇ ಪಂಡಿತರೆಂದು ಅಹಂಕಾರ ಪಡುವ ವ್ಯಕ್ತಿಗಳ ಸಮೂಹದಲ್ಲಿ ಮಾಸ್ತು ರಂತವರು ಬಹಳ ಅಪರೂಪ.

ಮಹಿಳಾ ಚಳುವಳಿಯನ್ನು ಕರ್ನಾಟಕದಲ್ಲಿ ಬೆಳೆಸುವ ಕುರಿತು ಸಾಕಷ್ಟು ಗಂಭೀರವಾಗಿ ಚಿಂತಿಸುತ್ತಿದ್ದ ಮಾಸ್ತು ಅದಕ್ಕಾಗಿ ಚರ್ಚೆ ಮಾಡಲು, ಯೋಜನೆ ರೂಪಿಸಲು ಎಷ್ಟು ಸಮಯವನ್ನು ಬೇಕಾದರೂ ವ್ಯಯಿಸುತ್ತಿದ್ದರು. ಸಂಘಟನೆ ಬೆಳೆಯಲು ಸಾಧ್ಯ ಎಂದು ಆಗಾಗ ಮಾಸ್ತು ಹೇಳುತ್ತಿದ್ದರು.

ಯಾರ ಮನಸ್ಸಿಗೂ ನೋವು ಮಾಡಲಿಚ್ಛಿಸದ ಮನೋಭಾವದ ಮಾಸ್ತು 'ಅಜಾತ ಶತ್ರು' ವಾಗಿದ್ದರು.

ಇತ್ತೀಚೆಗಷ್ಟೇ ನಡೆದ ಅಖಿಲ ಭಾರತ ಮಹಿಳಾ ಸಮ್ಮೇಳನದ ಯಶಸ್ಸಿನ ಪೂರ್ಣ ಗೌರವ ಮಾಸ್ತಿಗೇ ಸಲ್ಲಬೇಕು. ಸ್ವಂತ ಸಂಘಟನೆಯ ಕಾರ್ಯಕರ್ತರಿಗಿಂತ ಹೆಚ್ಚು ಆಸಕ್ತಿ ವಹಿಸಿ, ಶಕ್ತಿ ಮೀರಿ ಕೆಲಸ ಮಾಡಿದ ಮಾಸ್ತು ತಮ್ಮ ದೈಹಿಕ ಶ್ರಮವನ್ನು ಗಣನೆಗೆ ತೆಗೆದುಕೊಳ್ಳದೇ ಅಹರ್ನಿಶಿ ದುಡಿದದ್ದೇ ಸಾಮೂಹಿಕ ಸಂಘಟನೆಗಳ ಬೆಳವಣಿಗೆಯ

ಕುರಿತ ಅವರ ಕಾಳಜಿಗೆ ಸಾಕ್ಷಿ.

ಬಾಲ್ಯಾವಸ್ಥೆಯಲ್ಲೇ ಇದೆಯಾದರೂ - ಸಂಘಟನೆ ಬೆಳೆಯಲು ಈ ಸಮ್ಮೇಳನ ಪೂರಕವಾಗುತ್ತದೆಂಬ ವಿಶ್ವಾಸ ಅವರಿಗಿತ್ತು. ಆ ಸಂದರ್ಭದಲ್ಲಿ ನನ್ನೊಡನೆ ಅವರು ಹಲವು ಬಾರಿ ಹೇಳುತ್ತಿದ್ದರು. "ಕರ್ನಾಟಕ ರಾಜ್ಯದಲ್ಲಿ ಇಂದಿನ ಸ್ಥಿತಿಯಲ್ಲಿ ಯಾವ ಸಂಘಟನೆ ಪುಟಿದೆದ್ದು ಮೇಲೆ ಬರುತ್ತದೆ ಎಂದು ಹೇಳಲಾಗುವುದಿಲ್ಲ. ನಮ್ಮ ಗಮನವನ್ನು ಸಂಪೂರ್ಣವಾಗಿ ಸಂಘಟನಾ ಶಕ್ತಿಯನ್ನು ಕ್ರೋಢೀಕರಿಸುವತ್ತ ಕೇಂದ್ರೀಕರಿಸಬೇಕು. ನೋಡು ಈ ಸಮ್ಮೇಳನ ನಿನ್ನ ಮೇಲೆ ತುಂಬ ಒತ್ತಡ ಹೇರುತ್ತಿದೆ. ಆದರೆ ಮುಂದಿನ ಬೆಳವಣಿಗೆಯತ್ತ ನೀನು ದೃಷ್ಟಿ ಇಡಬೇಕು" ಎನ್ನುತ್ತಿದ್ದರು ಮಾಸ್ತ್ರು(ಅವರ ಆ ಅಭಿಪ್ರಾಯ ಸರಿ ಇತ್ತು ಎಂಬುದು ನಮಗೆ ಈಗ ದೃಢವಾಗಿದೆ)

ನಮಗೆಲ್ಲಾ ಅವರು ಇಷ್ಟು ಬೇಗ ಅಂತಿಮ ವಿದಾಯ ಹೇಳಿ ಬಿಡಬಹುದೆಂಬ ಕಲ್ಪನೆಯೇ ಯಾರಿಗೂ ಇರಲಿಲ್ಲ. ನಮ್ಮ ಸಮ್ಮೇಳನದ ಸಂದರ್ಭದಲ್ಲಿ ಬಿಡುವಿರದೇ ದುಡಿದದ್ದೇ ಅವರ ಶರೀರದ ಬಲವನ್ನು ಕುಗ್ಗಿಸಿ ಬಿಟ್ಟತೇನೋ ಎಂಬ ಪಾಪ ಪ್ರಜ್ಞೆ ನನ್ನನ್ನು ಕಾಡುತ್ತಿದೆ.

ಅಗಲಿದ ಮಾಸ್ತ್ರು ನಮಗೆ ಬಿಟ್ಟು ಹೋಗಿರುವ ಅವರ ಕನಸುಗಳಿವೆ. ಪ್ರಜಾ ಪ್ರಭುತ್ವ ಚಳುವಳಿಯನ್ನು ಕರ್ನಾಟಕದಲ್ಲಿ ಕಟ್ಟಿಬೆಳೆಸಬೇಕಾದ ಜವಾಬ್ದಾರಿಗಳಿವೆ. ನಾವೆಲ್ಲರೂ ಆ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ನಿಮ್ಮ ಕನಸನ್ನು ಸಾಕಾರಗೊಳಿಸುತ್ತೇವೆ. ಕಾಂ. ಪಿ.ಆರ್. ನಿಮಗಿದೋ ಅಶ್ರುಪೂರಿತ ಲಾಲ್ ಸಲಾಂ.

ಬೆಂಗಳೂರಿನಲ್ಲಿ ನಡೆದ AIDWAದ ಅಖಿಲ ಭಾರತ ಸಮ್ಮೇಳನದ ಸಂದರ್ಭದಲ್ಲಿ ಮಹಿಳಾ ಚಳುವಳಿಯ ಮುಖಂಡರಾದ ಕ್ಯಾಪ್ಟನ್ ಲಕ್ಷ್ಮಿ ಸುಭಾಶಿಣಿ ಅಲಿ, ಕೆ.ಎಸ್. ವಿಮಲಾ ಮತ್ತು ಸ್ವಯಂಸೇವಕ



‘ಮಾಸ್ತರರು ನಮಗೆ ಕೊಟ್ಟ ಹೋಂ ವರ್ಕ್ ಮುಗಿಸಬೇಕಾಗಿದೆ....’

★ ಅರ್ಜುನ್

1989 ರಲ್ಲಿ ಬೆಂಗಳೂರಿನ ವಿಜ್ಞಾನಿಗಳು ಭೋಪಾಲ್ ಗ್ಯಾಸ್ ದುರಂತದ ಇತ್ಯರ್ಥದ ಬಗ್ಗೆ ಪ್ರತಿಭಟನಾ ಚಳುವಳಿ ನಡೆಸಿದ್ದರು. ಅದೇ ರೀತಿ ಆ ಮೇಲೆ ಡೆಂಕಲ್ ಒಪ್ಪಂದದ ವಿರುದ್ಧ ರಾಜ್ಯವ್ಯಾಪಿ ಚಳುವಳಿ ನಡೆಸಿದ್ದರು. ಮಾಸ್ಟ್ರು ಈ ಎರಡು ಚಳುವಳಿಗಳನ್ನು ಮೆಚ್ಚಿಕೊಂಡು ನಮಗೆ ಅದನ್ನು ಮುಂದೆ ಕೊಂಡೊಯ್ಯುವ ಬಗ್ಗೆ ಸಲಹೆಗಳನ್ನು ನೀಡಿದ್ದರು. ಡಂಕೆಲ್ ಒಪ್ಪಂದ ವಿರೋಧಿ ಸಭೆಗಳಲ್ಲಿ ಅವರು ಭಾಗವಹಿಸಿ, ಈ ವಿಷಯವನ್ನು ಬೀಡಿ ಕಾರ್ಮಿಕರ ಮಟ್ಟದಲ್ಲಿ ತಿಳಿಸುವುದು ಹೇಗೆ ಎಂದು ಸಲಹೆ ಕೊಟ್ಟಿದ್ದರು.

ಮಾಸ್ಟ್ರು ಸ್ವತಃ ವಿಜ್ಞಾನದ ವಿದ್ಯಾರ್ಥಿ, ಮಾಸ್ಟ್ರಾಗಿದ್ದರಿಂದ ವಿಜ್ಞಾನದಲ್ಲಿ ಅಪಾರ ಆಸಕ್ತಿ ಹೊಂದಿದ್ದರು. ಅವರಿಗೆ ವಿಜ್ಞಾನದ ಎಲ್ಲಾ ಶಾಖೆಗಳ ಮೂಲಭೂತ ಪರಿಚಯವಿತ್ತು. ಅದನ್ನು ಯಾವಾಗಲೂ ಬೆಳೆಸಿಕೊಳ್ಳುತ್ತಿದ್ದರು. ಆದ್ದರಿಂದ ವಿಜ್ಞಾನಿಗಳನ್ನು ಭೇಟಿ ಮಾಡಿದಾಗ ಖುಷಿಯಾಗುತ್ತಿತ್ತು. ಇದು ಸಮಾಜ ವಿಜ್ಞಾನಗಳ ಬಗೆಗೂ ನಿಜವಾಗಿತ್ತು. ಅವರು ಆಧುನಿಕ ತಂತ್ರಜ್ಞಾನವನ್ನು ಜನ-ಪರ ಚಳುವಳಿಗೆ ಬಳಸುವ ಬಗ್ಗೆ ಬಹಳ ಕಾಳಜಿ ಹೊಂದಿದ್ದರು. ಪಾರ್ಟಿ ಜನಪರ ಚಳುವಳಿಗಳು,ಕ10 ಇ-ಮೈಲ್ ನಂತಹ ಸೌಲಭ್ಯಗಳನ್ನು ಹೊಂದುವ ಬಗ್ಗೆ ಅವರು ಶ್ರಮಿಸಿದ್ದರು.



ಸಾಕ್ಷರತಾ ಚಳುವಳಿಯಲ್ಲಿ ಅವರಿಗೆ ಬಹಳ ಆಸಕ್ತಿ ಇತ್ತು. ಸಾಕ್ಷರತಾ ಚಳುವಳಿ ಇಡೀ ಸಮಾಜದ ಆದ್ಯತೆ. ಎಲ್ಲಾ ಪಾರ್ಟಿ, ಸಾಮೂಹಿಕ ಸಂಘಟನೆಗಳ ಸಭೆಯಲ್ಲಿ ಅದರ ಸದಸ್ಯರ ಸಂಪೂರ್ಣ ಸಾಕ್ಷರತೆಯ ಬಗ್ಗೆ ಅವರು ಒತ್ತು ಕೊಡುತ್ತಿದ್ದರು.

ಒಂದು ದಿನ ಇಂಡಿಯನ್ ಇನ್ಸ್‌ಟಿಟ್ಯೂಟ್‌ನ ‘ಮುಕ್ತ ದಿನ’ ದಂದು ಭೇಟಿ ಕೊಟ್ಟಿದ್ದರು. ಹೈ ವೋಲ್ಟೇಜ್ ಡಿಪಾರ್ಟ್‌ಮೆಂಟ್‌ನ ಮಿಂಚು, ಗುಡುಗುಗಳ ಪ್ರದರ್ಶನವನ್ನು ಬಹಳ ಮೆಚ್ಚಿಕೊಂಡಿದ್ದರು. ಅದನ್ನು ನೋಡುತ್ತಾ ‘ನಮ್ಮ ಕಿಸಾನ್ ಸಭಾದ ಸದಸ್ಯರನ್ನು ಕರಕೊಂಡು ಬರಬೇಕು, ಗುಡುಗು-ಮಿಂಚಿಗೆ ದೇವರಾಜ ಇಂದ್ರ ಬೇಕಾಗಿಲ್ಲ ಎಂದು ಅವರಿಗೆ ಮನದಟ್ಟು ಮಾಡಬಹುದು’ ಎಂದು ಹೇಳಿದ್ದರು.

ಬೆಳವಣಿಗೆಗೆ ವಿಜ್ಞಾನವನ್ನು ಬಳಸುವ ಬಗ್ಗೆ ಅವರ ಕಾಳಜಿ ಬಹಳ. ‘ಅಸ್ತ್ರ ಸೂತ್ರ’ ಎಂಬ ಗ್ರಾಮೀಣ ಪ್ರದೇಶಗಳಿಗೆ ತಕ್ಕ ತಂತ್ರಜ್ಞಾನ ಬಳಸುವ ಐ.ಐ.ಎಸ್.ಸಿ.ಯ ವಿಭಾಗದ ಕೆಲಸದಲ್ಲಿ ಅವರು ಬಹಳ ಆಸಕ್ತಿ ಹೊಂದಿದ್ದರು. ಅದನ್ನು ಸಿಪಿಐ(ಎಂ)


ಪ್ರಭಾವ ಇರುವ ಗ್ರಾಮಪಂಚಾಯತ್, ಮಂಡಲ ಪಂಚಾಯತ್‌ನಲ್ಲಿ ಬಳಸಬೇಕು ಎಂಬ ಬಗ್ಗೆ ಬಹಳ ಪ್ರಯತ್ನ ಮಾಡಿದರು. ಕಿಸಾನ್ ಸಭಾ ಚಳುವಳಿ ಮಾತ್ರವಲ್ಲ, ವಿಜ್ಞಾನ ಬಳಸಿ ಬೆಳವಣಿಗೆ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಪ್ರಯತ್ನ ಮಾಡಿದ್ದರು.

ಮಾಸ್ಟ್ರಿಗೆ ಎಲ್ಲರಿಗೂ ತಮಗೆ ಗೊತ್ತಿದ್ದನ್ನು ಕಲಿಸಬೇಕು ಎಂಬ ತವಕ. ಲೆನಿನ್, ಮಾವೋ, ಇಎಂಎಸ್ ಅವರಿಗೆ ಮಾದರಿ ಮಾಸ್ಟ್ರಾಗಿದ್ದರು. 'ಇ.ಎಂ.ಎಸ್. ಕೇರಳವನ್ನು ಅಧ್ಯಯನ ಮಾಡಿದ ಹಾಗೆ ನಾವು ಕರ್ನಾಟಕ ಅಧ್ಯಯನ ಮಾಡಬೇಕು ಎಂದು ವಿಜ್ಞಾನಿಗಳ ಗುಂಪಿಗೆ ಯಾವಾಗಲೂ ಹೇಳುತ್ತಿದ್ದರು. ಇದನ್ನು ಮಾಸ್ಟ್ರು ನಮಗೆ ಕೊಟ್ಟ ಹೋಂವರ್ಕ್ ಎಂದು ನಾನು ಭಾವಿಸಿದ್ದೇನೆ. ಮಾಸ್ಟ್ರ ಹೋಂವರ್ಕ್ ಮುಗಿಸುವ ಭಾರ ನಮ್ಮ ಮೇಲಿದೆ.

(⋆ ಅರ್ಜುನ್ ಸ್ವತಃ ವಿಜ್ಞಾನಿಯಾಗಿದ್ದು ತಮ್ಮನ್ನು ಸಾಕ್ಷರತಾ, ಜನಪರ ವಿಜ್ಞಾನ ಚಳುವಳಿಯಲ್ಲಿ ತೊಡಗಿಸಿಕೊಂಡವರು)



ಸಪ್ಟೆಂಬರ್ 18, 1999 ರಂದು ಬೆಂಗಳೂರಿನಲ್ಲಿ ನಡೆದ ಸರಳವಾದ, ಆದರೆ ವಿಶಿಷ್ಟವಾದ ಒಂದು ಸಮಾರಂಭದಲ್ಲಿ ಪ್ರೀತಿಯ ಮಾಸ್ಟ್ರನ್ನು ಬೆಂಗಳೂರಿನ ಸಂಗಾತಿಗಳು ನೆನಪಿಸಿಕೊಂಡರು. ರಾಜ್ಯ ಕಾರ್ಯದರ್ಶಿ ಕಾಂ. ಸೂರಿ, 'ಶೂದ್ರ' ಪತ್ರಿಕೆಯ ಸಂಪಾದಕ ಶ್ರೀನಿವಾಸ್, ಜೆ.ಎಂ.ಎಸ್. ನ ಕೆ.ಎಸ್.ವಿಮಲಾ, ದುಡಿಯುವ ಮಹಿಳೆಯರ ಸಮಿತಿಯ ಎಸ್.ವರಲಕ್ಷ್ಮಿ, ಡಿವೈಎಫ್ಐನ ಮಹಾಂತೇಶ್, ಎಸ್‌ಎಫ್ಐನ ರಾಮಕೃಷ್ಣ, ಪತ್ರಕರ್ತೆ ಶಾಂತಕುಮಾರಿ ಹಾಗೂ ಮಾಸ್ಟ್ರ ಕಿರಿಯ ಪುತ್ರಿ ಉಷಾರವರ ನೆನಪುಗಳು ಕಾಂ. ರಾಮಚಂದ್ರ ರಾಯರ ವ್ಯಕ್ತಿತ್ವದ ವಿಭಿನ್ನ ಆಯಾಮಗಳನ್ನು ಸಭಿಕರೆದುರು ತೆರೆದಿಟ್ಟಿತು. ಜೆ.ಎಂ.ಎಸ್.ನ ಎನ್.ಪ್ರಭಾ ಕಾರ್ಯಕ್ರಮ ನಡೆಸಿಕೊಟ್ಟರು. 'ಐಕ್ಯರಂಗ' ದ ಸಂಪಾದಕರಾದ ಜಿ.ಎನ್.ನಾಗರಾಜ್ ರವರ ಪ್ರಸ್ತಾವಿಕ ಮಾತುಗಳೊಂದಿಗೆ ಈ ಕಾರ್ಯಕ್ರಮ ಆರಂಭವಾಯಿತು. ಜನವಾದಿ ಮಹಿಳಾ ಸಂಘಟನೆ ಈ ಕಾರ್ಯಕ್ರಮವನ್ನು ಏರ್ಪಡಿಸಿತ್ತು.



ದ.ಕ. ಜಿಲ್ಲೆಯಲ್ಲಿ ಮಾಸ್ತ್ರ ನೆನಪು

ಶರತ್ ಚಂದ್ರ

ನಮ್ಮ ಅಚ್ಚುಮೆಚ್ಚಿನ ಸಂಪಾದಕರು, ಕರ್ನಾಟಕದ ಇಡೀ ದುಡಿಯುವ ವರ್ಗದ ಪ್ರೀತಿಯ 'ಮಾಸ್ತ್ರ' ಕಾಂ. ಪಿ. ರಾಮಚಂದ್ರ ರಾವ್ ನಮ್ಮನ್ನಗಲಿ ಸೆಪ್ಟೆಂಬರ್ 18 ಕ್ಕೆ ಒಂದು ವರ್ಷ ಆಗಿದೆ. ಈ ಸಂದರ್ಭದಲ್ಲಿ ಅವರನ್ನು ವಿಶಿಷ್ಟ ರೀತಿಯಲ್ಲಿ ನೆನಪಿಸಿಕೊಳ್ಳಬೇಕು ಎಂದು ಐಕ್ಯರಂಗ ತಂಡ ನಿರ್ಧರಿಸಿತು. ಅವರ ನೆನಪಿಗೆ ಒಂದು ಪುರವಣಿಯನ್ನು ತರಬೇಕು, ಅಲ್ಲದೆ ಅದಕ್ಕಾಗಿ ಅವರು ಬಹುಕಾಲ ಕೆಲಸ ಮಾಡಿದ ದಕ್ಷಿಣ ಕನ್ನಡಕ್ಕೆ ಹೋಗಿ ಅವರ ಜತೆ ದಶಕಗಳ ಒಡನಾಟವಿದ್ದ ಸಂಗಾತಿಗಳನ್ನು ಭೇಟಿ ಮಾಡಿ, ಅವರ ಬದುಕು-ಹೋರಾಟಗಳ ಬಗ್ಗೆ ಇನ್ನಷ್ಟು ಮಾಹಿತಿಗಳನ್ನು ಕಲೆಹಾಕಬೇಕೆಂದು ಈ ಕೆಲಸಕ್ಕೆ ನನ್ನನ್ನು ಕಳಿಸಲು ನಮ್ಮ ತಂಡ ನಿರ್ಧರಿಸಿತು.

ಇದಕ್ಕಾಗಿ ನಾನು ಅಲ್ಲಿಗೆ ತೆರಳಿದೆ. ಮೊದಲ ದಿನ ಸೆಪ್ಟೆಂಬರ್ 11 (ಅಂದರೆ ಪಶ್ಚಿಮ ಕರ್ನಾಟಕದಲ್ಲಿ ಚುನಾವಣೆಯ ದಿನ)ಮಾಸ್ತ್ರ ಮನೆಗೆ ಮೊದಲ ಭೇಟಿ. ಅಲ್ಲಿ ಮಾಸ್ತ್ರ ಪತ್ನಿ **ಲೀಲಾ ರಾವ್**, ಕಿರಿಮಗಳು **ಉಷಾ**, ಕಿರಿ ಅಳಿಯ **ಸೂರ್ಯನಾರಾಯಣ ಮೆಹಂದಳೆ** ಜತೆ ಮಾಸ್ತ್ರನ್ನು ನೆನಪಿಸಿಕೊಂಡದ್ದು ಮರೆಯಲಾಗದ ಅನುಭವ. ಮಾಸ್ತ್ರ ಹಲವು ದಶಕಗಳ ಕಾಲ ವಾಸಿಸಿದ್ದ ಮನೆಯಲ್ಲಿ ಉಷಾ "ಇಲ್ಲೇ ಅಂಗಳದಲ್ಲಿ ಯಾವಾಗಲೂ ಕ್ಲಾಸ್ ನಡೆಸುತ್ತಿದ್ದರು" ಎಂದಾಗ, ಮಧ್ಯರಾತ್ರಿಯಲ್ಲಿ ಮಾಸ್ತ್ರನ್ನು ಪಂಚಾಯಿತಿಗೆ ಕರೆದುಕೊಂಡು ಹೋಗುವಾಗ ಇದೇ ಬಾಗಿಲು ಹಾಕಿಕೋ ಅಂತ ಹೊರಟವರು ಬರುತ್ತಿದ್ದದ್ದು ಬೆಳಿಗ್ಗೆ ಎಂದು ಲೀಲಾರವರು ಹೇಳುವಾಗ ಕಣ್ಣಿಗೆ ಕಟ್ಟಿದಂತಿರುತ್ತಿತ್ತು. ಅವರು ಜೈಲಿನಲ್ಲಿ ಇದ್ದಾಗ (ಅವರು 65-66 ರಲ್ಲಿ ಮೈಸೂರಿನಲ್ಲಿ ಒಂದೂವರೆ ವರ್ಷ ಕಾಲ ಜೈಲಿನಲ್ಲಿದ್ದರು. ಆಗ ಜೈಲಿನಿಂದ ಮಕ್ಕಳಿಗೆ ಬರೆದ ಒಂದು ಪತ್ರ ಈ ಪುರವಣಿಯಲ್ಲಿ ಮುದ್ರಿತವಾಗಿದೆ.) ಬರೆದ ಪತ್ರಗಳನ್ನು ತಿರುವಿ ಹಾಕಿದಾಗ ಮಾಸ್ತರ ವ್ಯಕ್ತಿತ್ವದ ಇನ್ನೊಂದು ಮಗ್ಗುಲಿನ ಪರಿಚಯ - ತಂದೆಯಾಗಿ, ಗಂಡನಾಗಿ.

ಮರುದಿನ ಮಾಸ್ತ್ರ ದಶಕಗಳ ಕಾಲ ದುಡಿದ ಬೋಳಾರದ ದ.ಕ ಜಿಲ್ಲಾ ವರ್ಕರ್ಸ್ ಯೂನಿಯನ್ ಕಛೇರಿ ಬಳಿ ಹೊಸದಾಗಿ ಕಟ್ಟಿದ ಜಿಲ್ಲಾ ಸಿಪಿಐ(ಎಂ) ಕಛೇರಿಗೆ ಭೇಟಿ. ಮೊದಲ ಭೇಟಿ 46 ವರ್ಷಗಳಿಂದ ಮಾಸ್ತ್ರ ಜತೆ

ಒಡನಾಟವಿದ್ದ ಹಿರಿಯ ನಾಯಕ ಕೆ.ಆರ್ ಶ್ರೀಯಾನ್‌ರೊಂದಿಗೆ. ಜತೆಜತೆಗೆ ಹಿರಿಯ ನಾಯಕ ಸಿ.ನುಜುಂಡಪ್ಪನವರು ಮಾಸ್ತ ಜತೆ ತಮ್ಮ ಮೂರು ದಶಕಗಳಿಗಿಂತಲೂ ಹೆಚ್ಚಿನ ಒಡನಾಟದ ಅನುಭವದಿಂದ ಮಾಸ್ತ ಕೊಡುಗೆಗಳ ಬಗ್ಗೆ ಹೇಳಿದರು. ಹಲವು ದಿನಗಳ ಕಾಲ 24 ಗಂಟೆ ದುಡಿದ ಆಯಾಸವನ್ನು ಮರೆತು, ತಮ್ಮ ನಾಲ್ಕುವರೆ ದಶಕಗಳ ಒಡನಾಟದ ಬಗ್ಗೆ ಹಂಚಿಕೊಳ್ಳಲು ಬಂದವರು ಜಿಲ್ಲೆಯ ಹಿರಿಯ ಕಾರ್ಮಿಕ ನಾಯಕ ಪೂವಪ್ಪ ಸಾಲ್ಯಾನ್. ಆ ಮೇಲೆ ಭೇಟಿ ಮಾಡಿದ್ದು ಮೂರುವರೆ ದಶಕಗಳಿಂದ ಮಾಸ್ತರರ ಜತೆಗಿನ ಹಲವು ರಸಗಳಿಗೆಗಳನ್ನು ವಿವರವಾಗಿ ಹಂಚಿಕೊಂಡ ಜಿಲ್ಲೆಯ ಇನ್ನೊಬ್ಬ ಹಿರಿಯ ಕಾರ್ಮಿಕ ನಾಯಕ ಕಮಲಾಕ್ಷ ಬಂಗೇರರನ್ನು.

ಮೂರನೇ ದಿನ ಈ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಚಳುವಳಿಯ ಇನ್ನೊಂದು ಪ್ರಬಲ ಕೇಂದ್ರ ಮತ್ತು ಮಾಸ್ತ ಎರಡನೇ ಕಾರ್ಯಕ್ಷೇತ್ರವಾಗಿದ್ದ ಕುಂದಾಪುರಕ್ಕೆ. ನಿಗದಿತ ಸಮಯಕ್ಕೆ ಮೊದಲೇ ಕಾದಿದ್ದರು ಅಬ್ರಹಾಂ ಕರ್ಕಡ, ಸಿ.ನಾರಾಯಣ, ಶಂಕರ್, ದಾಸ ಭಂಡಾರಿ ಮತ್ತು ಮಹಾಬಲ ವಡೇರ ಹೊಬಳಿ. ನಿಗದಿತ ಸಮಯಕ್ಕಿಂತ ತಡವಾಗಿ ಹೋದರೂ ತಾಳ್ಮೆಯಿಂದ ಕಾದಿದ್ದ ಈ ಹಿರಿಯ ನಾಯಕರನ್ನು ಕಾಯಿಸಿದಕ್ಕೆ ನನಗೆ ನಾಚಿಕೆಯಾಯಿತು. ಕುಂದಾಪುರದ ಸುತ್ತಾಮುತ್ತ ಮುಖ್ಯವಾಗಿ 60 ರ ದಶಕದಲ್ಲಿ ಸಿಡಿದ ಹಲವು ಸಮರಶೀಲ ರೈತರ ಹೋರಾಟಗಳನ್ನು, ಅದರಲ್ಲಿ ಮಾಸ್ತ ಪಾತ್ರವನ್ನು ಅವರು ಮೆಲುಕು ಹಾಕಿದರು. ಆ ಸಮರಶೀಲ ರೈತ ಹೋರಾಟಗಳ ಒಂದೊಂದೇ ವಿವರಗಳನ್ನು ಒಬ್ಬೊಬ್ಬರೂ ಬಿಚ್ಚಿಡುತ್ತಿದ್ದಂತೆ ರೋಮಾಂಚನವಾಗುತ್ತಿತ್ತು. ಆ ಹೋರಾಟದಲ್ಲಿ ಪೋಲಿಸರ ಚಿತ್ರಹಿಂಸೆಗೆ ಒಳಗಾದ ಅಬ್ರಹಾಂ ಕರ್ಕಡ, ಜ್ಞಾನ ತಪ್ಪಿ ಬಿದ್ದ ಸಿ.ನಾರಾಯಣ, ಕಾಲು ಮುರಿಸಿಕೊಂಡ ದಾಸ ಭಂಡಾರಿ ಇವೆಲ್ಲಾ ನಿನ್ನೆ ಮೊನ್ನೆ ನಡೆಯಿತೊ ಎನ್ನುವಂತೆ ಹೇಳುತ್ತಿದ್ದರು.

ಈ ಮೂರು ಕಡೆ ನಾವು ಮಾಸ್ತ ನೆನಪು ಮಾಡಿಕೊಳ್ಳುತ್ತಿದ್ದಂತೆ, ಮಾಸ್ತು 'ಐಕ್ಯರಂಗ' ಕ್ಯಾಲೆಂಡರ್ ಒಳಗಿನಿಂದ ನಗುತ್ತಾ, ನಮ್ಮನ್ನು ನೋಡುತ್ತಿದ್ದರು.


ಇನ್ನೂ ಭೇಟಿ ಮಾಡಬೇಕೆಂದಿದ್ದವರು ಹಲವರು. ವಿಭಜಿತ ಕಮ್ಯೂನಿಸ್ಟ್ ಪಕ್ಷದ ಹಿರಿಯ ನಾಯಕ ಬಿ.ವಿ.ಕಕ್ಕಿಲ್ಲಾಯ, ಮಾಸ್ತ ವಿದ್ಯಾರ್ಥಿಗಳಾಗಿದ್ದು ಈಗ ಗಣ್ಯ ಡಾಕ್ಟರ್, ವಕೀಲರು, ಉದ್ಯಮಿಗಳಲ್ಲಿ ಕೆಲವರನ್ನು, ಮಾಸ್ತ ಜತೆ ಹೋರಾಟದ ಬದುಕು ಸಾಗಿಸಿರುವ ಅಸಂಖ್ಯಾತ ನೇಯ್ಗೆ, ಗೇರುಬೀಜ, ಹೆಂಚು, ಬೀಡಿ ಕಾರ್ಮಿಕರಲ್ಲಿ ಕೆಲವರನ್ನಾದರೂ ಭೇಟಿ ಮಾಡಬೇಕೆಂದಿದ್ದುದು ಸಾಧ್ಯವಾಗಿಲ್ಲ.

ಭೇಟಿ ಮಾಡಿದವರಲ್ಲಿ ಹೆಚ್ಚಿನವರು ಮಾಸ್ತ ಪ್ರಮುಖ ವಿಶಿಷ್ಟತೆಗಳ ಬಗ್ಗೆ ಹೇಳಿದರೆ, ಕೆಲವರು ಖಾಸಗಿ ಅನುಭವಗಳನ್ನು, ಘಟನೆಗಳನ್ನು ಹಂಚಿಕೊಂಡರು. ಅವನ್ನು ಈ ಮುಂದೆ ಕೊಡಲಾಗಿದೆ. ಮಾಸ್ತ ಬಗ್ಗೆ ಇವರೆಲ್ಲರ ಭೇಟಿ ನನಗಾದರೂ ಅಭೂತಪೂರ್ವ ಅನುಭವವಾಗಿತ್ತು. ಅವರು ಹಂಚಿಕೊಂಡ ಹೋರಾಟದ ಅನುಭವಗಳು ಎಷ್ಟು ಉತ್ಸಾಹ ತುಂಬುವದ್ದಾಗಿದ್ದವೆಂದರೆ, ಈ ಹೋರಾಟಗಳ ಬಗ್ಗೆ ಇನ್ನೂ ವಿವರವಾಗಿ ಇಂತಹ ಇಂಟರ್‌ವ್ಯೂಗಳ ಮೂಲಕ ಕಲೆಹಾಕಬೇಕು, ಬರೆಯಬೇಕು ಎಂದನಿಸುತ್ತದೆ. ಕರ್ನಾಟಕದ ಕಮ್ಯೂನಿಸ್ಟ್ ಚಳುವಳಿಯ ಚರಿತ್ರೆಯ ಈ ಹೋರಾಟಗಳ ವಿವರವಾದ ಚಿತ್ರಣ ಬಹುಶಃ ನಾವು ಮಾಸ್ತಿಗೆ ಸಲ್ಲಿಸಬಹುದಾದ ಶ್ರದ್ಧಾಂಜಲಿ.

➔

‘ಕಾರ್ಲ್ ಮಾರ್ಕ್ಸ್ ಸ್ಕೂಲಿನಲ್ಲಿ ಒಟ್ಟಿಗೆ ಮಾಸ್ತ್ರಾಗಿದ್ದೆವು’

- ಸಿ.ನಂಜುಂಡಪ್ಪ ಅವರ ಸಂದರ್ಶನದಿಂದ



ನಾನು ಮಾಸ್ತರನ್ನು ಭೇಟಿ ಮಾಡಿದ್ದು ಮೊದಲ ಬಾರಿಗೆ 1968 ರಲ್ಲಿ ಶಿವಮೊಗ್ಗದಲ್ಲಿ. ಅವರು ಅಲ್ಲಿಗೆ ರಾಜ್ಯ ಸಮಿತಿ ಸಭೆಗೆ ಬಂದಿದ್ದರು. ನನ್ನನ್ನು ಪೂರ್ಣಾವಧಿ ಕಾರ್ಯಕರ್ತನಾಗಲು ಕೇಳಲಾಗಿತ್ತು. ಆ ಬಗ್ಗೆ ಚರ್ಚಿಸಲು ಬಂದಿದ್ದೆ. ....

ಮೊದಲ ಬಾರಿಗೆ ಮಾಸ್ತ್ರ ಜತೆ ನನಗೆ ನಿಕಟ ಒಡನಾಟವಾದದ್ದು ಮಂಗಳೂರಿನಲ್ಲಿ. 1968 ರಿಂದ 72 ರ ವರೆಗೆ ನಡೆದ ಕಾರ್ಲ್‌ಮಾರ್ಕ್ಸ್ ಸ್ಕೂಲ್‌ನಲ್ಲಿ ನಾನೂ ಮಾಸ್ತ್ರು ಒಟ್ಟಿಗೆ ಮಾಸ್ತ್ರಾಗಿದ್ದೆವು. ಈ ಸ್ಕೂಲ್ ರಾತ್ರಿ ಶಾಲೆಯಾಗಿತ್ತು. ಪ್ರತಿವಾರ ಮೂರು ದಿನ 6 ರಿಂದ 8 ವರೆಗೆ ನಡೆಯುವ ಶಾಲೆಯಾಗಿತ್ತು. ಕಾರ್ಮಿಕ ವರ್ಗದಿಂದ ಬಂದ ಸಮರಶೀಲ ಹೋರಾಟಗಾರರನ್ನು ಸಮರ್ಥ ನಾಯಕರಾಗಿ ತಯಾರಿಸುವ ಉದ್ದೇಶ ಹೊಂದಿತ್ತು. ಆಗತಾನೇ ಅವಿಭಜಿತ ಕಮ್ಯೂನಿಸ್ಟ್ ಪಕ್ಷದಿಂದ ಪ್ರತ್ಯೇಕವಾಗಿದ್ದ ಸಿಪಿಐ(ಎಂ) ಸಂಘಟನಾತ್ಮಕವಾಗಿ ಬಲಗೊಳ್ಳಬೇಕಿತ್ತು. ಪಕ್ಷ ವಿಭಜನೆಯಾಗಿದ್ದಾಗ ವಿದ್ಯಾವಂತ, ಪ್ರಜ್ಞಾವಂತ ನಾಯಕರನ್ನು, ಕಾರ್ಯಕರ್ತರನ್ನು ಸಿಪಿಐಗೆ ನಾವು ಕಳೆದುಕೊಂಡಿದ್ದೆವು. ಕಾರ್ಯಕರ್ತರು, ಸಾಮಾನ್ಯ ಸದಸ್ಯರಲ್ಲಿ ಬಹುಸಂಖ್ಯಾತರು ಸಿಪಿಐ(ಎಂ) ಜತೆ ಬಂದಿದ್ದರೂ, ದೊಡ್ಡ ಮಟ್ಟದಲ್ಲಿ ಸಾಮೂಹಿಕ ಶಿಕ್ಷಣ ಬೇಕಾಗಿತ್ತು. ನಮ್ಮ ಕಡಿಮೆ ವಿದ್ಯಾವಂತ ಕಾರ್ಮಿಕರಿಗೆ ಟ್ರೇಡ್ ಯೂನಿಯನ್ ಕೆಲಸಕ್ಕೆ ಬೇಕಾದ ಕನಿಷ್ಟ ಇಂಗ್ಲೀಷ್ ಇತರ ಲೋಕಜ್ಞಾನ ಕೊಡಬೇಕಿತ್ತು. ಅವರಲ್ಲಿ ಆತ್ಮವಿಶ್ವಾಸ ತುಂಬ ಬೇಕಿತ್ತು. ಅವೆಲ್ಲವನ್ನು ಈ ಕಾರ್ಲ್ ಮಾರ್ಕ್ಸ್ ಸ್ಕೂಲ್ ಯಶಸ್ವಿಯಾಗಿ ಮಾಡಿತು.

ಈ ಸ್ಕೂಲಿನ ಪ್ರಿನ್ಸಿಪಾಲರ ಜವಾಬ್ದಾರಿ ನನ್ನದಾಗಿತ್ತು. ಪಿ. ರಾಮಚಂದ್ರ ರಾವ್, ಎಂ.ಎಚ್ ಕೃಷ್ಣಪ್ಪ, ಪ್ರಸಾದ್ (ಆಗ ವೈದ್ಯಕೀಯ ವಿದ್ಯಾರ್ಥಿಯಾಗಿದ್ದವರು) ನನ್ನ ಜತೆ ಮಾಸ್ತ್ರಾಗಿದ್ದು, ಸೋವಿಯತ್ ಯೂನಿಯನ್ ಕಮ್ಯೂನಿಸ್ಟ್ ಪಕ್ಷದ ಚರಿತ್ರೆ, ಮಾರ್ಕ್ಸ್‌ವಾದದ ಮೂಲಭೂತ ತಿಳುವಳಿಕೆ, ಜೀವನದಲ್ಲಿ ವಿಜ್ಞಾನ ಇತ್ಯಾದಿ ಅಲ್ಲದೆ ಇಂಗ್ಲೀಷ್ ಪ್ರಾಥಮಿಕ ಜ್ಞಾನವನ್ನು ಕೊಡಲಾಗುತ್ತಿತ್ತು. ನಾವು ನಾಲ್ವರು ಈ ಜವಾಬ್ದಾರಿಯನ್ನು ಹಂಚಿಕೊಂಡಿದ್ದೆವು. ಉದ್ಯೋಗದಿಂದಲೂ ಮಾಸ್ತ್ರಾಗಿ ಅನುಭವವಿದ್ದ ರಾಮಚಂದ್ರರಾವ್ ಅದರಲ್ಲಿ ಹಿರಿಯ ಪಾತ್ರ ವಹಿಸಿದರು ಎಂದು ಬೇರೆ ಹೇಳಬೇಕಾಗಿಲ್ಲವಲ್ಲ. ಕಾರ್ಮಿಕರಿಗೆ ಇಂಗ್ಲೀಷ್ ಕಲಿಸುವ ಬಗ್ಗೆ ಮಾಸ್ತರು ಒಂದು ಪಠ್ಯಕ್ರಮವನ್ನೇ ತಯಾರಿಸಿದ್ದರು. ....

ಆ ಮೇಲಿನ ನನ್ನ, ಮಾಸ್ತ್ರ ಒಡನಾಟ 1970 ರಿಂದ ಹಲವು ವರ್ಷಗಳ ಕಾಲ ಚಿಕ್ಕಮಗಳೂರಿನ ಎಸ್ಟೇಟ್ ಕಾರ್ಮಿಕರ ಯೂನಿಯನ್ ಕೆಲಸದಲ್ಲಿ. ಅವರು ಯೂನಿಯನ್ ಅಧ್ಯಕ್ಷರಾಗಿದ್ದರು, ನಾನು ಕಾರ್ಯದರ್ಶಿಯಾಗಿದ್ದೆ. ಆ ಕೆಲಸದ ಭಾಗವಾಗಿ ನಾವು ಚಿಕ್ಕಮಗಳೂರಿನ ಎಸ್ಟೇಟ್‌ಗಳಲೆಲ್ಲಾ ವ್ಯಾಪಕವಾಗಿ ಸಂಚಾರಮಾಡಿ ಎಸ್ಟೇಟ್ ಕಾರ್ಮಿಕರ ಜತೆ ಬಾಳಿ ಸಂಘ ಕಟ್ಟಿದ್ದೆವು.

ನಾವಿಬ್ಬರೂ ಯೂನಿಯನ್ ಚಟುವಟಿಕೆ ಜೊತೆಗೆ ಕಾರ್ಮಿಕರ ರಾಜಕೀಯ ಪ್ರಜ್ಞೆಯನ್ನು ಸತತವಾಗಿ ಹೆಚ್ಚಿಸಬೇಕು, ಅದು ಸಾಧ್ಯ ಎಂಬುದರಲ್ಲಿ ನಂಬಿಕೆ ಇಟ್ಟವರು. ಅದನ್ನು ಸಾಧ್ಯ ಮಾಡಿ ಪ್ರತ್ಯಕ್ಷವಾಗಿ ಕಂಡುಕೊಂಡಿದ್ದೆವು. ಈ ರಾಜಕೀಯಕರಣ ಎಷ್ಟು ಪ್ರಭಾವಶಾಲಿಯಾಗಿತ್ತು ಎಂದರೆ ನಮ್ಮ ಯೂನಿಯನಿನ ಪ್ರಮುಖ ಕಾರ್ಯಕರ್ತರು ನಮ್ಮನ್ನು 'ನನ್ನ ಸಂಬಳ ಏನಾಯಿತು, ಬೋನಸ್ ಏನಾಯಿತು?' ಅಂತ ಕೇಳುತ್ತಿರಲಿಲ್ಲ 'ಕಾಮ್ರೇಡ್, ವಿಯೆಟ್ನಾಂ ವಿಮೋಚನಾ ಹೋರಾಟ ಎಲ್ಲಿಯವರೆಗೆ ಬಂತು' ಅಂತ ಕೇಳುತ್ತಿದ್ದರು. ಅದೇ ಅವಧಿಯಲ್ಲಿ ಮಂಗಳೂರಿ ನಲ್ಲಿ ಹಲವು ಬಾರಿ ಸ್ವಯಂಸೇವಕ ಶಿಬಿರ ಗಳನ್ನು ಸಂಘಟಿಸಲಾಗಿತ್ತು. ಈ ಶಿಬಿರಗಳಲ್ಲಿ ಪ್ರಚಲಿತ ವಿದ್ಯಮಾನಗಳು, ರಾಜಕೀಯ, ಸೈದ್ಧಾಂತಿಕ ತರಬೇತಿ ಅಲ್ಲದೆ, ವ್ಯಾಯಾಮದ ಮೂಲಕ ದೈಹಿಕ ಶಿಕ್ಷಣವನ್ನು ನೀಡಲಾಗಿತ್ತು. ಇಲ್ಲೂ ನಾನೂ, ಮಾಸ್ತು ಜತೆ ಮಾಸ್ತರಿಕೆ ನಡೆಸಿದೆವು.

'ಏನಾ! ನಿಮ್ಮ ಕುಟುಂಬ ಸಾಕಲಿಕ್ಕೆ ಪಾರ್ಟಿಯ ಹತ್ತಿರ ತಾಕತ್ತಿಲ್ವಾ!'



ಮಂಗಳೂರಿನ ಕಮಲಾಕ್ಷ ಬಂಗೇರರ ನೆನಪುಗಳು

.......ಮಾಸ್ತು ನನಗೆ ಪಕ್ಷದ ಪ್ರಾಥಮಿಕ ಪಾಠ ಹೇಳಿದ, ಟ್ರೇಡ್ ಯೂನಿಯನ್ ಕೆಲಸದಲ್ಲಿ ಮಾರ್ಗದರ್ಶನ ಮಾಡಿದ ನನ್ನ ನಾಯಕರು ಮಾತ್ರವಲ್ಲ, ಇವೆಲ್ಲಕ್ಕಿಂತ ಹೆಚ್ಚಿನವರಾಗಿ ನನ್ನ ನಿಕಟ ಗೆಳೆಯರಾಗಿದ್ದರು. ಬೋಳಾರದಿಂದ ಅವರ ಪರಿಚಯ ಆದ 30 ವರ್ಷದಿಂದ ಒಟ್ಟಿಗೆ ಮಾತನಾಡುತ್ತಾ ನಡಕೊಂಡು ತಾಜಮಹಲ್ ಹೋಟೆಲ್ ನಲ್ಲಿ ಚಾ ಕುಡಿತ್ತಿದ್ದದ್ದು ಇನ್ನೂ ನೆನಪಾಗ್ತದೆ - ತಾಜಮಹಲ್ ಹೋಟೆಲಿಗೆ ಹೋದಾಗಲೆಲ್ಲ.

ನಾನು ಪಾರ್ಟಿ ಸದಸ್ಯನಾದಾಗ(35 ವರ್ಷದ ಹಿಂದೆ) ಫೋಟೋಗ್ರಾಫರ್ ಆಗಿ ಕೆಲಸ ಮಾಡುತ್ತಿದ್ದೆ. ಮಾಸ್ತ ಆತ್ಮೀಯ ಒತ್ತಾಯ ಇಲ್ಲದಿದ್ದರೆ ನಾನು ಬಹುಶಃ ಎಂದೂ ಪೂರ್ಣಾವಧಿ ಕಾರ್ಯಕರ್ತ ಆಗುತ್ತಿರಲಿಲ್ಲ. ಇಪ್ಪತ್ತು ವರ್ಷದ ಹಿಂದೆ ಪೂರ್ಣಾವಧಿ ಕಾರ್ಯಕರ್ತನಾದ ಸಂದರ್ಭ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಮಾಸ್ತು ಒತ್ತಾಯ ತರುತ್ತಿದ್ದರು. ನನಗೆ ದುಡಿಯಲು ಉತ್ಸಾಹ, ಆದರೂ ಅಳುಕು. ಕೆಲಸ ಮಾಡುತ್ತಿರುವಾಗಲೇ ಜೀವನ ಸಾಗಿಸಲು ಕಷ್ಟ. ನನ್ನ ಹೆಂಡತಿಗೂ ಅದೇ ಅಳುಕು, ಅವಳು ಸ್ವತಃ ಕಾರ್ಮಿಕಳಾಗಿ ಹೋರಾಟದ ಅನುಭವ, ರಾಜಕೀಯ ಪ್ರಜ್ಞೆ ಇದ್ದರೂ ನಾನು ಫುಲ್ ಟೈಮರ್ ಅಗುವುದನ್ನು ವಿರೋಧಿಸಿದಳು - ಸ್ವಾಭಾವಿಕವಾಗಿಯೇ ನಾನು ಫುಲ್ ಟೈಮರ್ ಆದರೆ ಸಂಸಾರದ ಇಡೀ ಭಾರ ಬೀಳುವುದು ಅವಳ ಮೇಲೆಯೇ ಅಲ್ವಾ! ಇದು ಮಾಸ್ತಿಗೆ ಗೊತ್ತಾಯ್ತು. ಅವರಿಗೆ ನನ್ನ ಹೆಂಡತಿ, ಮನೆಯವರೆಲ್ಲರ ಪರಿಚಯ. ನಾನೇ ಯಾಕೆ ಮಾಸ್ತಿಗೆ ಎಲ್ಲಾ ಪಾರ್ಟಿ ನಾಯಕರ, ಕಾರ್ಯಕರ್ತರ, ಹಲವಾರು ಕಾರ್ಮಿಕರ ಸಂಸಾರದವರೆಲ್ಲರ ಪರಿಚಯ. ಮಾಸ್ತು ಮನಗೆ ಬಂದರು. ನನ್ನ ಹೆಂಡತಿಯ ಹತ್ತಿರ ನಾನು ಫುಲ್‌ಟೈಮರ್ ಆಗುವ ಬಗ್ಗೆ, ಆಕೆ ಏ...

ವಿರೋಧದ ಬಗ್ಗೆ ಮಾತು ಆರಂಭವಾಯಿತು. ಆಕೆ ಸಂಸಾರದ ಕಷ್ಟದ ಬಗ್ಗೆ ಹೇಳಿದಾಗ ಮಾಸ್ಟ್ರು ಏಕಾಏಕಿ ರೇಗಿಬಿಟ್ಟರು. "ಏನಾ! ನಿಮ್ಮ ಒಂದು ಕುಟುಂಬ ಸಾಕ್ಲಿಕ್ಕೆ ಪಾರ್ಟಿಗೆ ತಾಖತ್ತಿಲ್ವಾ? ಎಷ್ಟು ಬ್ಯಾಂಕಿನಲ್ಲಿ ಇಡಬೇಕು ಹೇಳು?" ಅಂತ ಅಂದುಬಿಟ್ಟರು. ನನ್ನ ಹೆಂಡತಿ 'ಮಾಸ್ಟ್ರೇ! ನೀವೇ ಇಷ್ಟು ಹೇಳಿದ ಮೇಲೆ ನಾನು ಇಲ್ಲಾ ಅಂತ ಹೇಳ್ಲಿಕ್ಕೆ ಆಗ್ತದಾ' ಅಂದಳು. ಬ್ಯಾಂಕ್‌ನಲ್ಲಿ ಏನೂ ಇಡಲಿಕ್ಕೆ ಆಗ್ಲಿಲ್ಲ ಅಂತ ಮಾತು ಬೇರೆ! ಆದರೂ ಅವರ ಆತ್ಮೀಯತೆ, ಅವರ ಮೇಲೆ ನಂಬಿಕೆ ಎಷ್ಟಿತ್ತೆಂದರೆ ಅವರು ಯಾರನ್ನೂ ಬೇಕಾದರೂ ಯಾವುದಕ್ಕೆ ಬೇಕಾದರೂ ಒಪ್ಪಿಸಬಹುದಿತ್ತು.

....

ನನಗೆ ಸಂಗೀತ, ನಾಟಕ ಅಂದ್ರೆ ಹುಚ್ಚು ಜಾಸ್ತಿ. 60 ರ ದಶಕದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಹಾಕ್ಕೊಂಡಾಗ ಅದರಲ್ಲೂ ಮಾಸ್ಟ್ರದ್ದೇ ಭಾರಿ ಪ್ರೋತ್ಸಾಹ. ಆಗ ಮಲಯಾಳಂನಲ್ಲಿ ನಮ್ಮ ಚಳುವಳಿಯಲ್ಲಿ ಜನಪ್ರಿಯವಾಗಿದ್ದ ನಾಟಕವನ್ನು ತುಳುಗೆ ಭಾಷಾಂತರಿಸಿದೆವು. 'ಇಲ್ಲ್ ಗೆತ್ತಿಮಗೆ' (ಮನೆಹಾಳು ಮಾಡಿದ ಮಗ) ಅಂತ ನಾಟಕದ ಹೆಸರು. ನಾಟಕ ಪ್ರಾಕ್ಟೀಸು ಮಾಡುವಾಗ ಮಾಸ್ಟ್ರು ಬಂದು ಕುಳಿತುಕೊಂಡು ಪ್ರೋತ್ಸಾಹ ಕೊಡುತ್ತಿದ್ದರು. ಆಮೇಲೆ 'ಸಮುದಾಯ' ಆರಂಭವಾದ ಮೇಲೂ ಪ್ರಸನ್ನರಿಗೆ, ಸಮುದಾಯದ ಕಾರ್ಯಕರ್ತರಿಗೆ ಅವರದ್ದು ಯಾವಾಗಲೂ ಬೆಂಬಲ ಇರುತ್ತಿತ್ತು.......

ಮಾಸ್ಟ್ರು ಯಾವತ್ತೂ ಯಾರಿಗೂ ನನಗೆ ಹುಷಾರಿಲ್ಲ, ಯಾವುದೇ ಕೆಲಸಕ್ಕೆ ಬರಲಿಕ್ಕಾಗುವುದಿಲ್ಲ ಅಂದದ್ದು ನನಗೆ ಗೊತ್ತಿಲ್ಲ. ಅಷ್ಟೇ ಯಾಕೆ ಮಾಸ್ಟ್ರಿಗೆ ಯಾವುದಕ್ಕೂ ಆಗುದಿಲ್ಲ ಅಂತ ಹೇಳ್ಲಿಕ್ಕೇ ಗೊತ್ತಿಲ್ಲ. ಆದರೆ ಕೆಲವೊಮ್ಮೆ ಅವರ ಈ ಉದಾರ ಸ್ವಭಾವ ಕಷ್ಟಕ್ಕಿಟ್ಟುಕೊಂಡಿದ್ದಿದೆ. ಆರ್ಥಿಕ ಕಷ್ಟಕ್ಕೀಡಾದವರಲ್ಲಿ ನಾನೊಬ್ಬ. ಒಂದು ಬಾರಿ ಹಲವು ದಿನಗಳ ಟೂರ್ ಮಾಡಿ ಮಂಗಳೂರಿಗೆ ಬಂದಿದ್ದರು ಮಾಸ್ಟ್ರು. ಗೇರುಬೀಜದ ಕಾರ್ಮಿಕರ ಸಮಸ್ಯೆ ಬಗ್ಗೆ ಯೂನಿಯನ್ನಿಗೆ ಮಾಸ್ಟ್ರ ಮಾರ್ಗದರ್ಶನ ಬೇಕಾಗಿತ್ತು. ನಮ್ಮ ಯೂನಿಯನ್ನಿನ ಕಮಿಟಿ ಸದಸ್ಯರಿಗೆ ಇವರು ಸ್ವತಃ ಬಂದು ಮಾರ್ಗದರ್ಶನ ಮಾಡಬೇಕುಂತ ತವಕ. ನಾನು ಮಾಸ್ಟ್ರ ಸುಸ್ತು ನೋಡಿದೆ. ಅವರೂ ನಾನು ಮೀಟಿಂಗ್‌ಗೆ ಬರುವುದಿಲ್ಲ, ಹೀಗೆ ಹೀಗೆ ಮಾಡು ಅಂತ ನಿರ್ದೇಶನ ಕೊಟ್ಟರು. ನಾನು ಮಾಸ್ಟ್ರ ನಿರ್ದೇಶನ ತಿಳಿಸಿ ಅವರಿಗೆ ಹುಷಾರಿಲ್ಲ ಮೀಟಿಂಗ್‌ಗೆ ಬರಲಿಕ್ಕಾಗುದಿಲ್ಲ ಅಂತ ತಿಳಿಸಿದೆ. ಆದರೆ ನಮ್ಮ ಇಬ್ಬರು ಮಹಿಳಾ ಸದಸ್ಯರಿಗೆ ಸಮಾಧಾನವಾಗಲಿಲ್ಲ. ನನಗೆ ಹೇಳದೆ ಸೀದಾ ಮಾಸ್ಟ್ರ ಮನೆಗೆ ಹೋಗಿದ್ದರು. ಮಾಸ್ಟ್ರ ಮನೆ ಯಾವಾಗಲೂ ತೆರೆದಿರುತ್ತಿತ್ತು. ಮೀಟಿಂಗ್‌ಗೆ ಮಹಿಳೆಯರ ಜತೆ ಮಾಸ್ಟ್ರು ಹಾಜರಾಗಿದ್ದರು -ತೀರಾ ಸುಸ್ತಾಗಿದ್ದರೂ. ಮಹಿಳೆಯರು ನನಗೆ ಮೂದಲಿಸಿದ್ದು ಬೇರೆ - 'ಸೀಕು ಮಾಸ್ಟ್ರೆಗಾ ಈರೆಗಾ (ಹುಷಾರಿಲ್ಲದ್ದು ಮಾಸ್ಟ್ರಿಗಾ ನಿಮಗಾ?) ಮೀಟಿಂಗು ಮುಗಿದ ಮೇಲೆ ಮಾಸ್ಟರನ್ನು ನಾನು ತರಾಟೆಗೆ ತೆಗೆದುಕೊಂಡೆ. 'ಏನು ಮಾಡುವುದು ಮಾರಾಯ! ಪಾಪ ಮನೆಗೆ ಬಂದು ಹೆಂಗಸರು ಕೇಳುವಾಗ ನಾನು ಹುಷಾರಿಲ್ಲ ಎಂದು ಹೇಗೆ ಮಲಗಿರುವುದು' ಎಂದು ನನಗೆ ಸಮಾಧಾನ ಮಾಡಿದರು. ಅಲ್ಲದೆ ನನ್ನ ಹೆಂಡತಿ ಎದುರು ಹುಷಾರಿಲ್ಲ ಎಂದು ಹೇಳಿದರೆ, ನನಗೆ ಇನ್ನೂ ನಾಲ್ಕು

ದಿನ ಎಲ್ಲೂ ಹೋಗಲಿಕ್ಕೆ ಬರಲಿಕ್ಕಿಲ್ಲ ಎಂದು ನಕ್ಕರು. ನನಗೆ ಅಳುವುದೋ ನಗುವುದೋ ಗೊತ್ತಾಗಲಿಲ್ಲ. ಸುಸ್ತಾಗಿದ್ದ ಮಾಸ್ತರರನ್ನು ನೋಡಿ...........


ಮಾಸ್ತರರ ರೌದ್ರಾವತಾರ ಸಹ ಅನುಭವಿಸಿದವರಿಗೇ ಗೊತ್ತು. ಒಂದು ದಿನ ಲೇಬರ್ ಆಫೀಸರ್ ಎದುರು ಎಲ್ಲಾ ಟ್ರೇಡ್ ಯೂನಿಯನ್‌ಗಳ ಮೀಟಿಂಗ್ ನಡೆಯುತ್ತಾ ಇತ್ತು. ಇಂಟಕ್ ನಾಯಕ ಆಡ್ಯಂತಾಯ ಏನೋ ಹೇಳುವಾಗ ಮಾಸ್ಟ್ರಿಗೆ ಕೋಪ ಬಂತು. ಎದ್ದು ನಿಂತು ಹೇಳೇ ಬಿಟ್ಟರು- 'ಎಂಥದಾ ನೀನು ಹೇಳುದು? ನೀನು ಎಂಥಾ ಮಾತಾಡ್ತಿ ಅಂತ ಗೊತ್ತುಂಟಾ ನಿನಗೆ? ಏನೂ ಸ್ಟಡಿ ಮಾಡದೆ ಬಾಯಿ ಬಂದ ಹಾಗೆ ಮಾತಾಡ್ತಿದ್ದೀಯಲ್ಲ' ಎಂದು ಕಂಡಾಪಟ್ಟೆ ಬೈದು ಬಿಟ್ಟರು. ಎಲ್ಲರೂ ದಂಗಾಗಿದ್ದರು. ಮೀಟಿಂಗ್ ಆದ ಮೇಲೆ ನಾನು ಆಡ್ಯಂತಾಯರನ್ನು ಕೇಳಿದೆ ಬೇಜಾರಾಯ್ತೆ ಅಂತ. ಅವರು ನಗುತ್ತಾ ಹೇಳಿದರು-'ಮಾಸ್ಟ್ರು ಹೇಳಿದ್ದು ಕರೆಕ್ಟ್ ಅಲ್ಲವಾ? ನಮ್ಮ ಮಾಸ್ಟ್ರು ಮೇಲೆ ಯಾರಿಗಾದರೂ ಬೇಜಾರು ಮಾಡುವುದುಂಟಾ? ವಿರೋಧಿಗಳ ಮೇಲೂ ಅವರ ಪ್ರಭಾವ ಅಷ್ಟಿತ್ತು. ......

ಅಷ್ಟೇ ಅವರ ಹೃದಯ ಮೃದುವಾಗಿತ್ತು. ಯಾರ ಕಷ್ಟವನ್ನೂ ಅವರಿಗೆ ನೋಡಲು ಸಾಧ್ಯವಿಲ್ಲ. ನಾನು ಮಗಳ ಮದುವೆ ಮಾಡುವಾಗ ಭಾರಿ ಕಷ್ಟದಲ್ಲಿದ್ದೆ. ನಾನು ಏನೂ ಹೇಳದಿದ್ದರೂ ಅವರೇ ಕರೆದು ಚೆಕ್ಕು ಬರೆದುಕೊಟ್ಟರು. ಬ್ಯಾಂಕ್‌ನಲ್ಲಿ ದುಡ್ಡು ತೆಗೆದು ಕೊಳ್ಳುವಾಗ ನನಗೆ ಕುತೂಹಲವಾಯಿತು. ನನಗೆ ಬ್ಯಾಂಕ್‌ನಲ್ಲಿ ಗುರುತು ಇದ್ದದ್ದರಿಂದ ಎಷ್ಟು ದುಡ್ಡು ಬಾಕಿ ಅಂತ ಕೇಳಿದೆ. 75 ರೂ. ಇದೆ ಅಂತ ಉತ್ತರ ಬಂತು. ಅದು ಏನು ವಿಶೇಷ ಅಲ್ಲ. ಬೇರೆಯವರ ಬಳಿಸಾಲ ತಂದೂ ಸಹಾಯ ಮಾಡಿದ್ದಿದೆ. ಯಾರಿಗಾದರೂ ಸಹಾಯ ಬೇಕು ಅಂತ ಕೇಳಬೇಕೆಂತಲೂ ಇಲ್ಲ. ಬೇರೆಯವರಿಂದ ತಿಳಿದು ಅವರೇ ಸಹಾಯಕ್ಕೆ ಮುಂದಾಗುತ್ತಿದ್ದರು. ಮಾಸ್ಟ್ರು ಯಾರಿಗೂ ಇಲ್ಲವೆಂದವರಲ್ಲ. ಮಾಸ್ಟ್ರಿಗೆ ಯಾರಿಗೂ ಇಲ್ಲವೆನ್ನಲು ಆಗುತ್ತಿರಲಿಲ್ಲ. ಪಾರ್ಟಿಗೆ ಫಂಡ್ ಎತ್ತುವುದರಲ್ಲಿ ಅವರನ್ನು ಮೀರಿಸುವವರಿಲ್ಲ.......

ಅವರಿಗೆ ಆಪ್ತರ, ಮಿತ್ರರ ಮರಣ ನೋಡಲು ಆಗುತ್ತಿರಲಿಲ್ಲ. ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕ ಶಾಂತಾರಾಂ ಪೈ ಸತ್ತಾಗ, ಶ್ರದ್ಧಾಂಜಲಿ ಸಭೆಯಲ್ಲಿ ಅವರಿಗೆ ಮಾತನಾಡಲೇ ಆಗಲಿಲ್ಲ. ಗೊಳೋ ಅಂತ ಚಿಕ್ಕ ಮಕ್ಕಳ ಹಾಗೆ ಅತ್ತು ಬಿಟ್ಟರು...........

ಇಲ್ಲಿ ಮಂಗಳೂರಿನಲ್ಲಿ ಈವರೆಗೆ ಮೂವರು ಹಿರಿಯ ಕಮ್ಯುನಿಸ್ಟ್ ನಾಯಕರ ಭಾರೀ ಶವಯಾತ್ರೆ ನಡೆದಿದೆ. ಸಿಪಿಐ ನಾಯಕ ಶಾಂತರಾಮ ಪೈ, ಸಿಪಿಎಂ ನಾಯಕರಾಗಿದ್ದ ಕೃಷ್ಣ ಶೆಟ್ಟಿ ಮತ್ತು ಮಾಸ್ಟ್ರದ್ದು. ಈ ಮೂವರಲ್ಲಿ ಮಾಸ್ಟ್ರ ಶವಯಾತ್ರೆ ಅತ್ಯಂತ ದೊಡ್ಡದಾಗಿತ್ತು. ಮತ್ತು ಎಲ್ಲಾ ವರ್ಗದ ಜನ ಬಂದಂತದ್ದು ಆಗಿತ್ತು. ಹಾಗೆ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಬಂದದ್ದು ಆಗಿತ್ತು. ಜೀವನದಲ್ಲಿ ಅಷ್ಟು ಜನರಿಗೆ ಒಳ್ಳೇದು ಮಾಡಿ, ಸತ್ತಾಗ ಸಾವಿರಾರು ಜನ ಕಣ್ಣೀರು ಹಾಕುವುದು- ಅದೇ ಅಲ್ವಾ ಗೌರವ. ಅಲ್ವಾ ಮಾರಾಯ್ರೆ? ಉಳಿದದ್ದೆಲ್ಲಾ ಅರ್ಥ ಇಲ್ಲದ್ದು. (ಆಗ ಕಮಲಾಕ್ಷ ಬಂಗೇರರ ಕಣ್ಣು ತೇವವಾಗಿತ್ತು)

'ಬಸ್ರೂರಲ್ಲಿ ನಮ್ಮ ರಕ್ತ ಬಿದ್ದಿತ್ತು. ಆದರೂ ಮಾಸ್ತ್ರ ಭಾಷಣ ನಿಲ್ಲಲಿಕ್ಕೆ ಬಿಡ್ಲಿಲ್ಲ'



ಅಬ್ರಹಾಂ ಕರ್ಕಡರ ನೆನಪುಗಳು

'ಜೀವ ಇತ್ಲಾಗೆ-ಮುಂಡಾಸು ಅತ್ಲಾಗೆ'

ಮಾಸ್ಟನ್ನು ನಾನು ನೋಡಿದ್ದು 60 ರ ದಶಕದ ಆರಂಭದಲ್ಲಿ. ಇನ್ನೂ ಫುಲ್ ಟೈಮರ್ ಆಗುವ ಮೊದಲೇ. ಅವರು ಇನ್ನೂ ಮಾಸ್ಟ್ರು ಉದ್ಯೋಗದಲ್ಲಿದ್ದಾಗಲೇ. ಪಕ್ಷ 1964 ರಲ್ಲಿ ಎಡ-ಬಲ ಭಾಗವಾದಾಗ ನಿಮಗೆ ಗೊತ್ತಲ್ಲ 'ಜೀವ ಇತ್ಲಾಗೆ-ಮುಂಡಾಸು ಅತ್ಲಾಗೆ' ಆಗಿತ್ತು. ಅಂದರೆ ಕಾರ್ಯಕರ್ತರೆಲ್ಲಾ ನಮಗೆ ಬಂದಿದ್ದರು. ಹಲವು ನಾಯಕರು ಸಿಪಿಐನಲ್ಲಿ ಉಳಿದಿದ್ದರು. ಹಾಗೇ ಮಧ್ಯಮ ವರ್ಗದವರು, ಬುದ್ದಿಜೀವಿಗಳು, ವಿದ್ಯಾವಂತ ಸದಸ್ಯರು ಸಿಪಿಐ ಕಡೆ ಉಳಿದಿದ್ದರು. ಅಂತಹ ಸಂದರ್ಭದಲ್ಲಿ ಮಾಸ್ಟ್ರ ಪಾತ್ರ ದೊಡ್ಡದು. ದೊಡ್ಡ ಪ್ರಮಾಣದಲ್ಲಿ ಜನರಲ್ ಬಾಡಿ ಮಾಡಿ ಸಭೆ ಸೇರಿಸಿ ಸಿಪಿಐ(ಎಂ) ನಿಲುವೆ ಬಗ್ಗೆ ತಿಳಿಸಿ ಡಾಂಗೆ ಪರಿಷ್ಕರಣವಾದದ ತಪ್ಪುಗಳನ್ನು ತಿಳಿಹೇಳಿದ್ದರು. ಅಲ್ಲದೆ ಸಿಪಿಐ(ಎಂ) ಆದ ನಂತರ ಅದರಲ್ಲಿ ವಿದ್ಯಾವಂತರು, ಬುದ್ದಿಜೀವಿಗಳು ಕಡಿಮೆ ಇದ್ದ ಸಂದರ್ಭದಲ್ಲಿ ದೊಡ್ಡ ಸಂಖ್ಯೆಯಲ್ಲಿ ಕಾರ್ಮಿಕರನ್ನು ತರಬೇತಿ ಮಾಡಿದ್ದರು.

ಒಕ್ಕಲೆಬ್ಬಿಸುವುದರ ವಿರುದ್ಧ ಚಳುವಳಿಯಲ್ಲಿ ಮಾಸ್ಟ್ರು

ಕುಂದಾಪುರದ ಸುತ್ತಮುತ್ತ ರೈತ ಚಳುವಳಿಯಲ್ಲಿ ಮಾಸ್ಟ್ರ ಪಾತ್ರ ದೊಡ್ಡದು. 1965 ರಲ್ಲಿ ಕಿಸಾನ್ ಸಭಾ ಮೆಂಬರ್‌ಶಿಪ್ ಶುರುವಾಗಿತ್ತು. ಒಕ್ಕಲೆಬ್ಬಿಸುವುದರ ವಿರುದ್ಧ ಆಗಿನ ಚಳುವಳಿ. ಹಲವು ಪ್ರಮುಖ ಹೋರಾಟಗಳಲ್ಲಿ ಮಾಸ್ಟ್ರು ಸ್ವತಃ ಭಾಗವಹಿಸಿ ನಾಯಕತ್ವ ಕೊಟ್ಟಿದ್ದರು. ಒಕ್ಕಲೆಬ್ಬಿಸುವುದರ ಸುದ್ದಿ ಕೇಳಿದ ಕೂಡಲೇ ನಮ್ಮ ರೈತ ಸಂಘದ ಕಾರ್ಯಕರ್ತರು ಅಲ್ಲಿಗೆ ಹೋಗಿ ಅದನ್ನು ನಿಲ್ಲಿಸುತ್ತಿದ್ದರು. ಟ್ರೇಡ್ ಯೂನಿಯನ್ (ಮುಖ್ಯವಾಗಿ ಹಂಚು) ಕಾರ್ಯಕರ್ತರು ಹೋಗಿ ಬೆಂಬಲ ನೀಡುತ್ತಿದ್ದರು. ಭೂಮಾಲಕರ ಗೂಂಡಾಗಳ ಎದುರು ನಿಂತು ನೆಡುವುದು, ಕುಯ್ಲು ಆಗುವವರೆಗೆ ಒಕ್ಕಲಿಗೆ ರಕ್ಷಣೆ ಕೊಡುವುದು ನಡೆಯುತ್ತಿತ್ತು. ಇಂತಹ ಹೋರಾಟದಲ್ಲಿ 1968-69 ಸರಿಸುಮಾರಿಗೆ ನಡೆದ ಕೋಣೆಘರಂಗಿ ಮನೆ ಕುಟುಂಬದ ಒಕ್ಕಲೆಬ್ಬಿಸುವುದರ ವಿರುದ್ಧ ಕೋರ್ಟಿನ ಇಂಜಕ್ಷನ್ ಇದ್ದರೂ ನಿಂತು ನೆಟ್ಟಿದ್ದು, ಕುಯ್ಲು ಮಾಡಿದ್ದು ಒಂದು ಪ್ರಮುಖ ಮೈಲಿಗಲ್ಲು. ಅದೇ ರೀತಿ ಆನಗಳ್ಳಿಯಲ್ಲಿ ಗೋವಿಂದ ಎಂಬಾತನ ಹರಿಜನ ಕುಟುಂಬ ಇಡೀ ಭೂಮಾಲಕರ ಒತ್ತಡದಿಂದ ಏಳದ್ದಕ್ಕೆ ಲಾಕಪ್ಪಿಗೆ ಹಾಕಿದಾಗ ಮೂರು ಸಾವಿರ ಜನ ರೈತ-ಕಾರ್ಮಿಕರು ಸ್ಟೇಶನ್‌ಗೆ ಮುತ್ತಿಗೆ ಹಾಕಿದ್ದು ಎಲ್ಲಾ ಭೂಮಾಲಕರಿಗೆ ಎಚ್ಚರಿಕೆ ಗಂಟೆ ಆಗಿತ್ತು. ಭೂಮಾಲಕರು ಸುಮ್ಮನೆ ಕುಳಿತುಕೊಳ್ಳಲಿಲ್ಲ....


ಬಸ್ರೂರಲ್ಲಿ ನಮ್ಮ ರಕ್ತ ಬಿದ್ದಿತ್ತು....

ಭೂಮಾಲಕರ ದಾಳಿ ಆರಂಭ ಆಯ್ತು. ನನಗೆ ಈಗಲೂ ನೆನಪಾಗ್ತದೆ. ಇದೇ ಆಫೀಸಿನ ಒಂದು ಮೂಲೆಯಲ್ಲಿ ಸಂಕಪ್ಪ ಶೆಟ್ಟರು ಅಂತ ನಮ್ಮ ಕಾರ್ಯಕರ್ತರು ಹೇಳಿದ್ದು 'ಕರ್ಕಡರೇ ನನ್ನನ್ನು ಅವರು ಕೊಲ್ತಾರೆ' ಅಂತ. ಗುಲ್ವಾಡಿಯಲ್ಲಿ ಅವರ ಕೊಲೆ ನಡೆದೇ ಹೋಯಿತು. ಭೂಮಾಲಕರು ನಮ್ಮ ಕಾರ್ಯಕರ್ತರ ಮೇಲೆ ದಾಳಿ ಮಾಡಲಾರಂಭಿಸಿದ್ದರು. ನಾವು ಆಲೋಚನೆ ಮಾಡಿದೆವು. ಇದು ಯೋಜನಾಬದ್ಧ ದಾಳಿ. ರೈತ ಸಂಘವನ್ನು ದಮನ ಮಾಡಿ ಮುಗಿಸುವ ಆಲೋಚನೆ. ನಾವೂ ಎಲ್ಲದಕ್ಕೂ ತಯಾರಾದೆವು. ಭೂಮಿ ಪ್ರಶ್ನೆ, ಒಕ್ಕಲೆಬ್ಬಿಸುವುದರ ವಿರುದ್ಧ ಹೋರಾಟದ ಈ ವರ್ಗಸಂಘರ್ಷ ತುತ್ತು ತುದಿಗೆ ಮುಟ್ಟಿದ್ದು - ಬಸ್ರೂರು ಸಂಘರ್ಷದಲ್ಲಿ. ಒಂದು ರೀತಿಯಲ್ಲಿ ರೈತರ-ಭೂಮಾಲಕರ ನಡುವೆ ಸಶಸ್ತ್ರ ಹೋರಾಟವೇ ಆಗಿತ್ತು.

ಬಸ್ರೂರು ಪೇಟೆಯಲ್ಲಿ ಈ ಭೂಮಾಲಕರ ದಬ್ಬಾಳಿಕೆಯ ವಿರುದ್ಧ ರೈತ ಸಂಘ ಸಭೆ ಮಾಡಿತ್ತು. ಸುಮಾರು 400 - 500 ಜನ ರೈತ-ಕಾರ್ಮಿಕ ಕಾರ್ಯಕರ್ತರು ಮೆರವಣಿಗೆಯಲ್ಲಿ ಬಂದರು. ಭೂಮಾಲಕರು ಈ ಸಭೆಯನ್ನು ಹೇಗಾದರೂ ಮಾಡಿ ತಡೆಯಬೇಕಾದ ಪ್ರಯತ್ನ ಮಾಡ್ತಾ ಇದ್ರು. ಆಗ ಭೂಮಾಲಕರ ಸೇನೆಯೇ ಒಂದು ಇತ್ತು. 'ಕಟ್ಟೇ ಮಾರ್ ರತ್ನಾಕರ ಸೇನೆ' ಅಂತ. ಪುಂಡು ಪೋಕರಿ ಹುಡುಗರು, ಬಾಡಿಗೆ ಗೂಂಡಾಗಳಿಂದ ಆದ ಸೇನೆ ಅದು. ಒಕ್ಕಲುಗಳ ಮೇಲೆ ದಾಳಿಗೆ ಬಳಸುತ್ತಿದ್ದರು. ಅವರಿಗೆಲ್ಲಾ ಒಂದು ಬಿಳಿ ನಾಮ! ಈ ಸೇನೆಯ ಎರಡು ಸಾವಿರ ಜನ ನಮ್ಮ ಮೆರವಣಿಗೆ ಸಭೆಯ ಮೇಲೆ ದಾಳಿ ಮಾಡ್ಲಿಕ್ಕೆ ಬಂದಿದ್ದರು. ಕಡೆಗೆ ಕಲ್ಲಿನಿಂದ ನಮ್ಮ ಮೇಲೆ ದಾಳಿ ಆರಂಭವಾಗಿತ್ತು. ಮಾಸ್ತ್ರ ಭಾಷಣವೂ ಆರಂಭವಾಗಿತ್ತು. ಕಲ್ಲುಗಳು ಬೀಳುತ್ತಲೇ ಇದ್ದವು. ನಾವೂ ತಯಾರಾಗಿ ಹೋಗಿದ್ದೆವು. ಸೋಟೆಗೆ(ದೊಣ್ಣೆ) ಧ್ವಜ ಕಟ್ಟಿ ಹೋಗಿದ್ದೆ ನಮ್ಮ ಆಯುಧವಾಗಿತ್ತು. ಮಾಸ್ತ್ರು ಭಾಷಣ ಆರಂಭಿಸಿದರು. ಬೀಳುವ ಕಲ್ಲುಗಳನ್ನು ಕ್ಯಾಚ್ ಹಿಡಿದು ನಮ್ಮ ಕಾರ್ಯಕರ್ತರು ಭೂಮಾಲಕರ ಸೇನೆಯ ಮೇಲೆ ವಾಪಸು ಬಿಸಾಕುತ್ತಿದ್ದರು. ಹಲವರಿಗೆ ಕಲ್ಲು ಬಿದ್ದು ಗಾಯವಾಗಿತ್ತು. ನಮ್ಮ ರಕ್ತ ಬಸ್ರೂರು ಪೇಟೆಯಲ್ಲಿ ಬಿದ್ದಿತ್ತು. ಆದ್ರೂ ನಾವೆಲ್ಲಾ ಹೇಳುತ್ತಿದ್ದೆವು 'ಮಾಸ್ತ್ರೇ ನಿಮ್ಮ ಭಾಷಣ ನಿಲ್ಬಾರ್ದು. ಏನೇ ಆಗಲಿ ಇವತ್ತು ನೋಡೇ ಬಿಡೋಣ' ಅಂತ. ಒಂದು ಬಾರಿ ನೆರೆದಿದ್ದ ಕಾರ್ಯಕರ್ತರನ್ನು 'ಸೇನೆ' ಯವರು ಚದುರಿಸಿಯೇ ಬಿಟ್ಟರು. ಆದರೆ ಪುನಃ ಸೇರಿ ನಮ್ಮ ಕಾರ್ಯಕರ್ತರು ಸೋಟೆ ಬೀಸಲು ಆರಂಭಿಸಿದರು. ನಮ್ಮ ಕಾರ್ಯಕರ್ತರು, ತರಬೇತಿ ಹೊಂದಿದ ಸ್ವಯಂ ಸೇವಕರು ಸೋಟೆ ಬೀಸಲಾರಂಭಿಸಿದಂತೆ 'ಸೇನೆ'ಯ ಬಾಡಿಗೆ ಗೂಂಡಾಗಳಿಗೆ ಹೆದ್ರಿಕೆ ಆಯ್ತು. ಚದುರಿದರು. ಮಾಸ್ತ್ರ ಭಾಷಣ ಮುಂದುವರೆದೇ ಇತ್ತು. ಆ ದಿನ ಬಸ್ರೂರಲ್ಲಿ ಬಿದ್ದ ರಕ್ತದ ಮಧ್ಯೆ ಮಾಸ್ತ್ರ ಭಾಷಣ ಭೂಮಾಲಕರ ಸದ್ದಡಗಿಸಿತು. ಈ ಚಳುವಳಿಯ ನಂತರ ಬೆಂಗಳೂರಿಗೆ ಭೂಸುಧಾರಣೆ ಒತ್ತಾಯಿಸಿ ನಾಲ್ಕು ಬಾರಿ ಜಾಥಾಗಳು ಆದವು, 1973 ರ ವರೆಗೆ. ಇದೆಲ್ಲದರ ಫಲವಾಗಿ 1974 ರಲ್ಲಿ ಭೂಸುಧಾರಣೆ ಕಾಯ್ದೆ ಜಾರಿಗೆ ಬಂತು. ಆಮೇಲೆ ರೈತ ಸಂಘದ ಮೇಲೆ ದಬ್ಬಾಳಿಕೆ, ದಾಳಿ ಇರಲಿಲ್ಲ ಅಂತ ಅಲ್ಲ.

1975 ರಲ್ಲಿ ದಾಸ್ ಭಂಡಾರಿ, ಅನಂತ ಕೋಣಿ ಮೇಲೆ ದಾಳಿ ಮಾಡಿದ್ದರು. ಆದರೂ ರೈತ ಸಂಘವನ್ನು ಬಗ್ಗಿಸುವುದು ಸಾಧ್ಯ ಇಲ್ಲ ಎಂದು ಅವರಿಗೆ ಮನದಟ್ಟು ಆಗಿತ್ತು.

'ಮಾಸ್ತ್ರ ಕ್ಲಾಸುಗಳು ೪೦ ವರ್ಷಕಾಲ ಫುಲ್ ಟೈಮರ್ ಆಗಿ ಕೆಲಸ ಮಾಡುವ ಚೈತನ್ಯ ಕೊಡ್ತು'



ಸಿ. ನಾರಾಯಣರ ನೆನಪುಗಳು

ಮಾಸ್ತರೆಂದರೆ ನನಗೆ ನೆನಪಾಗುವುದು ಅವರ ಕ್ಲಾಸುಗಳು. ದ್ವಂದ್ವಮಾನ ಭೌತವಾದ ಮತ್ತು ಚಾರಿತ್ರಿಕ ಭೌತವಾದದ ಅವರ ಕ್ಲಾಸುಗಳು ನನಗೆ ಈಗಲೂ ನೆನಪಿರುವಂಥದ್ದು. ಮಾಸ್ತ್ರು ರಾಮಾಯಣ, ಮಹಾಭಾರತ ಕಥೆಗಳನ್ನು ಬಳಸಿ ಪಾಠ ಮಾಡುವಂಥದ್ದು ಕೆಲವರು ಸರಿ ಇಲ್ಲ ಅಂತಾರೆ. ಆದರೆ ನನ್ನ ಅಭಿಪ್ರಾಯ ಅಂದರೆ ಅವರು ರಾಮಾಯಣ ಮಹಾಭಾರತದ ಕಥೆಗಳನ್ನು ಉದಾಹರಣೆಗಾಗಿ ಬಳಸುತ್ತಿದ್ದರು. ಉದಾಹರಣೆಗೆ ಕೌರವರು ಪಾಂಡವರಿಗೆ ಸುಮ್ಮನೆ ಭೂಮಿ ಬಿಟ್ಟು ಕೊಡಲಿಲ್ಲ. ಪಾಂಡವರು ಅದಕ್ಕೆ ಹೋರಾಟ ಮಾಡ್ಬೇಕಾಯ್ತು ಅಂತ ಹೇಳ್ತಿದ್ದರು. ನನಗಂತೂ ಅವರ ಕ್ಲಾಸ್‌ಗಳು ನಾಲ್ವತ್ತು ವರ್ಷಗಳ ಕಾಲ ಫುಲ್ ಟೈಮರ್ ಆಗಿ ಕೆಲಸ ಮಾಡುವ ಚೈತನ್ಯ ಕೊಟ್ಟಿತ್ತು. ಅವರ ಪುಸ್ತಕ ಪ್ರೀತಿ ಮಾತ್ರ ಮರೆಯು ವಂಥದ್ದಲ್ಲ. ಸಿಐಟಿಯು ಅಖಿಲ ಭಾರತ ಸಮ್ಮೇಳನಕ್ಕೆ ಹೋಗುವಾಗ ನಾನು ಅವರ ಜತೆ ರೈಲಿನಲ್ಲಿ ಪ್ರಯಾಣ ಮಾಡಿದ್ದೆ. ಅವರು ಮೇಲಿನ ಬರ್ತಿನಲ್ಲಿದ್ದರು. ನಾನು ಕೆಳ ಬರ್ತಿನಲ್ಲಿದ್ದೆ. ನಾನು ಮಲಗಿದಾಗ ಓದ್ತಾ ಇದ್ದರು ಇನ್ನೊಂದು ಸರ್ತಿ ಎದ್ದಾಗ ಕೈಯಲ್ಲಿ ಪುಸ್ತಕ ಹಿಡಿದುಕೊಂಡೇ ಮಲಗಿದ್ದರು. ಮತ್ತೊಂದು ಸರ್ತಿ ಎಚ್ಚರವಾದಾಗ ಪುನಃ ಓದುತ್ತಿದ್ದರು. ಇನ್ನೂ ಕೆಲವು ಬಾರಿ ಎಚ್ಚವಾಯ್ತು ನನಗೆ. ಆವಾಗೆಲ್ಲಾ ಅವರು ಓದುತ್ತಲೇ ಇದ್ದರು.

'ಪಂಚಾಯ್ತಿಕೆ ಮಾಸ್ತ್ರಿಲ್ಲದೆ ಆಗ್ತಿರ್ಲಿಲ್ಲ'

ಕೆ. ಶಂಕರ್ ಅವರ ನೆನಪುಗಳು




ಕುಂದಾಪುರ ರೈತರ ಹೋರಾಟಗಳಲ್ಲಿ ಮಾಸ್ತ್ರ ನೇರವಾಗಿ ಭಾಗವಹಿಸಿದ್ದರು. ಟ್ರೇಡ್ ಯೂನಿಯನ್ ವಿಚಾರ ಬಂದಾಗ ಜಿಲ್ಲಾ ಮಟ್ಟದ ಫೆಡರೇಷನ್/ ಯೂನಿಯನ್‌ಗಳ ಮೂಲಕ ಮಾರ್ಗದರ್ಶನ ಮಾಡ್ತಿದ್ರು. ಆದರೆ ಅವರ ವಿಷೇಶ ಪಾತ್ರ ಇರ್ತಿದ್ದದ್ದು ಟ್ರೇಡ್ ಯೂನಿಯನ್ ಹೋರಾಟಗಳು ನಡೆದು ಪಂಚ್ಯಾತಿಕೆಯ ಹಂತಕ್ಕೆ ಬಂದಾಗ. ಅವರ ಪ್ರಭಾವಶಾಲಿ ವ್ಯಕ್ತಿತ್ವದಿಂದ ಮಾಲಕರ ಜತೆ ಮಾತನಾಡುವುದು ಸುಲಭ ಆಗ್ತಾ ಇತ್ತು.

ಪಂಚ್ಯಾತಿಕೆ ನಡೆದಾಗಲೂ ಮಾಸ್ತು ಸಮಸ್ಯೆಯ ಅಧ್ಯಯನ ಮಾಡಿ ಕೊಡುತ್ತಿದ್ದ ಸೂಚನೆ ಯಾರಿಗೂ ತಳ್ಳಿ ಹಾಕಲಿಕ್ಕೆ ಆಗ್ತಿರ್ಲಿಲ್ಲ. ಆದ್ದರಿಂದ ಯಾವುದೇ ಪ್ರಮುಖ ಟ್ರೇಡ್ ಯೂನಿಯನ್ ಬೇಡಿಕೆಗಳ ಮೇಲಿನ ಪಂಚ್ಯಾತಿಕೆ ಮಾಸ್ಟ್ರಿಲ್ಲದೆ ಆಗ್ತಿರ್ಲಿಲ್ಲ.

'ಮಾಸ್ಟ್ರನ್ನು ನಾನು ಸೈಕಲ್ ಮೇಲೆ ಕರೆದುಕೊಂಡು ಹೋದೆ'

ಮಹಾಬಲ ವಡೇರ ಹೋಬಳಿ ಅನುಭವ



ನಾನು ಮಾಸ್ಟನ್ನು ಹತ್ತಿರದಿಂದ ನೋಡಿದ್ದು 1972-73ರ ಅವಧಿಯಲ್ಲಿ ಅವರು ಒಂದು ರೈತ ಸಂಘದ ಮೀಟಿಂಗ್‌ಗೆ ಬಂದಾಗ. ಮೀಟಿಂಗ್ ನಡೆಯುಬೇಕಾಗಿದ್ದ ಜಾಗ ವಳ್ಳೂರು ಅಂತ ನೆನಪು. ಅಲ್ಲಿಗೆ ವಾಹನ ಹೋಗುವಂತಿಲ್ಲ. ವಾಹನ ಸೌಕರ್ಯ ಮಾಡಲು ವ್ಯವಸ್ಥೆ ಇರಲಿಲ್ಲ. ಸೈಕಲ್ ಮೇಲೆ ಮಾತ್ರ ಹೋಗಬಹುದಿತ್ತು. ಅನುಮಾನ ದಿಂದಲೇ ಮಾಸ್ಟ್ರಿಗೆ ಹೇಳಿದೆ. ಸೈಕಲ್ ಮೇಲೆ ಭಾಳ ಹೊತ್ತು ಕೂತ್ಕೊಂಡ್ರೆ ಸೊಂಟ ಹಿಡಿಕೊಳ್ಳುತ್ತಲ್ಲಾ ಮಾರಾಯ ಅಂದ್ರು. ಆದರೆ ಮರುಗಳಿಗೆಯಲ್ಲಿ ಹೊರಟೇ ಬಿಟ್ಟರು. ಮಾಸ್ಟರನ್ನು ಸೈಕಲ್ ಹಿಂದಿನ ಸೀಟಿನಲ್ಲಿ ಕೂರಿಸಿಕೊಂಡದ್ದು ನನಗೊಂದು ಅಪೂರ್ವ ಅನುಭವ. ಅಂದು ಸಭೆಯಲ್ಲಿ 'ಹೊಲೆ ಮಾದಿಗರ ಹಾಡು' ಒಂದನ್ನು ಹಾಡಿದೆ. ಅವರ ಇಡೀ ಭಾಷಣ ಆ ಕವನದ ಸುತ್ತವೇ ಇದ್ದು ಅತ್ಯಂತ ಆಕರ್ಷಕವಾಗಿತ್ತು.

ಇನ್ನೊಂದು ಘಟನೆ ನೆಲ್ಲಿಕಟ್ಟೆ ಎಂಬ ಕಡೆ. ನಾನು ಸೈಕಲಲ್ಲಿ ಬರುತ್ತಿದ್ದಾಗ ಒಬ್ಬ ನೇಣು ಹಾಕಿಕೊಳ್ಳಲು ಪ್ರಯತ್ನಿಸುತ್ತಿದ್ದ. ನಾನು ನೆರೆಯ ಜನ ಸೇರಿ ಆತನನ್ನು ಪಾರುಮಾಡಿದೆವು. ಅವತ್ತು ಮಾಸ್ತು ಕುಂದಾಪುರ ಪಾರ್ಟಿ ಆಫೀಸಿಗೆ ಬಂದಿದ್ದರು. ಅವರಿಗೆ ಬಂದು ಹೀಗೆ ಹೀಗೆ ಆಯ್ತು ಅಂತ ಹೇಳಿದೆ. ಮಾಸ್ತು ಹೊರಟೇ ಬಿಟ್ಟರು. ನೇಣು ಹಾಕಿಕೊಳ್ಳಲು ಪ್ರಯತ್ನಿಸಿದವ ನಮ್ಮ ಯೂನಿಯನ್‌ನಲ್ಲಿರುವ ಕಾರ್ಮಿಕನೇ. ಮಾಸ್ತು ಅವನ ಕಷ್ಟ ವಿಚಾರಿಸಿ ಮಾತನಾಡಿದರು. ಅವನಿಗೆ ಏನು ಹೇಳಿದರೋ ಗೊತ್ತಿಲ್ಲ. ಆದರೆ ಅವನು ಮುಂದೆ ಸಿಕ್ಕಿದಾಗೆಲ್ಲ ಮಾಸ್ತು ನನಗೆ ಒಂದು ಮಾತ್ನ ಹೇಳಿದರು ಅದನ್ನು ನಾನು ಯಾವತ್ತು ಮರೆಯುವುದಿಲ್ಲ. ಇನ್ನುಮುಂದೆ ಎಂದೂ ಆತ್ಮಹತ್ಯೆ ಮಾಡುವುದಿಲ್ಲ ಎಂದು ಹೇಳುತ್ತಿದ್ದ.

ಆಕರ್ಷಕ ಆತ್ಮೀಯತೆ

ಯು. ದಾಸ ಭಂಡಾರಿ



ಮಾಸ್ತರು ಹೆಗಲ ಮೇಲೆ ಕೈ ಹಾಕಿ ಆದರದಿಂದ ಅತ್ಯಂತ ಕಿರಿಯ ಸಂಗಾತಿಗಳನ್ನು ಕೂಡ ಸೆಳೆದುಕೊಳ್ಳುವ ರೀತಿ ನಾನು ಮೆಚ್ಚಿದ್ದೇನೆ. ಯಾರೇ ಇರಲಿ ಅವರ ಆತ್ಮೀಯತೆ ಖುಷಿಯೆನ್ನಿಸುತ್ತದೆ.

'ಬೀಡಿಯಂತಹ ಮನೆ ಕಾರ್ಮಿಕರಿಗೆ ಪಿ.ಎಫ್ ಸೌಲಭ್ಯ ದೊರಕಿಸಿದ್ದು ಮಾಸ್ತರ ಸಾಧನೆ'


ಪೂವಪ್ಪ ಸಾಲ್ಯನ್

ನಾನು ಕೈಮಗ್ಗದ ನೇಯ್ಗೆಗಾರರ ಚಳುವಳಿಯಿಂದ ಪಾರ್ಟಿಗೆ ಬಂದವನು. 1948 ರಲ್ಲಿ ಸದಸ್ಯನಾದೆ. 1954 ರಲ್ಲಿ ಫುಲ್ ಟೈಮರ್ ಆದೆ. ನಾನು ಮೊದಲು ಮಾಸ್ಟ್ರನ್ನು ನೋಡಿದ್ದು ಅವರು ಇನ್ನು ಮಾಸ್ಟ್ರ ಉದ್ಯೋಗದಲ್ಲಿದ್ದಾಗಲೇ - ಪಾರ್ಟಿ ಕ್ಲಾಸುಗಳಲ್ಲಿ......

ಮಾಸ್ಟ್ರ ಟ್ರೇಡ್ ಯೂನಿಯನ್‌ನಲ್ಲಿ, ಕಿಸಾನ್ ಸಭಾದಲ್ಲಿ, ಪಾರ್ಟಿ ಕಟ್ಟುವುದರಲ್ಲಿ, ಸೈದ್ಧಾಂತಿಕ ಕ್ಲಾಸ್ ಮಾಡುವುದರಲ್ಲಿ ಹೀಗೆ ಎಲ್ಲದರಲ್ಲೂ ದುಡಿದು ಪಳಗಿದವರು. ಆದರೆ ನಾನು ನೋಡಿದಂತೆ ಟ್ರೇಡ್ ಯೂನಿಯನ್‌ನ ಪಂಚ್ಯಾತಿಕೆಗಳಲ್ಲಿ ಅವರನ್ನು ಮೀರಿಸಿದವರಿಲ್ಲ. ಅದರಲ್ಲೂ ಬೀಡಿ ಕೈಗಾರಿಕೆ ಕಾರ್ಖಾನೆ ಪದ್ಧತಿ ಬಿಟ್ಟು ಗೃಹ ಕೈಗಾರಿಕೆ ಆದ ಮೇಲೆ ಕಾರ್ಮಿಕರಿಗೆ ಪ್ರಾವಿಡೆಂಟ್ ಫಂಡ್ ಸೌಲಭ್ಯ ದೊರಕಿಸಿಕೊಡುವುದು ಸಾಮಾನ್ಯ ವಿಚಾರವಲ್ಲ. ಈ ಚಳುವಳಿಯಲ್ಲಿ ಹಲವರ ಕೊಡುಗೆ ಇದ್ದರೂ, ಮಾಸ್ಟ್ರ ಕೊಡುಗೆ ಇದರಲ್ಲಿ ದೊಡ್ಡದು.

ಗುಲ್ಬರ್ಗದಲ್ಲಿ ನಡೆದ ಸಿಪಿಐ(ಎಂ)ನ 15ನೇ ರಾಜ್ಯ ಸಮ್ಮೇಳನದಲ್ಲಿ





ಮಾಸ್ತು ನಿಧನರಾದ ಸುದ್ದಿ ಪಕ್ಷಕ್ಕೆ, ಪಕ್ಷದ ಹಿತೈಷಿಗಳಿಗೆ ಎಷ್ಟು ಅನಿರೀಕ್ಷಿತವಾಗಿತ್ತೋ ಅದಕ್ಕಿಂತ ಎಷ್ಟೋ ಪಟ್ಟು ಅದು ಅವರ ಕುಟುಂಬದ ಸದಸ್ಯರಿಗೆ ಆಘಾತಕರವಾಗಿತ್ತು. ನಿಜ, ಮಾಸ್ತು ತಮ್ಮ ಕುಟುಂಬದ ಸದಸ್ಯರೊಡನೆ ಕಳೆಯುತ್ತಿದ್ದ ಸಮಯ ಬಹಳ ಕಡಿಮೆ. ಆದರೆ ಆ ಅಲ್ಪ ಸಮಯವೂ ಅವರಿಗೆಲ್ಲಾ ಅಮೂಲ್ಯವಾಗಿತ್ತು, ಸ್ಫೂರ್ತಿದಾಯಕವಾಗಿತ್ತು. 'ಐಕ್ಯರಂಗ'ದ ಈ ವಿಶೇಷ ಸಂಚಿಕೆಗಾಗಿ ಪಿ. ರಾಮಚಂದ್ರರಾಯರ ಮಡದಿ, ಮಕ್ಕಳು ಹಾಗೂ ಅಳಿಯಂದಿರನ್ನು ಸಂಪರ್ಕಿಸಿದಾಗ ಇದು ನಮ್ಮ ಗಮನಕ್ಕೆ ಬಂತು. ಮಾಸ್ತ ಮಡದಿ ಶ್ರೀಮತಿ ಲೀಲಾ ರಾಮಚಂದ್ರರಾವ್‌ರೊಡನೆ 'ಐಕ್ಯರಂಗ'ದ ಶರತ್ ಚಂದ್ರ ನಡೆಸಿದ ಸಂದರ್ಶನ ಹಾಗೂ ಅವರ ಮಕ್ಕಳು, ಅಳಿಯಂದಿರ ನೆನಪುಗಳಿಂದ ಆಯ್ದ ಅಂಶಗಳು ಇಲ್ಲಿವೆ.

ಮಾಸ್ತ್ರು ಅಜಾತ ಶತ್ರು....

ಲೀಲಾ ರಾಮಚಂದ್ರರಾವ್

ನಿಮ್ಮ ಮದುವೆ ಯಾವಾಗ ಆದದ್ದು? ನಿಮ್ಮ ಊರು-ಹಿನ್ನೆಲೆ ಏನು?

● ನಮ್ಮ ಮದುವೆ ಆದದ್ದು 1956 ರಲ್ಲಿ. ನಾನು ಬೆಳೆದದ್ದು ಸೂರತ್‌ನಲ್ಲಿ. ನಮ್ಮ ಊರು ದಕ್ಷಿಣ ಕನ್ನಡ ಆದರೂ, ನಮ್ಮ ತಂದೆ ಸೂರತ್‌ನಲ್ಲಿ ಕೆಲಸ ಮಾಡುತ್ತಿದ್ದರು. ನಾವಿಬ್ಬರು ಮಕ್ಕಳು - ನಾನು, ನನ್ನ ತಮ್ಮ. ನಾನು ಇಂಟರ್‌ವರೆಗೆ ಓದಿದ್ದೆ. ನಾನು ಮದುವೆ ಆಗುವವರೆಗೆ ಇದ್ದದ್ದು ಸೂರತ್‌ನಲ್ಲೇ. ನನಗೆ ಮದುವೆ ಆಗಿ ಮಂಗಳೂರಿಗೆ ಬಂದಾಗ ಕನ್ನಡ ಓದಲು, ಬರೆಯಲು ಬರುತ್ತಿರಲಿಲ್ಲ. ಮನೆಯಲ್ಲಿ ಮಾತನಾಡುತ್ತಿದ್ದದು ಕನ್ನಡವಾದ್ದರಿಂದ ಮಾತಾಡಲು ಮಾತ್ರ ಬರುತ್ತಿತ್ತು. ನಮ್ಮ ಮದುವೆ ಆದಾಗ, ಅವರು ರೋಸಾರಿಯೋ ಹೈಸ್ಕೂಲಿನಲ್ಲಿ ಮಾಸ್ತಾಗಿದ್ದರು

ಮಾಸ್ತ ಹಿನ್ನೆಲೆ ಏನು?

● ಮಾಸ್ತ ತಂದೆ ಮಂಗಳೂರಲ್ಲೇ ಇದ್ದವರು.

ಟ್ರೈನಿಂಗ್ ಶಾಲೆಯಲ್ಲಿ ಹೆಡ್‌ಮಾಸ್ಟರ್ ಆಗಿದ್ದವರು. ಒಂಬತ್ತು ಮಕ್ಕಳಲ್ಲಿ ಮಾಸ್ತ್ರೇ ಕೊನೆಯವರು. ನಾಲ್ಕು ಜನ ಅಣ್ಣಂದಿರು ನಾಲ್ಕು ಜನ ಅಕ್ಕಂದಿರು. ಈಗ ಯಾರೂ ಇಲ್ಲ. ಇದ್ದ ಒಬ್ಬ ಅಣ್ಣ ಮಾಸ್ತು ಹೋದ ಸಮಯದಲ್ಲೇ ತೀರಿಹೋದರು. ದೊಡ್ಡ ಕುಟುಂಬ. ಆದ್ದರಿಂದ ಬಹಳ ಕಷ್ಟದ ಜೀವನ, ಊಟಕ್ಕೂ ಕಷ್ಟ ಕೆಲವೊಮ್ಮೆ. ಅವರ ಕುಟುಂಬದಲ್ಲಿ ಇವರೊಬ್ಬರೇ ಓದಿದ್ದು. ಬುದ್ಧಿವಂತ ಆಗಿದ್ದು. ಒಳ್ಳೆ ಮಾರ್ಕ್ಸ್ ಇದ್ದು ಇಂಜನಿಯರ್ ಆಗಬೇಕಂತ ಆಸೆ ಇತ್ತಂತೆ ಅವರಿಗೆ. ಆದರೆ ಬಡತನದಿಂದ ಬಿ.ಎಸ್.ಸಿ. ಓದಿ, ಬಿ.ಟಿ. ಮಾಡಿ ಹೈಸ್ಕೂಲಲ್ಲಿ ಮಾಸ್ತ್ರಾಗಿದ್ದರು. ಆಮೇಲೆ ಇಡೀ ಕುಟುಂಬವನ್ನು ಸಾಕಿದ್ದು ಅವರೇ. ಬಾಲ್ಯದಲ್ಲಿ ಎಷ್ಟೋ ಬಾರಿ ಊಟ ಇಲ್ಲದೆ ಇರಬೇಕಾಗಿತ್ತಂತೆ. ಶಾಲೆಯಿಂದ ಒಂದು ದಿನ ಬಂದಾಗ ಹಸಿವು ತಾಳಲಾರದೆ ತೆಂಗಿನ ಮರ ಹತ್ತಿ ಸೀಯಾಳ ತೆಗೆದು ಕುಡಿದು ಇದ್ದದ್ದು ಉಂಟಂತೆ. ಒಂದು ಸಲ ಹಸಿವೆಯಲ್ಲಿ ಹೀಗೆ ತೆಂಗಿನ ಮರ ಹತ್ತಿ ಬಿದ್ದದ್ದೂ ಉಂಟಂತೆ. ಮಾಸ್ತ್ರ ಓದುವ ಹುಚ್ಚು ಬಂದದ್ದು ಅವರ ಅಪ್ಪನಿಂದ. ಮಾಸ್ತ್ರ ಅಪ್ಪನಿಗೆ ಇಂಗ್ಲೀಷ್ ಕಥೆ, ಕಾದಂಬರಿಗಳನ್ನು ಓದುವ ಹವ್ಯಾಸ.

ಮಾಸ್ತ್ರ ಪುಸ್ತಕ ಪ್ರೀತಿ ನನಗೆ ಮದುವೆ ಆಗುವ ಮೊದಲೇ ಪರಿಚಯ ಆಗಿತ್ತು. ನಮ್ಮ ಮದುವೆ ನಿಶ್ಚಯ ಆದ ಮೇಲೆ, ಸೂರತ್‌ಗೆ ನನಗೆ ಎರಡು ಪುಸ್ತಕ ಕಳಿಸಿದ್ದರು. ಒಂದು ನೆಹರೂ ಅವರ ಮಗಳು ಇಂದಿರಾಗೆ ಜೈಲಿನಿಂದ ಬಂದ ಪತ್ರಗಳದ್ದು. ಇನ್ನೊಂದು ಮಾರ್ಕ್ಸ್‌ನ ಜೀವನಚರಿತ್ರೆ. ನನಗೆ ಈಗಲೂ ಸರಿಯಾಗಿ ನೆನಪಿದೆ.

ಮಾಸ್ತು ಕಮ್ಯುನಿಸ್ಟರಾಗಿದ್ದು ನಿಮಗೆ ಮದುವೆ ಮೊದಲೇ ಗೊತ್ತಿತ್ತೇ? ಮಾಸ್ತ್ರಾಗಿದ್ದಾಗಿನ ನೆನಪುಗಳು ಏನಾದರೂ?

● ಹೌದಪ್ಪ, ಅವರೇ ಹೇಳಿದ್ದರು. ರೋಸಾರಿಯೋ ಹೈಸ್ಕೂಲಿನಲ್ಲಿ ಅವರು ಭಾರಿ ಫೇಮಸ್ ಮಾಸ್ತ್ರಾಗಿದ್ದರು. ಅವರದ್ದು ಸ್ಪೆಶಲ್ ಸಬ್ಜೆಕ್ಟ್ ಅಂದರೆ ಮ್ಯಾತ್ಸ್ ಮತ್ತು ಸೈನ್ಸ್ ಮ್ಯಾತ್ಸ್(ಗಣಿತ) ಎಂದರೆ ಅವರಿಗೆ ಪ್ರಾಣ. ಎರಡು ಪುಸ್ತಕಗಳನ್ನೂ ಬರೆದಿದ್ದರು. 'ಹಿಸ್ಟರಿ ಆಫ್ ಮ್ಯಾತ್‌ಮೆಟಿಕ್ಸ್' ಅಂತ. ಅದನ್ನು ಪ್ರಿಂಟ್ ಮಾಡಲು ದುಡ್ಡಿಲ್ಲದೆ ಕೂತಿದೆ. ಇದನ್ನು ಬರೆದದ್ದು ಅವರು ಮೈಸೂರಲ್ಲಿ ಜೈಲಿನಲ್ಲಿದ್ದಾಗ. ಅವರು ಮಾಸ್ತ್ರಾಗಿದ್ದದ್ದು ಆಗಿನ ಫೇಮಸ್ ಹೈಸ್ಕೂಲಲ್ಲಿ. ಅವರ ವಿದ್ಯಾರ್ಥಿಗಳೆಲ್ಲಾ ಈಗ ದೊಡ್ಡ ದೊಡ್ಡ ಪೋಸಿಷನ್‌ನಲ್ಲಿ ಇದ್ದಾರೆ. ಒಬ್ಬ ಅವರ ವಿದ್ಯಾರ್ಥಿ ಈಗ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ದೊಡ್ಡ ಸರ್ಜನ್. ಆದರೆ ಈಗಲೂ ಅವನಿಗೆ ಅವರೆಂದರೆ ಅಪಾರ ಗೌರವ. ಮಾಸ್ತು ಅವನನ್ನು ಭೇಟಿ ಮಾಡಲು ಹೋದಾಗ, ಅವನು ನಿಂತುಕೊಂಡು ಬಿಡುತ್ತಿದ್ದ. ಮಾಸ್ತು ಅಲ್ಲಿ ಇರುವವರೆಗೆ ಮಾಸ್ತು ಹೇಳಿದರೂ ಕುಳಿತುಕೊಳ್ಳುತ್ತಿರಲಿಲ್ಲವಂತೆ. ಅವರ ಇನ್ನೊಬ್ಬ ಫೇಮಸ್ ವಿದ್ಯಾರ್ಥಿ ಸಯ್ಯದ್ ಅಂತ. ರಾಜ್ಯ ಸಭಾ ಡೆಪ್ಯುಟಿ ಸ್ಪೀಕರ್ ಆಗಿದ್ದ ನೋಡಿ. ಅವರು ಲಕ್ಷದ್ವೀಪದ ಎಂ.ಪಿ. ಇಂತಹ ವಿದ್ಯಾರ್ಥಿಗಳು ಎಷ್ಟೋ. ಅವರು ಎಷ್ಟು ಜನಪ್ರಿಯ ಮಾಸ್ತ್ರಾಗಿದ್ದರೆಂದರೆ, ಅವರು ಫುಲ್ ಟೈಮರ್ ಆಗ್ಲಿಕ್ಕೆ ಸ್ಕೂಲ್‌ನಿಂದ ರಿಸೈನ್ ಮಾಡಿದಾಗ ಅವರ ವಿದ್ಯಾರ್ಥಿಗಳು, ಬೇರೆ ಮಾಸ್ತುಗಳೆಲ್ಲಾ ಗೋಳೋ ಅಂತ ಅತ್ತು ಬಿಟ್ಟರಂತೆ. ಅವರಿಗೆ ಬೀಳ್ಕೊಡುಗೆ

ಸಮಾರಂಭದಲ್ಲಿ ಹೆಡ್ ಮಾಸ್ಟರ್, ಮ್ಯಾನೇಜ್‌ಮೆಂಟ್‌ನವರೆಲ್ಲಾ ಹೇಳಿದ್ರಂತೆ 'ಮಾಸ್ಟ್ರೇ ಇದು ನಿಮ್ಮ ಸ್ಕೂಲು. ಇನ್ನು ಯಾವಾಗಲೂ ನಿಮಗೆ ಬೇಕು ಅಂತ ಅನ್ನಿಸಿದಾಗ ಬಂದುಬಿಡಿ. ರೋಸಾರಿಯೋ ಹೈಸ್ಕೂಲ್ ಬಾಗಿಲು ನಿಮಗೆ ಯಾವಾಗಲೂ ತೆರೆದಿರುತ್ತದೆ ಅಂತ. ಮಾಸ್ಟ್ರಾಗಿದ್ದಾಗಲೂ ಅವರು ಸ್ಕೂಲ್ ಹೋದಾಗ ಬಿಟ್ಟು ಪಾರ್ಟಿ ಕೆಲಸದಲ್ಲಿ ಮುಳುಗಿರುತ್ತಿದ್ದರು. ಪಾರ್ಟಿ ಕ್ಲಾಸು, ರಾತ್ರಿ ಶಾಲೆ, ಅಲ್ಲಿ ಕ್ಲಾಸು, ಇಲ್ಲಿ ಕ್ಲಾಸು ಅಂತ. ತುಂಬಾ ಸರ್ತಿ ಪಾರ್ಟಿ ಕೆಲಸಕ್ಕೆ ಟೂರ್ ಸಹ ಮಾಡ್ತಿದ್ರು. ಮಾಸ್ಟ್ರಾಗಿದ್ದಾಗ ಅವರುಕ್ಲಾಸ್‌ನಲ್ಲಿ ಬಹಳ ಸ್ಟ್ರಿಕ್ಟ್ ಅಂತೆ. ಅವರ ವಿದ್ಯಾರ್ಥಿಗಳೆಲ್ಲಾ ಹೇಳ್ತಿದ್ರು. ಆದರೆ ಕ್ಲಾಸಿನಿಂದ ಹೊರಗೆ ಅಷ್ಟೇ ಸಲುಗೆ ವಿದ್ಯಾರ್ಥಿಗಳಿಗೆ. ಅವರು ವಿದ್ಯಾರ್ಥಿಗಳನ್ನು ಕುದ್ರೆಮುಖಕ್ಕೆ ಟ್ರೆಕ್ಕಿಂಗ್ ಕರಕೊಂಡು ಹೋಗ್ತಿದ್ರು. ಪಿಕ್‌ನಿಕ್‌ಗೆ ಕರಕೊಂಡು ಹೋಗ್ತಿದ್ರು. ಇದೇ ರೀತಿ ಒಂದು ಬಾರಿ ಎಲ್ಲೋ ಪಿಕ್‌ನಿಕ್‌ಗೆ ಹೋದಾಗ, ತಮಾಷೆಗೆ ಅವರನ್ನು ಕುತ್ತಿಗೆಯವರೆಗೆ ಮಣ್ಣಲ್ಲಿ ಹೂತು ಹಾಕಿದ್ದರಂತೆ. ಅಷ್ಟು ಸಲುಗೆ!



ಅವರು ಫುಲ್ ಟೈಮರ್ ಆದಾಗ ನೀವು ವಿರೋಧಿಸಲಿಲ್ವ? ತುಂಬಾ ಕಷ್ಟ ಆಗ್ಲಿಲ್ವ?

● ಇಲ್ಲಪ್ಪ. ಯಾಕೆ? ಅವರು ನಂಬಿಬಂದದ್ದು ಸಾಧಿಸಬೇಕಾದರೆ ಅವರಿಗೆ ತನ್ನ ಜೀವನ ಪೂರ್ತಿ ಅರ್ಪಿಸಬೇಕು ಅಂತ ಅನ್ನಿಸಿತ್ತು. ಪಾರ್ಟಿ ಸಹ ಹೇಳಿತು ಅವರಿಗೆ - ಫುಲ್‌ಟೈಮರ್ ಆಗಿ ಬನ್ನಿ ಅಂತ. ಅದಕ್ಕಿಂತ ಮೊದಲೇ ಫುಲ್‌ಟೈಮರ್ ಥರಾ ದುಡಿತಿದ್ರು. ಸ್ಕೂಲ್ ಬಿಟ್ರೆ ಅವರು ಪಾರ್ಟಿ ಕೆಲಸದಲ್ಲೇ ಮುಳಿಗಿರ್ತಿದ್ರು ಅಂತ ಹೇಳಿದ್ನಲ್ಲಾ - ಆಗಲೇ ಕಷ್ಟ ಆಗ್ತದೆ ಅಂತ ಗೊತ್ತಿತ್ತು. ಆದರೂ ನಂಬಿದ್ದು ಸಾಧಿಸಬೇಕಾದರೆ ಕಷ್ಟ ಸಹಿಸಬೇಕಲ್ಲ. ಮೊದಮೊದಲು ಕಷ್ಟ ತುಂಬಾ. ಆಗಿನ ಕಾಲದಲ್ಲಿ ಮೊದಮೊದಲಿಗೆ ಅಲೋಯೆನ್ಸ್ ಅಂತಲೇ ಇರುತ್ತಿರಲಿಲ್ಲ. ಆಮೇಲೆ 50 ರೂ. ಅಲೋಯೆನ್ಸ್ ಸಿಗುತ್ತಿತ್ತು. ಅವರು ಅಲೋಯೆನ್ಸ್ ತಂದು ನನ್ನ ಕೈಯಲ್ಲಿಟ್ಟು ಪಾರ್ಟಿ ಕೆಲಸದಲ್ಲಿ ಮುಳುಗಿರುತ್ತಿದ್ದರು. ಬಹಳ ವರ್ಷಗಳ ನಂತರ 350 ರೂ. ಆಯ್ತು. ಎಂ.ಎಲ್.ಎ ಆದ ಮೇಲಷ್ಟೇ 750 ರೂ. ಆದದ್ದು. ಮೊದಮೊದಲು ಕಷ್ಟ ಆಗುತ್ತಿತ್ತು. ಸಣ್ಣ ಪ್ರಾಯದ ನಾನು ಒಬ್ಬಳೇ ಮಕ್ಕಳು ಸಾಕಿಕೊಂಡು ಇರ ಬೇಕಾಗಿತ್ತು. ನಮಗೆ ಮೂರು ಹೆಣ್ಣು ಮಕ್ಕಳು. ಸಂಧ್ಯಾ 1957 ರಲ್ಲೇ ಹುಟ್ಟಿದ್ದಳು. ಎರಡನೇಯವಳು ಮಾಧುರಿ. ಕೊನೆಯವಳು ಉಷಾ 1969 ರಲ್ಲಿ ಹುಟ್ಟಿದ್ದು. ನಾನು ಸ್ವಲ್ಪ ಸಮಯ ಟೀಚರ್ ಆಗಿ ಕೆಲಸಮಾಡಿದೆ. ಟ್ಯೂಶನ್ ಕೊಡುತ್ತಿದ್ದೆ. ರೇಡಿಯೋ ರಿಪೇರಿ ಮಾಡುತ್ತಿದ್ದೆ.

ಆದರೆ ತುಂಬಾ ಕಷ್ಟ ಆದದ್ದು ನಮಗೆ ಅವರನ್ನು ಒಂದುವರೆ ವರ್ಷ ಜೈಲಿನಲ್ಲಿ ಹಾಕಿದಾಗ. 1965-66 ರಲ್ಲಿ. ಎಲ್ಲಾ ಕಡೆ ಒಂದೇ ದಿನ ರಾತ್ರಿ ಪಾಕಿಸ್ತಾನದ ಜತೆ ಯುದ್ಧ ಸಮಯದ ಎಮರ್ಜೆನ್ಸಿ ಬಳಸಿ ಪಾರ್ಟಿಯ ಎಲ್ಲಾ ಪ್ರಮುಖ ನಾಯಕರನ್ನು ಅರೆಸ್ಟ್ ಮಾಡ್ದುದು

ಪಾರ್ಟಿ ಸಹ ಕಷ್ಟದಲ್ಲಿತ್ತು. ಇದು ಆಗ ಹೋಂ ಮಿನಿಸ್ಟರ್ ಆಗಿದ್ದ ಗುಲ್ಜಾರಿಲಾಲ್ ನಂದರ ಐಡಿಯಾ ಅಂತೆ. ಟೈಮ್ ಕೊಟ್ಟರೆ ಎಲ್ಲಾ ಅಂಡರ್‌ಗ್ರೌಂಡ್ ಹೋಗಿಬಿಡ್ತಾರೆ ಅಂತ. ಕೆಲವು ತಿಂಗಳು ಮಂಗಳೂರಲ್ಲಿ ಇಟ್ಟಿದ್ರು. ಆಮೇಲೆ ಮೈಸೂರು ಜೈಲಿಗೆ ಕಳಿಸಿದರು. ಆಗ ಪತ್ರ ಬರುವುದು ಸಹ ತುಂಬಾ ಲೇಟ್ ಆಗ್ತಿತ್ತು. ನಾವು ಬರೆದ ಪತ್ರ, ಅವರು ಬರೆದ ಪತ್ರ ಎರಡನ್ನೂ ಪೋಲಿಸ್ ನವರು ನೋಡಿ ಪಾಸ್ ಮಾಡಿದ ಮೇಲೆ ಸಿಗ್ತಿತ್ತು. ಕೆಲವರು 'ನಿನ್ನ ಗಂಡ ಇನ್ನು ಬರೋದೆ ಇಲ್ಲ ನೋಡು' ಎಂದು ಹೇಳುವಾಗ ಹೆದರಿಕೆ ಆಗ್ತಿತ್ತು. ಪೇಪರೆಲ್ಲಾ ನೋಡ್ತಿದ್ದೆ ಈ ಬಗ್ಗೆ ಏನಾದ್ರೂ ಸುದ್ದಿ ಇದ್ಯಾ ಅಂತ. ಅವರು ಆಗ ಬರ್ದ ಪತ್ರಗಳು ಈಗಲೂ ಇವೆ.

ಇನ್ನೇನಾದ್ರೂ ನೆನಪು..........

● ನಾನು ನನ್ನ ಮೊದಲ ಓಟು ಕೊಟ್ಟಿದ್ದು ಅವರಿಗೇ. 1969 ರಲ್ಲಿ ಅವರು ಮಂಗಳೂರು ಮುನಿಸಿಪಲ್ ಕೌನ್ಸಿಲ್‌ಗೆ ನಿಂತಿದ್ದರು. ಇಲೆಕ್ಟ್ ಸಹ ಆಗಿದ್ದರು. ಅವರು ಇದ್ದಾಗ ಮನೆ ತುಂಬಾ ಜನ ಯಾವಾಗಲೂ. ಅವರನ್ನು ಹುಡುಕಿಕೊಂಡು ಬರುವವರಿಗೆ ಲೆಕ್ಕವೇ ಇಲ್ಲ. ಕೆಲವೊಮ್ಮೆ ಮನೆ ಎದುರು ಚಪ್ಪರ ಹಾಕಿ ಇಲ್ಲೇ ಕ್ಲಾಸು. ಬಂದವರಿಗೆಲ್ಲಾ ಇಲ್ಲೇ ಊಟ. ಈ ಮನೆಗೆ ಬಂದ ಮೇಲಂತೂ (1968 ರಲ್ಲಿ) ಮುಂದೆ ಜಾಗ ಇದ್ದದ್ದರಿಂದ ಎಷ್ಟೋ ಮೀಟಿಂಗ್ ಇಲ್ಲೇ ನಡೀತಿತ್ತು. ಈಗ ಮನೆ ಎಲ್ಲಾ ಖಾಲಿ ಖಾಲಿ ಕಾಣ್ತದೆ. ಅವರ ನೆನಪಾದಗಲೆಲ್ಲಾ ನೆನಪಾಗುವುದು ಅವರ ಪುಸ್ತಕಗಳು. ಮನೆಯಲ್ಲಿದ್ದಾಗಲಂತೂ ಪುಸ್ತಕಗಳಿಲ್ಲದೆ ಅವರನ್ನು ಊಹಿಸಲಿಕ್ಕೆ ಸಾಧ್ಯ ಇಲ್ಲ. ಈಜೀ ಚೇರ್‌ನಲ್ಲಿ ಕುಳಿತಾಗಲೂ, ಮಲಗಿರುವಾಗಲೂ ಕೈಯಲ್ಲೊಂದು ಪುಸ್ತಕ. ಪಕ್ಕದಲ್ಲಿ ಇನ್ನೂ ಹಲವು ಪುಸ್ತಕಗಳ ರಾಶಿ. ನನಗೂ ನನ್ನ ಮಕ್ಕಳಿಗೂ ಈ ಪುಸ್ತಕಗಳ ಬಗ್ಗೆ ಹೊಟ್ಟೆಕಿಚ್ಚು ಆಗ್ತಿತ್ತು. ಆ ಪುಸ್ತಕಗಳಿಗೆ ಇರುವ ಭಾಗ್ಯ ನಮಗೆ ಇಲ್ವಲ್ಲಾ ಅಂತ. ಅವರ ಮೊದಲ ಪ್ರೀತಿ ಪಾರ್ಟಿ. ಎರಡನೆಯದು ಪುಸ್ತಕಗಳು. ಒಂದು ಪುಸ್ತಕ ಗೆದ್ದಲು ಹಿಡಿದು ಹಾಳಾಗಿ ಹೋದಾಗ ಅವರು ಅತ್ತದ್ದು ನನಗೆ ನೆನಪಿದೆ. ಪುಸ್ತಕಗಳು ನನ್ನ ಫ್ರೆಂಡ್ಸ್ ಅಂತಿದ್ದರು. ಮಕ್ಕಳಿಗಿಂತ ಹೆಚ್ಚು ಪ್ರೀತಿ ಅವುಗಳ ಮೇಲೆ. ಎಲ್ಲಾದರೂ ಹೋದಾಗ, ವಿದೇಶಕ್ಕೆ ಹೋದಾಗಲೂ ಅವರು ತಂದದ್ದು ಬರಿಯ ಪುಸ್ತಕಗಳನ್ನು.

ಅವರು ಪಾರ್ಟಿಯ ದೊಡ್ಡ ಲೀಡರ್ ಆದ್ದರಿಂದ, ವಿರೋಧಿಗಳು ಅವರಿಗೆ ಬೆದರಿಕೆಹಾಕುವುದು, ಮನೆಯವರಿಗೆ ಕಿರುಕುಳ ಕೊಡುವುದು ಇರ್‍ತಿರಲಿಲ್ವಾ?

● ಇಲ್ಲಪ್ಪ, ಅಂಥದ್ದು ಏನೂ ಇರ್‍ಲಿಲ್ಲ. ಯಾಕಂತೀರಾ? ಅವರು ಅಜಾತಶತ್ರು. ಅವರಿಗೆ ವೈರಿಗಳಂತಲೇ ಇಲ್ಲ. ಅವರ ಪರ್ಸನಾಲಿಟಿ ಅಂತದ್ದು. ಒಂದು ಸಲ ಅವರ ಪರಿಚಯ ಆದವ್ರು ಅವರ ಮೇಲೆ ಅಭಿಮಾನ ಇಡುತ್ತಿದ್ರು. ಫ್ಯಾಕ್ಟರಿಗಳಲ್ಲಿ ಮುಷ್ಕರ ಆಗ್ತಿದ್ದಾಗ, ಭೂಮಾಲಕರ ವಿರುದ್ಧ ಭಾರಿ ಹೋರಾಟ ಆದಾಗಲೂ ಅವರಿಗೆ ಯಾರೂ ಬೆದರಿಕೆ ಹಾಕಿದ್ದಿಲ್ಲ. ಅವರ ಬದಲು ಹೋರಾಟದ ನಂತರ ಮಾತುಕತೆ ಪ್ರಶ್ನೆ ಬಂದಾಗ ಮಾಸ್ಟರಿಲ್ಲದೆ ಯಾವುದೂ ಪಂಚಾಯ್ತಿಕೆ ಇಲ್ಲ. ಅವರ ಮೇಲೆ ಮಾಲಕರಿಗೂ, ಕಾರ್ಮಿಕರಿಗೂ ಇಬ್ಬರಿಗೂ ಅಷ್ಟು ಭರವಸೆ ಇತ್ತು. ಪಂಚಾಯತಿಕೆಯಲ್ಲಿ ಮಾಸ್ಟ್ರು ಏನಾದ್ರೂ ಪರಿಹಾರ ಹೇಳಿದ ಮೇಲೆ ಮುಗಿಯಿತು. ಅದನ್ನು ಎಲ್ಲರೂ ಒಪ್ಪುತ್ತಿದ್ದು. ನಾನು

ಯಾವಾಗಲೂ ಹೇಳುತ್ತಿದ್ದೆ ಅವರು ಹೇಗೆ ಪಂಚಾಯತಿಯಲ್ಲಿ ನೀವು ಹೇಳಿದ್ದು ಮಾತು ಎಲ್ರೂ ಕೇಳ್ತಾರೆ ಅಂತ. ನಾನು ಏನಾದರೂ ಸುಳ್ಳು ಹೇಳ್ತೇನಾ! ಯಾರಿಗಾದರೂ ಕೆಟ್ಟದ್ದು ಮಾಡ್ತೆನಾ? ಆದ್ದರಿಂದ ಎಲ್ಲರೂ ಒಪ್ತಾರೆ ಅಂತ. ಅವರು ಎಂ.ಎಲ್.ಎ. ಆಗಿ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಇದ್ದಾಗ ಎಷ್ಟೋ ಭೂಮಾಲಕರು ಪ್ರಭಾವ ಬೀರಲು ಬರ್ತಿದ್ರು. ದುಡ್ಡು ಕೊಡಲಿಕ್ಕೆ ಬರ್ತಿದ್ರು. ಅವರಿಗೆಲ್ಲಾ ಜೋರು ಮಾಡಿ ಕಳಿಸ್ತಾ ಇದ್ರು. ಅವರನ್ನು ಹೆದರಿಸುವ ಧೈರ್ಯ ಯಾರಿಗೂ ಬಂದದ್ದು ನನಗೆ ಗೊತ್ತಿಲ್ಲ. ಯಾರು ಬಂದ್ರೂ ನಿನ್ನ ಬಳಿ ನ್ಯಾಯ ಇದ್ರೆ ನೀನು ಗೆಲ್ತಿಯಾ ನಿನ್ನದು ನ್ಯಾಯ ಇಲ್ಲದಿದ್ದರೆ ಸೋಲ್ತಿಯಾ ಅಂತ ಹೇಳ್ತಿದ್ರು.

ಪೋಲೀಸರದ್ದು ಏನೂ ಕಾಟ ಇರ್ಲಿಲ್ಲಾ. ಆದರೆ ಇಂಟಲಿಜೆನ್ಸ್‌ನಿಂದ ಯಾರಾದರೂ ನಮ್ಮ ಮನೆ ಸುತ್ತಮುತ್ತ ಓಡಾಡ್ತಾ ಇದ್ರು. ಮಾಸ್ತು ಹೋದಾಗಲೆಲ್ಲಾ ಅವರ ಹಿಂದೆ ಹೋಗ್ತಾ ಇದ್ರು. ಹೋದವರು ಬಂದವರನ್ನು ವಾಚ್ ಮಾಡ್ತಾ ಇದ್ರು. ಅವರಿಗೂ ಮಾಸ್ತೆಂದರೆ ಭಾರಿ ಗೌರವ. ಅವರದ್ದು ಮಾಸ್ತಿಗೆ ಪರಿಚಯ ಇರ್ತಿತ್ತು. ಅವರ ಹತ್ತಿರ ಹರಟೆ ಹೊಡಿತಿದ್ರು. ಕೆಲವೊಮ್ಮೆ ಬಸ್, ಆಟೋ ಸಿಗದಿದ್ರೆ 'ಹೇಗೂ ನಿನ್ನಕೆಲಸ ನನ್ನ ಹಿಂದೆ ಬರುವುದು. ನಿನ್ನ ಮೋಟಾರ್ ಬೈಕ್‌ನಲ್ಲಿ ನನಗೆ ಮಂಗಳೂರು ಪೇಟೆಯಲ್ಲಿ ಬಿಡು' ಅಂತ ಹೇಳಿ ಅವರ ಮೋಟಾರ್ ಬೈಕ್‌ನಲ್ಲಿ ಹಿಂದೆ ಕುಳಿತು ಹೋಗುತ್ತಿದ್ರು. ಅವರು ಅಜಾತ ಶತ್ರು.

ಅವರಿಗೆ ಯಾರದಾದ್ರೂ ಕಷ್ಟ ನೋಡ್ಲಿಕ್ಕೆ ಆಗ್ತಿರಲಿಲ್ಲ. ಕಾರ್ಮಿಕರ, ರೈತರ ಅವಸ್ಥೆ ಕಂಡು ಮರುಗುತಿದ್ರು. ನನ್ನ ಹತ್ರ ಹೇಳ್ತಿದ್ರು ಏನಾದರೂ ಸಹಾಯ ಮಾಡಬೇಕು ಅನ್ತಿದ್ರು. ಅವರು ಕೊಡುಗೈ ದಾನಿ. ಯಾರಿಗಾದ್ರೂ ಕಷ್ಟ ಅಂದ್ರೆ ಅವರು ಹೇಳಬೇಕಂತ್ಲೂ ಇಲ್ಲ. ಗೊತ್ತಾದ್ರೆ ಏನಾದ್ರೂ ತಮ್ಮ ಕೈಯಲ್ಲಿ ಆಗ ಇದ್ದದ್ದು ಎತ್ತಿ ಕೊಟ್ಟುಬಿಡ್ತಿದ್ರು. ಕೆಲವೊಮ್ಮೆ ಎಲ್ಲಿಗಾದರೂ ಹೋದಾಗ ಯಾರಿಗಾದರೂ ಕಷ್ಟ ಕಂಡರೆ ನನ್ನ ಹೆಂಡತಿ ಹತ್ರ ಹೋಗಿ ಕೇಳು ಅಂತ ಮನೆಗೆ ಕಳಿಸ್ತಿದ್ರು. ನನಗೆ ಕೆಲವೊಮ್ಮೆ ಇದು ವಿಪರೀತ ಉಭಯ ಸಂಕಟ ಆಗ್ತಿತ್ತು. ಅಷ್ಟು ಅವರಿಗೆ ಕರುಣೆ. ಪಾರ್ಟಿ ಕೆಲಸದಲ್ಲೂ ಅಷ್ಟೇ. ಹುಷಾರಿಲ್ಲ, ಇವತ್ತು ಹೋಗುವುದಿಲ್ಲ ಅಂತ ಹೇಳಿದ್ದು ನನಗೆ ಗೊತ್ತಿಲ್ಲ. ಆರೋಗ್ಯದ ಬಗ್ಗೆ ಅವರು ತಲೆಕೆಡಿಸಿಕೊಂಡದ್ದೇ ಇಲ್ಲ. ಎಲ್ಲಾದ್ರೂ ಸ್ವಲ್ಪ ಸುಸ್ತಾಗಿ ಮಲಗಿದ್ರೂ, ಯಾರಾದ್ರೂ 'ಮಾಸ್ತೇ, ಈ ಮೀಟಿಂಗ್‌ಗೆ ನೀವು ಬರಲೇಬೇಕು. ಅಲ್ಲೊಂದು ಪ್ರಾಬ್ಲಮ್ ಇದೆ. ನೀವು ಬಂದರೆ ಅದು ಇತ್ಯರ್ಥ ಆಗುವುದು' ಎಂದರೆ ಸಾಕು ಎದ್ದು ಹೊರಟು ಬಿಡುತ್ತಿದ್ದರು - ನಾವು

ಸಿಪಿಐ(ಎಂ) ಕೇಂದ್ರ ಸಮಿತಿ ಸಭೆಯಲ್ಲಿ ಮಾಸ್ತು



ಜೋರು ಮಾಡಿದರೂ ಕೇಳದೆ. ಒಂದು ಬಾರಿ ಅವರ ಸ್ಟುಡೆಂಟ್ ಡಾಕ್ಟರೊಬ್ಬ ಒತ್ತಾಯಮಾಡಿ ಶುಗರ್ ಜಾಸ್ತಿ ಆಗಿದೆ ಅಂತ ಆಸ್ಪತ್ರೆ ಸೇರಿಸಿಬಿಟ್ಟಿದ್ದ. ಅಲ್ಲೂ ಅವರನ್ನು ಹುಡುಕಿಕೊಂಡು ಬರುವವರೇ. ಅಲ್ಲೂ ಪುಸ್ತಕಗಳ ರಾಶಿ. ಅಲ್ಲಿಂದಲೂ ಒಂದುದಿನ ಹೇಳದೆ ಕೇಳದೆ ಓಡಿ ಬಂದಿದ್ದರು. ಯಾಕೆ ಅಂತ ಕೇಳಿದ್ರೆ ನಾನು ಆಸ್ಪತ್ರೆಯಲ್ಲಿ ಮಲಗಿದರೆ ಫುಲ್‌ಟೈಮರ್‌ಗಳ ತಿಂಗಳ ಅಲೋಯೆನ್ಸ್‌ಗೆ ಅರೆಂಜ್‌ಮೆಂಟ್ ಹೇಗೆ? ಅದಕ್ಕೆ ಅರೆಂಜ್‌ಮೆಂಟ್‌ಗೆ ಬಂದೆ. ಫುಲ್ ಟೈಮರ್‌ಗಳಿಗೆ ಅಲೋಯೆನ್ಸ್ ಕೊಡುವುದು ಹೇಗೆ ಅಂತ ಅವರಿಗೆ ಚಿಂತೆ ಯಾವಾಗಲೂ.

ರಾಜ್ಯ ಕಾರ್ಯದರ್ಶಿ ಆದ ಮೇಲೆ ನನ್ನನ್ನು ಬೆಂಗಳೂರಿಗೆ ಬಾ ಅಂತ ಹೇಳ್ತಾಇದ್ರು. ಬೆಂಗಳೂರಲ್ಲಿ ಇನ್ನೂ ಕಷ್ಟ. ಇಲ್ಲಿ ಎಷ್ಟೋ ಸಂದರ್ಭದಲ್ಲಿ ನಡೆದು ಹೋಗ್ತಿತ್ತು. ಬಾಡಿಗೆ ಇಲ್ಲ, ತೆಂಗಿನಕಾಯಿ, ತರಕಾರಿ ಮನೇಲೆ ಬೆಳೆದದ್ದು ಸಿಗುತ್ತಿತ್ತು. ಆದ್ರೂ ಕೆಲವೊಮ್ಮೆ ಬೇಜಾರಾಗ್ತದೆ ಅವರ ಈ ಇಷ್ಟ ಪೂರೈಸಲಿಕ್ಕೆ ಆಗ್ಲಿಲ್ಲ ಅಂತ.

ಅವರಂಥ ಲೀಡರ್ ಬಹುಶಃ ಸುಲಭದಲ್ಲಿ ಸಿಗ್ಲಿಕ್ಕೆ ಇಲ್ಲ.

○

ಸ್ನೇಹಮಯ ಮಾರ್ಗದರ್ಶಿ

"ಬಾಲ್ಯದಲ್ಲಿ ನಾವು ನಮ್ಮ ತಂದೆಯುವರೊಡನೆ ಹೆಚ್ಚು ಸಲಿಗೆಯಿಂದಿದ್ದೆವು. ಅವರು ಯಾವಾಗಲೂ ಬಹಳ ಬಿಜಿ ಆಗುತ್ತಿದ್ದುದರಿಂದಲೋ ಏನೋ ನಮಗೆ ಅವರು ಎಂದೂ ಯಾವುದೇ ಕಾರಣಕ್ಕೂ ಬಯ್ಯುವುದಾಗಲೀ ಹೊಡೆಯುವುದಾಗಲೀ ಮಾಡುತ್ತಿರಲಿಲ್ಲ" ಎಂದು ನೆನಪಿಸಿಕೊಳ್ಳುತ್ತಾರೆ. ಪಿ.ಆರ್. ರವರ ಹಿರಿಯ ಮಗಳು **ಸಂಧ್ಯಾ ಕೃಷ್ಣಮೂರ್ತಿ.**

ಅವರು ಮನೆಯಲ್ಲಿರುತ್ತಿದ್ದುದೇ ಕಮ್ಮಿ. ಬೆಳಿಗ್ಗೆ ಬೇಗನೇ ಕಾಫಿ ಕುಡಿದು ಹೋದರೆ ಬರುವುದು ರಾತ್ರಿ 11-12 ಗಂಟೆಗೇ. ಬೇರೆ ಊರಿಗೆ ಹೋದರೆ ಒಂದು ವಾರಕ್ಕೆಂದು ಹೋದವರು 10-15 ದಿನಗಳ ನಂತರವೇ ಬಂದದ್ದೂ ಇದೆ. *"ಆವಾಗಲೆಲ್ಲಾ ನಮಗೆ ಅವರು ಎಲ್ಲಿದ್ದಾರೆಂದೂ ತಿಳಿಯುತ್ತಿರಲಿಲ್ಲ. ಯಾಕೆಂದರೆ ಆವಾಗ ಫೋನ್ ಸಹಾ ಇರಲಿಲ್ಲ"* ಎಂದು ನೆನಪಿಸಿ ಕೊಳ್ಳುವ ಸಂಧ್ಯಾ ಅವರು *"ಮನೆಯಲ್ಲಿದ್ದಾಗ ನಮ್ಮ ತಂದೆಯವರು ರಾತ್ರೆ ಮಲಗುವಾಗ ನನಗೆ ಮತ್ತು ನನ್ನ ತಂಗಿಗೆ ಕಥೆ ಹೇಳಿ ಮಲಗಿಸುತ್ತಿದ್ದರು."*



ಎಂದು ಹೇಳಲೂ ಮರೆಯುವುದಿಲ್ಲ. ಸಂಧ್ಯಾರವರಿಗೆ 6 ವರ್ಷವಾಗಿದ್ದಾಗ ಪಿ.ಆರ್. ಜೈಲಿಗೆ ಕಳಿಸಲ್ಪಟ್ಟಿದ್ದರು. ಮೊದಲು ಮಂಗಳೂರು ಜೈಲಿನಲ್ಲಿ, ನಂತರ ಮೈಸೂರು ಜೈಲಿನಲ್ಲಿ. ಜೈಲಿನಿಂದ ತಾಯಿಗೆ ಬರೆಯುವ ಪತ್ರದಲ್ಲಿ ತನಗೆ ಮತ್ತು ತಂಗಿ ಮಾಧುರಿಗೆ ಯಾವುದಾದರೂ ಒಂದು ಪುಟ್ಟ ಕಥೆ ಇರುತ್ತಿತ್ತು.

ಮನೆಯಲ್ಲಿದ್ದಾಗಲೂ ರಾತ್ರೆ 12-1 ಗಂಟೆಗೆ ಜನ ಬಂದು ಅವರನ್ನು ಬೇರೆ ಬೇರೆ ಪಂಚಾಯತಿಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಯಾರು ಎಷ್ಟು ರಾತ್ರೆಗೆ

ಕರೆದರೂ ಬೇಸರಿಸದೆ ಹೋಗುತ್ತಿದ್ದರು. ಎಷ್ಟೋ ಕೌಟುಂಬಿಕ ಕಲಹಗಳು ತಮ್ಮ ತಂದೆಯುವರ ಮಧ್ಯಸ್ಥಿಕೆಯಿಂದ ಪರಿಹಾರವಾಗಿರುವುದನ್ನು ಸಂಧ್ಯಾ ಕಂಡಿದ್ದಾರೆ.

1969ರಲ್ಲಿ ಮಾಸ್ಟು ಮಂಗಳೂರಿನಲ್ಲಿ ಕೌನ್ಸಿಲರ್ ಆಗಿದ್ದರು. 1983ರಲ್ಲಿ ಉಳ್ಳಾಲದಿಂದ ಎಂ.ಎಲ್.ಎ. ಆದಾಗಲೂ, ಅವರು ಕೌನ್ಸಿಲರ್, ಎಂ.ಎಲ್.ಎ. ಆಗಿರದಿದ್ದಾಗಲೂ ಮನೆಗೆ ಬರುವ ಜನಗಳ ಸಂಖ್ಯೆಗೇನೂ ಕಡಿಮೆಯಿರಲಿಲ್ಲ. ಇದರ ನಡುವೆ ಮನೆಯ ಬಗ್ಗೆಯಾಗಲೀ, ಹೆಂಡತಿ ಮಕ್ಕಳ ಬಗ್ಗೆಯಾಗಲೀ ಯೋಚಿಸಲು ಸಮಯವೆಲ್ಲಿ?

ಆದರೂ ತಂದೆಯಾಗಿ ತನ್ನ ಜವಾಬ್ದಾರಿಯನ್ನು ಅವರು ಮರೆತಿರಲಿಲ್ಲ. *"ನಾನು ನಮ್ಮ ತಂದೆಯುವರ ಜೊತೆಯಲ್ಲಿ ದೇಶದ ಎಷ್ಟೋ ಕಡೆಗಳಿಗೆ ಹೋಗಿರುವೆನು. ಉದಾಹರಣೆಗೆ ಕನ್ಯಾಕುಮಾರಿ, ಕಲ್ಕತ್ತಾ, ಊಟಿ ಇತ್ಯಾದಿ. ಒಮ್ಮೆಯಂತೂ ನಾನು ಮತ್ತು ನನ್ನ ತಂಗಿ ಮಾಧುರಿ ಅವರ ಜೊತೆ ಡೆಲ್ಲಿಗೆ ಹೋಗುವುದಿತ್ತು. ಆದರೆ ಅವರ ಆ ಕಾರ್ಯಕ್ರಮ ರದ್ದಾಯಿತು. ಆವಾಗ ನಮಗೆ ಬೇಜಾರಾಗದಿರಲೆಂದು 10 ದಿನ ರಜೆ ಹಾಕಿ ಡೆಲ್ಲಿಗೆ ಕರೆದೊಯ್ದಿದ್ದರು"* ಎನ್ನುವ ಸಂಧ್ಯಾಗೆ ಹಿಂದಿನಿಂದಲೂ ಅವರ ಟ್ರಾವಲಿಂಗ್ ಬ್ಯಾಗ್ ಸದಾ ರೆಡಿಯಾಗಿಯೇ ಇರುತ್ತಿದ್ದುದು ಮಾತ್ರ ಚೆನ್ನಾಗಿ ನೆನಪಿದೆ. ಅದರಲ್ಲಿ ಬಟ್ಟೆಗಳಿಗಿಂತ ಜಾಸ್ತಿ ಪುಸ್ತಕಗಳನ್ನೇ ತುಂಬಿಸುತ್ತಿದ್ದರಂತೆ.


ಆಪ್ತಮಿತ್ರರೂ ಹೌದು

ಅವರ ಜೀವನದ ಕೊನೆಯ 8-9 ತಿಂಗಳಲ್ಲಿ ಅಪ್ಪನ ಜೊತೆಗೆ ಮಾತಾಡಿದ್ದು ಬಹುಶಃ 8-9 ದಿನಗಳು ಮಾತ್ರ ಎಂದು ನೀರುತುಂಬಿದ ಕಣ್ಣುಗಳಿಂದ ನೆನಪಿಸಿಕೊಳ್ಳುತ್ತಾರೆ ಅವರ ಕಿರಿಯ ಮಗಳು **ಉಷಾ.** *"ಅವರು ನನ್ನ ಅಪ್ಪ. ಮಿಗಿಲಾಗಿ ನನ್ನ ಆಪ್ತ ಮಿತ್ರರೂ ಆಗಿದ್ದರು. ನಾನೂ ಅವರೂ ಸುಮಾರು 4 ವರ್ಷಗಳ ಕಾಲ ರೂಂ ಮೇಟ್‌ಗಳಾಗಿದ್ದವು"*

ಉಷಾ ಹುಟ್ಟುವ ವೇಳೆಗೆ ರಾಮಚಂದ್ರ ರಾಯರು ಕೌನ್ಸಿಲರ್ ಆಗಿದ್ದರು. ನಂತರವೂ *"ನನಗೆ ಅವರು ಸಿಗುತ್ತಿದ್ದುದು ತುಂಬಾ ವಿರಳ. ರಿಪೋರ್ಟ್ ಕಾರ್ಡಿಗೆ ಸಹಿ ಮಾಡುವಾಗ ಅಥವಾ ಕೆಲವೊಮ್ಮೆ ಭಾಷಣ ಅಥವಾ ಪ್ರಬಂಧವನ್ನೂ ಬರೆದುಕೊಡಲು ಮಾತ್ರ. ನಾನು ಒಂಬತ್ತನೇ ತರಗತಿಯುಲ್ಲಿದ್ದಾಗ ಅವರು ಎಂ.ಎಲ್.ಎ. ಆದರು. ನಂತರ ನಮಗೆ ಸಿಗುತ್ತಿದ್ದ ಸ್ವಲ್ಪ ಸಮಯವೂ ದಕ್ಕುತ್ತಿರಲಿಲ್ಲ."* ಎನ್ನುವ ಉಷಾರವರ ನೆನಪೂ ಕೂಡಾ ಇದೇ. ಆದರೆ ಅವರ ಜೀವನಾದರ್ಶ ಈ ಎಲ್ಲಾ ಕೊರತೆಗಳನ್ನು ತುಂಬಿತ್ತು.



ಸ್ವತಃ ಬಡತನದಲ್ಲಿ ಬೆಳೆದ ರಾಮಚಂದ್ರರಾಯರ ಮನಸ್ಸು ಬಡವರನ್ನು ಕಂಡು ಕರಗುತ್ತಿತ್ತು. ಒಂದೆಡೆ ಬಡ ಕಾರ್ಮಿಕರಿಗಾಗಿ ಛಾಟಿ ಏಟುಗಳನ್ನು ತಿಂದಿದ್ದರೆ ಇನ್ನೊಂದು ಕಡೆ ಒಬ್ಬ ಕಾರ್ಮಿಕ ಅಥವಾ ರೈತನ ಕಷ್ಟ ಸುಖಗಳನ್ನು



ಮಾಸ್ತು ಮೈಸೂರಿನಲ್ಲಿ ಜೈಲಿನಲ್ಲಿದ್ದಾಗ ತಮ್ಮ ಮಕ್ಕಳಾದ
ಸಂಧ್ಯಾ ಮತ್ತು ಮಾಧುರಿಗೆ ಬರೆದ ಪತ್ರ - 19.7.1965 ರಂದು.
ಇದರಲ್ಲಿ ಒಂದು ಲೆಕ್ಕ ಹಾಗೂ ಹಲವು ಹಾಡುಗಳನ್ನು
ಬರೆದದ್ದನ್ನು ಕಾಣಬಹುದು.

ಮಾತಾಡಿಸಿಕೊಂಡು ತನ್ನಿಂದಾದ ಸಹಾಯ ಮಾಡುತ್ತಿದ್ದರು. ಉಷಾ ಈ ಕೆಳಗಿನ ಕೆಲವು ಘಟನೆಗಳನ್ನು ನೆನಪಿಸಿಕೊಳ್ಳುತ್ತಾರೆ.

"ಒಮ್ಮೆ ನಾನು ಊಟಿಯಿಂದ ಒಂದು ಒಳ್ಳೆಯ ಸ್ವೆಟರ್ ತಂದಿದ್ದೆ. ಸ್ವಲ್ಪಕಾಲ ಅದನ್ನು ಧರಿಸಿದ್ದರು. ಒಂದು ದಿನ ಅದು ಕಾಣದೇ 'ಎಲ್ಲಿ ಎಂದು ಕೇಳಿದಾಗ "ಪಾಪ ತುಂಬಾ ಚಳಿಯಿತ್ತು ಅವನ ಹತ್ತಿರ ಏನೂ ಇರಲಿಲ್ಲ. ನನ್ನತ್ರ ಎರಡು ಇತ್ತು. ಆದಕ್ಕಾಗಿ ಒಂದನ್ನು ಕೊಟ್ಟೆ". ಏನೆನ್ನುತ್ತೀರಿ?

ಮತ್ತೊಮ್ಮೆ ಅಕ್ಕ ಮಾಧುರಿ ಒಂದು ಹೊಸ ಕೊಡೆಯನ್ನು ಕೊಟ್ಟಿದ್ದಳು. ಯಾರೋ ಒಬ್ಬರು ಪಾಪದವರು ಮನೆಗೆ ಮಗಳ ಮದುವೆಗೆ ಹೇಳಲು ಬಂದಾಗ ಅದನ್ನು ದಾನ ಮಾಡಿದರು. 'ನಿನ್ನ ಮಗಳ ಮದುವೆಗೆ ಬರಲು ಆಗುವುದಿಲ್ಲ. ಆದ್ದರಿಂದ ನನ್ನ ಉಡುಗೊರೆ'.

'ಅಪ್ಪ ಒಬ್ಬರು ನಿಮಗೆ ಗಿಫ್ಟ್ ಎಂದು ಕೊಟ್ಟದ್ದನ್ನು ನೀವು ಮತ್ತೆ ಕೊಡಬಾರದು' ಎಂದು ಹೇಳಿದ ನಂತರ ನಮಗೆ ಹೇಳದಯೇ ಕೊಡುತ್ತಿದ್ದರು, ಕೇಳಿದರೆ ಮರೆತು ಬಂದೆ ಎನ್ನುತ್ತಿದ್ದರು. ದಾರಿಯಲ್ಲಿ ಯಾರಾದರೂ ಕಷ್ಟದಲ್ಲಿರುವವರನ್ನು ಕಂಡರೆ ಒಂದೋ ತಮ್ಮ ಕಿಸೆಯಲ್ಲಿದ್ದಷ್ಟು ಕೊಡುತ್ತಿದ್ದರು. ಇಲ್ಲದೇ ಹೋದಲ್ಲಿ 'ಮನೆಗೆ ಹೋಗಿ ನನ್ನ ಹೆಂಡತಿಯನ್ನು ಕೇಳು, ಕೊಡುತ್ತಾಳೆ" ಎಂದು ಕಳಿಸಿಕೊಡುತ್ತಿದ್ದರು.

97ರ ಸೆಪ್ಟೆಂಬರ್‌ನಲ್ಲಿ 500 ರೂಪಾಯಿ ಕೈಯಲ್ಲಿಟ್ಟು ದಯವಿಟ್ಟು ಕಂಪ್ಲೀಟ್ ಚೆಕ್ ಅಪ್ ಮಾಡಿಸಿ ಎಂದರೆ ಒಂದು ವಾರದ ನಂತರ ಅದರ ಬಗ್ಗೆ ಕೇಳಿದಾಗ "ಯಾರಿಗೋ ಅರ್ಜೆಂಟ್ ಆಗಿ ದುಡ್ಡು ಬೇಕಿತ್ತು, ಕೊಟ್ಟೆ" ಎಂದು ಉತ್ತರ"

ತಮ್ಮ ಜೀವಿತದ ಬಹುಶಃ ಅರ್ಧದಷ್ಟು ಭಾಗವನ್ನು ಅವರು ಬಸ್, ರೈಲುಗಳಲ್ಲೇ ಕಳೆದಿರಬೇಕು ಎನ್ನುವ ಉಷಾ ಅವರ ಕೊನೆಯ ದಿನಗಳ ಶೆಡ್ಯೂಲ್ ನೋಡಿದರೆ ನಿಮಗೂ ಆಶ್ಚರ್ಯವಾಗುತ್ತದೆ ಎನ್ನುತ್ತಾರೆ.

'ವಯಸ್ಸು 69 ಆರೋಗ್ಯ : ಡಯಾಬಿಟೀಸ್

ಶುಕ್ರವಾರ ಮಧ್ಯಾಹ್ನ ಬೆಂಗಳೂರಿನಿಂದ ಆರ್ಡಿನರಿ ಬಸ್ಸಿನಲ್ಲಿ ಮಂಗಳೂರಿಗೆ.


ರಾತ್ರಿ 10ಕ್ಕೆ ಮಂಗಳೂರು. ಮರುದಿನ ಬೆಳಿಗ್ಗೆ 8ರ ಬಸ್ಸಿಗೆ ಉಜಿರೆಗೆ. ಉಜಿರೆ ಯಿಂದ ಜೀಪಿನಲ್ಲಿ ಗುಡ್ಡದ ದಾರಿಯಲ್ಲಿ ಮುಂಡಾಜೆಗೆ. ಸಂಜೆ 4 ಗಂಟೆಗೆ ಮತ್ತೆ ಜೀಪಿನಲ್ಲಿ ಉಜಿರೆಗೆ. ನಂತರ ಮಂಗ ಳೂರು, ರಾತ್ರಿ ಬೆಂಗಳೂರಿಗೆ. ಅಲ್ಲಿಂದ ತಿರುವನಂತಪುರಕ್ಕೆ ಕಾಂ. ಚಡಯನ್‌ಗೆ ಅಂತಿಮ ಲಾಲ್ ಸಲಾಂ. ಅಲ್ಲಿಂದ ಬೆಂಗಳೂರು. ಮಂಗಳೂರಿನ ಮೂಲಕ 2 ದಿನಗಳ ನಂತರ ಬೆಳ್ತಂಗಡಿ ಕ್ಲಾಸಿಗೆ. ರಾತ್ರಿ ಬೆಂಗಳೂರಿಗೆ ಬಸ್ಸಿನಲ್ಲಿ. ಮರು ದಿನ ಸಂಜೆ 6-30ರ ಕರ್ನಾಟಕ ಎಕ್ಸ್‌ಪ್ರೆಸ್ ನಲ್ಲಿ ದಿಲ್ಲಿಗೆ. ಅದೇ ಅವರ ಕೊನೆಯ ಪ್ರಯಾಣ.

"ಅಪ್ಪಾ, ನಿಮ್ಮ ವಯಸ್ಸಿನಲ್ಲಿ ಎಲ್ಲರೂ ವಿಮಾನದಲ್ಲಿ ಪ್ರಯಾಣಿಸುತ್ತಾರೆ. ನೀವು ಮಾತ್ರ ಸೆಕೆಂಡ್ ಕ್ಲಾಸಿನಲ್ಲಿ ಅದೂ ಒಬ್ಬಂಟಿಗರಾಗಿ ಪ್ರಯಾಣಿಸುತ್ತಿದ್ದೀರಲ್ಲಾ ಏಕೆ?" ಎಂದು ಮಗಳು ಕೇಳಿದರೆ ಮಾಸ್ಟ್ರ ಉತ್ತರ "ನಮ್ಮದು ಬಡ ಪಾರ್ಟಿ, ನಾವು ವಿಮಾನದಲ್ಲಿ ಹೋಗದೇ ರೈಲಿನಲ್ಲಿ ಹೋದರೆ ಉಳಿಯುವ ಹಣದಿಂದ ಒಬ್ಬ ಕಾರ್ಯಕರ್ತನ ಒಂದು ತಿಂಗಳ ಸಂಸಾರ ನಡೆಯುತ್ತದೆ".

ಸರಳ ವ್ಯಕ್ತಿತ್ವದ ಸ್ನೇಹಮಯ ಪ್ರಭಾವ

"ನಾನು ಪಿ.ಆರ್. ರವರನ್ನು, ಅವರ ವ್ಯಕ್ತಿತ್ವದ ಬಗ್ಗೆ ಮೊದಲು ತಿಳಿದಿದ್ದು ಅವರು ಕೆ.ಆರ್. ಪುರದಲ್ಲಿ ಮೂಢನಂಬಿಕೆಗಳ ಬಗ್ಗೆ ತೆಗೆದುಕೊಂಡ ಒಂದು ಕ್ಲಾಸಿನ ಮೂಲಕ. ಅವರು ಎಲ್ಲರೊಡನೆ ಬಹಳ ಸ್ನೇಹಮಯುವಾಗಿ ಮತ್ತು ಮೃದುವಾಗಿ ಮಾತನಾಡುತ್ತಿದ್ದರು. ಮತ್ತು ಅವರುಗಳು ಕೇಳಿದ ಪ್ರಶ್ನೆಗಳಿಗೆ ಸ್ವಲ್ಪವೂ ಬೇಸರಿಸದೆ ನಗುನಗುತ್ತಾ ಉತ್ತರಗಳನ್ನು ಕೊಡುತ್ತಾ ಅಲ್ಲಿ ನೆರೆದ ಕಾರ್ಮಿಕರ ಮನಸ್ಸಿನ ಮೇಲೆ ಕಮ್ಯುನಿಸ್ಟ್ ಪಕ್ಷದ ಮ್ಯೇಲೆ ಒಂದು ಒಳ್ಳೇಯ ಅಭಿಪ್ರಾಯ ಬರುವ ಹಾಗೆ ವರ್ತಿಸುತ್ತಿದ್ದರು" ಎಂದು ಪಿ.ರಾಮಚಂದ್ರರಾವ್ ರವರ ಹಿರಿಯ ಅಳಿಯ **ಕಾಂ. ವಿ. ಕೃಷ್ಣಮೂರ್ತಿ** ನೆನಪಿಸಿಕೊಳ್ಳುತ್ತಾರೆ.

"ಅವರನ್ನು ಮೊದಲ ಬಾರಿಗೆ ನೋಡಿದಾಗ ಅವರ ಸರಳ ವ್ಯಕ್ತಿತ್ವವೇ ಮೊದಲು ನನಗೆ ಅರಿವಾದದ್ದು. ಅವರು ನಮ್ಮ ಮನೆಯಲ್ಲಿ ಸುಮಾರು 10 ವರ್ಷಗಳಿದ್ದರು. ಆವಾಗೆಲ್ಲಾ ನಾನು ಗಮನಿಸಿದ್ದೆಂದರೆ ಅವರು ತಮಗೆ ಎಷ್ಟೇ ಆಯಾಸವಾದರೂ ಸಹ ಅದನ್ನು ಲೆಕ್ಕಿಸದೆ ಪಾರ್ಟಿ ಆಫೀಸಿಗೆ ಸಮಯಕ್ಕೆ ಸರಿಯಾಗಿ ಹೋಗುತ್ತಿದ್ದರು. ಒಂದು ದಿನ ಸಹ ರಜೆ ಅಂತ ಹಾಕುತ್ತಿರಲಿಲ್ಲ. ಯಾವಾಗಲೂ ಪಾರ್ಟಿಯ ಬಗ್ಗೆ ಪಾರ್ಟಿ ಕಟ್ಟಿ ಬೆಳೆಸುವ ಬಗ್ಗೆ ಅವರು ಚಿಂತನೆ ಮಾಡುತ್ತಿದ್ದರು. ಅವರು ಕರ್ನಾಟಕದ ಹಳ್ಳಿ-ಹಳ್ಳಿಗಳನ್ನು ಸುತ್ತುತ್ತಿದ್ದರು" ಎಂದು ನೆನಪಿಸಿಕೊಳ್ಳುತ್ತಾರೆ ಕೃಷ್ಣಮೂರ್ತಿಯವರು.



ಜೀವನೋತ್ಸಾಹ, ಸ್ಫೂರ್ತಿ ತುಂಬುವ ವ್ಯಕ್ತಿತ್ವ

"ಇಂದಿಗೂ ಅವರಿಲ್ಲವೆನ್ನುವುದನ್ನು ನಂಬಲು ಸಾಧ್ಯವಾಗುತ್ತಿಲ್ಲ. ಅವರ ವಿಷಯದಲ್ಲಿ ಕಾಲ ಬಂದಾಗ ಎಲ್ಲರೂ ಹೋಗಲೇಬೇಕಾಗಿದೆ ಎಂಬ ಮಾತಿನಲ್ಲಿ ವಿಶ್ವಾಸ ಮೂಡುವುದಿಲ್ಲ. ಅಷ್ಟು ಜೀವನೋತ್ಸಾಹ, ಲವಲವಿಕೆ, ಹಿರಿಕಿರಿಯರೆಂಬ ಭೇದವಿಲ್ಲದೆ ಎಲ್ಲರನ್ನೂ ಹುರಿದುಂಬಿಸುತ್ತಿದ್ದ ವ್ಯಕ್ತಿತ್ವ" - ಇದು ಕಿರಿಯ ಅಳಿಯ **ಸೂರ್ಯನಾರಾಯಣ ಮಹೆಂದಳೆಯವರ** ನೆನಪು.

"AIDWA ಸಮ್ಮೇಳನದ ಸಮಯ. ಸಮ್ಮೇಳನದ ಪ್ರತಿನಿಧಿಯೊಬ್ಬರು ಕೊನೆಗಳಿಗೆಯಲ್ಲಿ ಕಂಪ್ಯೂಟರ್ ಬಳಸಿ ಪ್ರೆಸಂಟೇಷನ್ ಕೊಡುತ್ತೇನೆ. ಅದು ತುಂಬಾ ಪರಿಣಾಮಕಾರಿಯಾಗಿರುತ್ತದೆ ಅನ್ನುವ ಇಚ್ಛೆ ವ್ಯಕ್ತಪಡಿಸಿದರು. ಇದೊಂದು ಒಳ್ಳೆಯ

ಐಡಿಯಾ, ತಾನು ಅವರಿಗೆ ಪ್ರೋತ್ಸಾಹ ಹಾಗೂ ಸಹಕಾರ ನೀಡಬೇಕು ಅಂತ ಮನಗಂಡು ಪಿ.ಆರ್. ರಾತ್ರಿ 10 ಗಂಟೆಗೆ ಹೊರಟಿದ್ದಾರೆ. ಅಲ್ಪ ಸಮಯದಲ್ಲೇ ಎಲ್ಲೆಲ್ಲೊ ಓಡಾಡಿ ಪ್ರತಿನಿಧಿಗೆ ಬೇಕಾದುದನ್ನೆಲ್ಲ ಒದಗಿಸಿದರು. ಹೊಸದನ್ನು ಮಾಡಬೇಕೆಂಬ ಉತ್ಸುಕತೆ ಇಳಿ ವಯಸ್ಸಿನಲ್ಲೂ ಅವರಲ್ಲಿತ್ತು".

ದುಡಿಯುವ ವರ್ಗದವರಲ್ಲಿ ಅವರಿಟ್ಟಿದ್ದ ಪ್ರೀತಿಯಿಂದ ಪ್ರಭಾವಿತರಾದ ಸೂರ್ಯ ನಾರಾಯಣ ಮೆಹಂದಳೆ ಮುಂದುವರಿದು ಹೇಳುತ್ತಾರೆ - "ಅವರೊಬ್ಬ ಮಹಾನ್ ಮಾನವತಾವಾದಿ. ಎಲ್ಲರೊಂದಿಗೆ ಬತ್ತದ ಪ್ರೀತಿ...... ಅವರು ಸಂಗಾತಿಗಳಿಗೆ ಹೋರಾಡುವ ಕೆಚ್ಚನ್ನು ಕಲಿಸಿಕೊಟ್ಟಂತೆ ಪ್ರೀತಿಯನ್ನೂ ಧಾರೆ ಎರೆದಿದ್ದಾರೆ. ನನ್ನನ್ನು ಯಾವಾಗಲೂ ಸ್ನೇಹಿತನಂತೆ ಕಂಡಿದ್ದಾರೆ. ಸಿಕ್ಕಾಗಲೆಲ್ಲ ಪ್ರೋತ್ಸಾಹ ನೀಡಿದ್ದಾರೆ.......... 98 ರ ಆಗಸ್ಟ್ ಕೊನೆಯ ವಾರದಲ್ಲಿ ಬೆಳ್ತಂಗಡಿ ತಾಲೂಕು ಮುಂಡಾಜೆಯಲ್ಲಿರುವ ನಮ್ಮ ಮನೆಗೆ ಸಮಾರಂಭದಲ್ಲಿ ಭಾಗವಹಿಸಲು ಬಂದಿದ್ದರು. ಅದೇ ಉತ್ಸಾಹ, ಲವಲವಿಕೆ ಗಳಿಂದ ಎಲ್ಲರೊಂದಿಗೆ ಬೆರೆತದ್ದು, ಕೃಷಿ ಕಾರ್ಮಿಕರ ಬೆನ್ನು ತಟ್ಟಿ ಮಾತನಾಡಿಸಿದ್ದು - ಎಲ್ಲ ನೆನಪುಗಳು ನುಗ್ಗಿ ಬರುತ್ತಿವೆ. ಮುಂದೆ ಅವರು 20 ದಿನ ಬದುಕಿದ್ದರು...... ಮಂಗಳೂರಿನಲ್ಲಿ ಅಂತಿಮ ಸಂಸ್ಕಾರಕ್ಕೆ ಸೇರಿದ ಅಪಾರ ಜನಸ್ತೋಮ ನೋಡಿ ದಂಗಾಗಿ ಹೋದೆ. ಅದು ಕಾರ್ಮಿಕ ಬಂಧುಗಳಿಗೆ ಅವರು ತೋರಿದ್ದ ಪ್ರೀತಿಯ ಸಂಕೇತವಾಗಿತ್ತು......... ಅವರ ವ್ಯಕ್ತಿತ್ವದ ಔನ್ನತ್ಯ ಬೇಗನೇ ಗೊತ್ತಾಗುವಂತದ್ದಲ್ಲ. ಅವರ ಜತೆ ಏನೇನೋ ಚರ್ಚಿಸಬೇಕು, ಅವರಿಂದ ಬಹಳಷ್ಟು ತಿಳಿದುಕೊಳ್ಳಬೇಕು ಅಂದುಕೊಳ್ಳುತ್ತಿರುವಾಗಲೇ ದೂರವಾದರು. ಆದರೂ ಏನಾದರೂ ಸಾಧಿಸಬೇಕೆಂಬ ಛಲವನ್ನೂ ಸ್ಫೂರ್ತಿಯನ್ನು ಅವರು ನೀಡಿ

ಮಾಸ್ತ್ರು ಮತ್ತು ಪುಸ್ತಕಗಳು

ಮಾಸ್ತ್ರ ಪುಸ್ತಕ ಪ್ರೀತಿ ಅವರ ಸಂಪರ್ಕಕ್ಕೆ ಬಂದವರಿಗೆಲ್ಲಾ ಎದ್ದು ಕಾಣುವ ಸಂಗತಿ. ಸಹಜವಾಗಿ ಇದು ಅವರ ಕುಟುಂಬದ ಸದಸ್ಯರನ್ನು ಎಲ್ಲರಿಗಿಂತ ಹೆಚ್ಚಾಗಿ 'ಬಾಧಿಸಿದೆ'. ಆದರೆ ಇವರೆಲ್ಲಾ ಪ್ರೀತಿ ತುಂಬಿದ ಹೆಮ್ಮೆಯಿಂದಲೇ ಇದನ್ನು ನೆನಪಿಸಿಕೊಳ್ಳುತ್ತಾರೆ. "ಅವರು ನಮಗಾಗಿ ಪ್ರತ್ಯೇಕವಾಗಿ ಏನೂ ಸಾಮಾನುಗಳನ್ನು ತರದಿದ್ದರೂ ಅವರು ತಂದಿರುವ ಪುಸ್ತಕಗಳೇ ನನಗೆ ಅಪ್ಯಾಯಮಾನವಾಗಿರುತ್ತಿತ್ತು" ಎನ್ನುತ್ತಾರೆ ಸಂಧ್ಯಾ ಕೃಷ್ಣಮೂರ್ತಿ. ವಿದೇಶ ಪ್ರಯಾಣದಿಂದಲೂ ಅವರು ತರುತ್ತಿದ್ದುದು ಪುಸ್ತಕಗಳನ್ನೇ. ಇಳಿ ವಯಸ್ಸಿನಲ್ಲೂ ಪುಸ್ತಕಗಳನ್ನು 'ಹೊತ್ತು' ತರುತ್ತಿದ್ದಕ್ಕೆ ಅವರ ಹೆಂಡತಿ ಒಮ್ಮೆಗದರಿದ್ದೂ ಇದೆಯಂತೆ. "ನನಗೆ ಅವರು ತುಂಬಾ ಓದಬೇಕು ಎಂದು ತಮ್ಮ ಮಗಳ ಮೂಲಕ ಹೇಳಿಸುತ್ತಿದ್ದರು..... ಮನೆಯಲ್ಲಿ ಅವರು ಯಾವಾಗಲೂ ಪುಸ್ತಕ ಅಥವಾ ಪೇಪರ್ ಹಿಡಕೊಂಡೇ ಇರುತ್ತಿದ್ದರು" ಎನ್ನುತ್ತಾರೆ ಕೃಷ್ಣಮೂರ್ತಿ.

ಉಷಾಗಂತೂ 'ಪುಸ್ತಕಗಳ ಮೇಲೆ ಹೊಟ್ಟೆಕಿಚ್ಚಾಗು'ತ್ತಿತ್ತಂತೆ - ತಮಗಿಂತ ಪುಸ್ತಕಗಳ ಜೊತೆಯೇ ಹೆಚ್ಚು ಸಮಯ ಕಳೆಯುತ್ತಾರೆ ಎಂದು. "ನಮಗೆಲ್ಲಾ ಅವರು ಕಲಿಯಿರಿ ಎಂದೇ ಹೇಳುತ್ತಿದ್ದರು. ಯಾವುದೇ ವಿಷಯ ನಮಗೆ ಕಷ್ಟವಾಗುತ್ತಿದೆ ಎನ್ನಲು ಕೂಡದು. ಬಂದೇ ಬಿಟ್ಟಿತು ಆ ವಿಷಯದ ಮೇಲಿನ ಪುಸ್ತಕಗಳ ರಾಶಿ. ನಾನು ಕಾಲೇಜು

ಲೈಬ್ರರಿಗೆ ಹೋಗುವುದನ್ನೇ ನಿಲ್ಲಿಸಿದ್ದೆ. ಏಕೆಂದರೆ ನಮ್ಮ ಮನೆಯ ಪುಸ್ತಕ ಸಂಗ್ರಹದಲ್ಲಿ ಕೈಯಾಡಿಸಿದ್ದೇ ಆದರೆ ಯಾವುದೇ ವಿಷಯದಲ್ಲೇ ಆಗಲಿ ಪುಸ್ತಕ ಇರುತ್ತಿದ್ದವು ಎಂದು ಗ್ಯಾರಂಟಿ" ತಮ್ಮ ಮದುವೆ ನಿಶ್ಚಯವಾದಾಗ ಮಾಸ್ತು ತಮ್ಮ ಪತ್ನಿಯಾಗುವವರಿಗೆ ಎರಡು ಪುಸ್ತಕಗಳನ್ನು ಕಳಿಸಿದರಂತೆ - ಒಂದು, 'ಜವಾಹರಲಾಲ್ ನೆಹರೂರವರ `Letters to the Daughter' ಮತ್ತು ಎರಡು, ಮಾರ್ಕ್ಸ್‌ರವರ ಜೀವನ ಚರಿತ್ರೆ - ಇದು 43 ವರ್ಷಗಳ ಹಿಂದಿನ ಸನ್ನಿವೇಶದಲ್ಲಿ

"ಯಾವುದೇ ಪುಸ್ತಕವನ್ನು ಕಂಡರೂ ಅದರಲ್ಲಿ ಉಪಯುಕ್ತ ವಿಷಯಗಳಿರಬಹುದೆಂದು ಓದುತ್ತಿದ್ದರು. .... ಭಾನುವಾರ ಸಂಜೆ ನಾವಿಬ್ಬರೂ ಮೆಜೆಸ್ಟಿಕ್ ಕಡೆ ಹೋಗಿದ್ದೆವು. ರಸ್ತೆ ಬದಿಯಲ್ಲಿ ಮಾರುತ್ತಿದ್ದ ಪುಸ್ತಕದ ರಾಶಿಯಲ್ಲಿ ವಿಭಿನ್ನ ಬಗೆಯ ಪುಸ್ತಕಗಳನ್ನು ತೆಗೆದುಕೊಂಡರು. ವಿಜ್ಞಾನ, ತಂತ್ರಜ್ಞಾನಗಳ ಬಗ್ಗೆ ವಿಶೇಷ ಆಸಕ್ತಿಯನ್ನು ಹೊಂದಿದ್ದರು - ಹೆಚ್ಚು ಓದಬೇಕು, ಕಲಿತುಕೊಳ್ಳಬೇಕು ಎಂದು ಯಾವಾಗಲೂ ಹೇಳುತ್ತಿದ್ದರು" ಎಂದು ನೆನಪಿಸಿಕೊಳ್ಳುತ್ತಾರೆ ಸೂರ್ಯನಾರಾಯಣ ಮೆಹಂದಳೆ.

ನನ್ನ ಅಜ್ಜ

ನನ್ನ ಅಜ್ಜನಿಗೆ ಓದುವುದೆಂದರೆ ತುಂಬಾ ಇಷ್ಟ. ಅವರು ಮನೆಯಲ್ಲಿ ಬೇಕಾದಷ್ಟು ಪುಸ್ತಕಗಳಿಟ್ಟಿದ್ದಾರೆ. ಅದರಿಂದ ಒಂದು ಲೈಬ್ರರಿಯನ್ನು ಮಾಡಬಹುದು. ನನ್ನ ಅಜ್ಜ ಓದುವುದನ್ನು ಕಂಡು ನನ್ನ ಅಮ್ಮ ಸಮೇತ ರಾಶಿ ಪುಸ್ತಕಗಳನ್ನು ತಂದು ಓದುತ್ತಿದ್ದರು. ನನ್ನ ಅಜ್ಜ ಊರಿಗೆ ಹೋಗುವುದೆಂದರೆ ಅವರ ಬಟ್ಟೆಯ ಸೂಟ್‌ಕೇಸ್‌ನಲ್ಲಿ ಬಟ್ಟೆಯ ಬದಲಾಗಿ ಪುಸ್ತಕಗಳನ್ನು ತುಂಬಿಸುತ್ತಿದ್ದರು. ಅದನ್ನು ಹಿಡಿಯಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಅವರ ಚೀಲವು ಅವರಿಗೆ ಒಂದೇ ಸಲಕ್ಕೆ ಬರುವುದು. ಇನ್ನೊಂದು ಸಲಕ್ಕೆ ಇನ್ನೊಂದು ತಗೊಳ್ಳಬೇಕಾಗುತ್ತಿತ್ತು. ನನ್ನ ಅಜ್ಜನಿಗೆ ಯಾವತ್ತೂ ಕೋಪ ಬರುತ್ತಿರಲಿಲ್ಲ. ಆದರೆ ಅವರು ನ್ಯೂಸ್ ನೋಡುವಾಗ ಏನಾದರೂ ಉಪದ್ರ ಮಾಡಿದರೆ ಅವರಿಗೆ ತುಂಬಾ ಕೋಪ ಬರುತ್ತಿತ್ತು. ನನಗೆ ಓದುವಾಗ ಯಾವುದಾದರೂ ಪಾಠ ಕಷ್ಟವಾದರೆ ಅವರು ಅದನ್ನು ಹೇಳಿಸಿಕೊಡುತ್ತಿದ್ದರು..........

.... ನನ್ನ ಅಜ್ಜನಿಗೆ ಮೂರು ಮೊಮ್ಮಕ್ಕಳಿದ್ದಾರೆ. ಮೊದಲನೆಯವನು ಅರ್ಜುನ್, ಎರಡನೆಯವಳು ರಜನಿ, ಮೂರನೆಯವನು ಗಗನ. ನಾವು ಅವರನ್ನು ತುಂಬಾ ಪ್ರೀತಿಸುತ್ತೇವೆ. ಅವರನ್ನು ಕಳೆದುಕೊಂಡು ನಮಗೆ ತುಂಬಾ ಬೇಜಾರಾಗುತ್ತಿದೆ.

ಓ.ವಿ.ರಜನಿ
ಮೊಮ್ಮಗಳು




ದಿನಾಂಕ 15-5-1997 ರಂದು

ಮಾನ್ಯ ಶ್ರೀ ಶ್ಯಾಮರಾವ ಪ್ಯಾಟಿ ಅಧ್ಯಕ್ಷರು

ನಗರಾಭಿವೃದ್ಧಿ ಪ್ರಾಧಿಕಾರ ಗುಲಬರ್ಗಾ

ಇವರು ಪ್ರಾಧಿಕಾರದಲ್ಲಿ ಅಧ್ಯಕ್ಷರೆಂದು ನೇಮಕಗೊಂಡ ನಂತರ ಪ್ರಾಧಿಕಾರದಲ್ಲಿ ಮಾಡಿದ ಸಾಧನೆಗಳು.



1. ಗುಲಬರ್ಗಾ ನಗರಾಭಿವೃದ್ಧಿಯು ಹಿಂದೆ ಹಳೆಯದಾಗಿದ್ದ, ಸಿ.ಡಿ.ಪಿ. ಮತ್ತು ಓ.ಡಿ.ಪಿ.ಯನ್ನು ವಿಸ್ತರಿಸಿ ಅದನ್ನು ಸರಕಾರದಿಂದ ಅನುಮೋದನೆ ಮಾಡಿಕೊಂಡು ಹೊಸ ಸಿ.ಡಿ.ಪಿ ಮತ್ತು ಓ.ಡಿ.ಪಿಯನ್ನು ಅನುಷ್ಠಾನಗೊಳಿಸಲಾಯಿತು.

2. ಗುಲಬರ್ಗಾ ನಗರದಲ್ಲಿ ಪ್ರಮುಖ ಸ್ಥಳಗಳಾದ ಶ್ರೀ ಶರಣಬಸವೇಶ್ವರ ದೇವಸ್ಥಾನ ಹಾಗೂ ಸರಕಾರಿ ಆಸ್ಪತ್ರೆಯಲ್ಲಿ ಸಾರ್ವಜನಿಕರಿಗಾಗಿ ತಂಪಾದ ಕುಡಿಯುವ ನೀರಿನ ಕೇಂದ್ರಗಳನ್ನು ಸ್ಥಾಪಿಸಿ ಅನೇಕ ಸಾರ್ವಜನಿಕರಿಗೆ ಹಾಗೂ ಭಕ್ತಾದಿಗಳಿಗೆ ತಂಪಾದ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಯಿತು. ಅದರಂತೆ ಖಾಜಿ ಬಂದೇ ನವಾಜ ದರ್ಗಾದಲ್ಲಿ ತಂಪಾದ ಕುಡಿಯುವ ನೀರಿನ ಕೇಂದ್ರ ಕೂಡಾ ಸ್ಥಾಪಿಸಲು ನಿರ್ಧರಿಸಿ ಕೆಲಸ ಪ್ರಾರಂಭಿಸಲಾಗಿದೆ.

3. ಗುಲಬರ್ಗಾ ನಗರಾಭಿವೃದ್ಧಿ ಪ್ರಾಧಿಕಾರವು ಹುಟ್ಟಿನಿಂದಲೂ ಇಲ್ಲಿಯವರೆಗೆ ಬಿಡಿ ನಿವೇಶನ ಹಂಚಿಕೆ ಮಾಡದೇ ಇರದಂತಹ ಸಂದರ್ಭದಲ್ಲಿ ಸುಮಾರು 300 ಬಿಡಿ ನಿವೇಶನಗಳು ಹಂಚಿಕೆ ಮಾಡಿ ಸರಕಾರದಿಂದ ಅನುಮತಿಯನ್ನು ಪಡೆದು ಸಾರ್ವಜನಿಕರಿಗೆ ವಿತರಿಸಲಾಗಿದೆ.

4. ಗುಲಬರ್ಗಾ ನಗರದ ಮಧ್ಯಭಾಗದಲ್ಲಿ ಇದ್ದ ಬಡೇಪೂರ ಹಂತ-2ನ್ನು ಬಾಪೂಗೌಡ ದರ್ಶನಾಪೂರ ಬಡಾವಣೆಯೆಂದು ನಾಮಕರಣ ಮಾಡಿ ಸುಮಾರು 200 ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗಿದೆ.

5. ಅದರಂತೆ ದರ್ಗಾಕ್ಕೆ ಹೋಗುವ ಮುಖ್ಯ ರಸ್ತೆಯಲ್ಲಿ ಹೊಂದಿಕೊಂಡಂತೆ ಸರ್ವೆ.ನಂ 126 ಬಡಾವಣೆಕ್ಕೆ ಸರದಾರ ವಲ್ಲಭಾಯಿ ಪಟೇಲ ಬಡಾವಣೆಯೆಂದು ನಾಮಕರಣ ಮಾಡಿ ಸುಮಾರು 75 ನಿವೇಶನಗಳು ಹಂಚಿಕೆ ಮಾಡಲಾಗಿದೆ.

6. ಸಾರ್ವಜನಿಕರ ನಾಗರೀಕ ಸೌಲಭ್ಯಗಳಿಗಾಗಿ ಮೀಸಲಿಟ್ಟ ನಿವೇಶನಗಳಿಗೆ ಅರ್ಜಿಗಳನ್ನು ಸ್ವೀಕರಿಸಿ ಹಂಚಿಕೆ ಮಟ್ಟದಲ್ಲಿ ಇವೆ.

7. ಅನೇಕ ಬಡಾವಣೆಗಳಲ್ಲಿ ಲಭ್ಯವಿರುವ ಮೂಲೆ ನಿವೇಶನಗಳು ಸಾರ್ವಜನಿಕರ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗಿದೆ.

8. ಕರ್ನಾಟಕದಲ್ಲಿ ಮೂರನೇ ಸ್ಥಾನ ಹೊಂದಿ, ಗುಲಬರ್ಗಾ ನಗರವು ಅತಿ ದಟ್ಟಣೆಯಾಗಿದ್ದು ಸಾರ್ವಜನಿಕರಿಗೆ ತುಂಬಾ ಅನಾನುಕೂಲತೆ ಇರುವುದರಿಂದ, ಎಲ್ಲಾ ಲಾರಿಗಳು ಒಂದೇ ಕಡೆ ನಿಲ್ಲುವ ದೃಷ್ಟಿಯಿಂದ ಮಹಾತ್ಮಾ ಗಾಂಧಿ ಲಾರಿ ತಂಗುದಾಣದಲ್ಲಿ ಸುಮಾರು 25 ಎಕರೆ ಜಮೀನಿನಲ್ಲಿ ಸುಮಾರು 390 ನಿವೇಶನಗಳು ಹಾಗೂ ಗೋಡೌನ್‌ಗಳು ನಿರ್ಮಿಸಿ ಲಾರಿ ಮಾಲಿಕರಿಗೆ ಅವರ ಅವಶ್ಯಕತೆಗನುಸಾರವಾಗಿ ಹಂಚಿಕೆ ಮಾಡಲಾಗಿದೆ.

ಈ ಮೊದಲು ಸುಮಾರು 50 ರಿಂದ 60 ಲಕ್ಷ ಬಂಡವಾಳ ಹೊಂದಿರುವ ನಗರಾಭಿವೃದ್ಧಿ ಈಗ ಸದ್ಯ ಸುಮಾರು 2 ಕೋಟಿಯವರೆಗೆ ಬಂಡವಾಳವನ್ನು ಕ್ರೋಢೀಕರಿಸಿದೆ. ಅದರಂತೆ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳ ಕೆಲಸಗಳನ್ನು ಕೂಡಲೇ ಕೈಕೊಳ್ಳಲು ಯೋಚಿಸಿದೆ.

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27
ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್‌ರಸ್ತೆ, ಬೆಂಗಳೂರು-1

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
Printed & Published by Communist Party of India(Marxist), Karnataka State Committee.
Editor : G.N. NAGARAJ